
ಪ್ರೀತಿಯ ಸರೋಜ್ ದಾ ಇನ್ನಿಲ್ಲ

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ ೧೨ ಸಂಚಿಕೆ೭-೮ ಫೆಬ್ರುವರಿ ೧೮-೨೫, ೧೯೯೦ ರೂ ೨.೦೦



ಭಾರತ ಕಮ್ಯುನಿಸ್ಟ್ ಆಂದೋಲನದ ಅತ್ಯಂತ ಹಿರಿಯ ಅಖಿಲ-ಭಾರತ ಮುಂದಾಳುಗಳಲ್ಲಿ ಒಬ್ಬರಾಗಿದ್ದ, ಸಿ.ಪಿ.ಐ. (ಎಂ) ಪಾಲಿಟ್‌ಬ್ಯುರೋ ಸದಸ್ಯರು, ಪಶ್ಚಿಮ ಬಂಗಾಳ ರಾಜ್ಯಸಮಿತಿ ಕಾರ್ಯದರ್ಶಿಗಳೂ ಮತ್ತು ಎಡರಂಗದ ಅಧ್ಯಕ್ಷರೂ ಆಗಿದ್ದ ಕಾಮ್ರೇಡ್ ಸರೋಜ್ ಮುಖರ್ಜಿ ನಮ್ಮನ್ನಗಲಿದ್ದಾರೆ.

ಜನವರಿ 10, 1990 ಮುಂಜಾವಿನ 2.40 ರ ಹೊತ್ತಿಗೆ ಕಾಮ್ರೇಡ್ ಸರೋಜ್ ಮುಖರ್ಜಿ ತಮ್ಮ 79 ವರ್ಷಗಳ ತುಂಬು ಕ್ರಾಂತಿಕಾರಿ ಜೀವನದ ಕೊನೆಯುಸಿರೆಳೆದರು. ದೇಶದ ಕಮ್ಯುನಿಸ್ಟ್ ಆಂದೋಲನದ, ಎಡ ಪ್ರಜಾಪ್ರಭುತ್ವ ಆಂದೋಲನದ ಇತಿಹಾಸದ ಭಾಗವಾದರು.

ಬಂಗಾಳದಲ್ಲಿ ಅಕ್ಕರೆಯಿಂದ 'ಸರೋಜ್ ದಾ' (ಸರೋಜಣ್ಣ) ಎಂದು ಕರೆಯಲ್ಪಡುವ, ಕಾ॥ ಸರೋಜ್ ಮುಖರ್ಜಿ ಬಂಗಾಳದಲ್ಲಿ ಕಮ್ಯುನಿಸ್ಟ್ ಚಳುವಳಿಯ ಸ್ಥಾಪಕರಲ್ಲಿ ಒಬ್ಬರು. ಕಮ್ಯನಿಸ್ಟ್ ಚಳುವಳಿಯ ಹುಟ್ಟಿನ ದಿನಗಳಲ್ಲಿ ವಿವಿಧ ಕ್ಷೇತ್ರಗಳಿಂದ ಹಲವರನ್ನು ಕಮ್ಯುನಿಸಂನತ್ತ ಆಕರ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು. ಮಾರ್ಕ್ಸವಾದ-ಲೆನಿನ್‌ವಾದಕ್ಕೆ ಪೂರ್ಣ ಬದ್ಧರಾಗಿದ್ದ ಮತ್ತು ಸರಳ ಜೀವನ ನಡೆಸುತ್ತಿದ್ದ ಕಾ॥ಸರೋಜ್ ಮುಖರ್ಜಿ ರಾಜಕೀಯಕ್ಕೆ ಶಾಲಾಬಾಲಕನಾಗಿರುವಾಗಲೇ ಕಾಲಿಟ್ಟರು. 1911ರಲ್ಲಿ ಬಂಗಾಳದ ಬರ್ದ್ವಾನ್ ಜಿಲ್ಲೆಯಲ್ಲಿ ಹುಟ್ಟಿದ ಅವರು ಅವರ ಮಾಸ್ತರರೊಬ್ಬರ ಪ್ರಭಾವಕ್ಕೊಳಗಾಗಿ, ಸ್ವಾತಂತ್ರ ಹೋರಾಟದತ್ತ ಆಕರ್ಷಿತರಾದರು. ಬಂಗಾಳದ ಇನ್ನೊಬ್ಬ ಪ್ರಮುಖ

ಪುಟ 8ಕ್ಕೆ

ಪಾಲಿಟ್ ಬ್ಯೂರೋ ಶ್ರದ್ಧಾಂಜಲಿ

ಸರೋಜ್ ಚಿರಸ್ಮರಣೀಯರು

ಗುರಿಸಾಧನೆಗಾಗಿ ಜೀವನವನ್ನೇ ಮುಡಿಪಿಟ್ಟ, ವಿಶಾಲ ಹೃದಯಿ, ಜನನಾಯಕ ಕಾಮ್ರೇಡ್ ಸರೋಜ್ ಮುಖರ್ಜಿಯವರ ನಿಧನದಿಂದ ಸಿ.ಪಿ.ಐ.(ಎಂ) ಗೆ ಅಪಾರ ನಷ್ಟವಾಗಿದೆ ಎಂದು ಪಾಲಿಟ್ ಬ್ಯೂರೋ ತನ್ನ ಶ್ರದ್ಧಾಂಜಲಿ ಅರ್ಪಿಸುತ್ತಾ ಹೇಳಿದೆ. ಸಿ.ಪಿ.ಐ. (ಎಂ) ಗೆ ಮಾತ್ರವೇ ಅಲ್ಲ, ಸಮಸ್ತ ಎಡ ಮತ್ತು ದುಡಿಯುವ ಜನಗಳ ಆಂದೋಲನಕ್ಕೆ ಇದೊಂದು ದೊಡ್ಡ ನಷ್ಟ. ಸಮಾಜವಾದದ ಗುರಿ ಹೊಂದಿರುವ ಎಲ್ಲಾ ಭಾರತೀಯರಿಗೂ ಎಲ್ಲಾ ಕಾಲದಲ್ಲೂ ಸರೋಜ್ ಚಿರಸ್ಮರಣೀಯರು ಎಂದು ಪಿ.ಬಿ. ಈ ಧೀಮಂತ ಕಮ್ಯುನಿಸ್ಟರನ್ನು ಬಣ್ಣಿಸುತ್ತಾ ಕ್ರಾಂತಿಗೆ ಬದ್ಧರಾದ, ದೇಶಾಭಿಮಾನ, ಮತ್ತಿಂತಹುದೇ ಸದ್ಗುಣಗಳ ಆಗರವಾದ ಭಾರತದ ಕಮ್ಯುನಿಸ್ಟರ ಮೊದಲ ಪೀಳಿಗೆಗೆ ಸೇರಿದವರು ಕಾಮ್ರೇಡ್ ಸರೋಜ್ ಎಂದು ಬಾಷ್ಪಾಂಜಲಿ ಅರ್ಪಿಸಿದೆ.

ಮಾರ್ಕ್ಸ್‌ವಾದದ ಬಗ್ಗೆ ಆಳಜ್ಞಾನ, ಜೀವನವನ್ನೇ ಮುಡಿಪಿಟ್ಟ ಸೇವೆ, ಪಕ್ಷ, ಮತ್ತು ಎಡ ಪ್ರಜಾಪ್ರಭುತ್ವ ಆಂದೋಲನ ಕಟ್ಟಿ ಬೆಳೆಸುವಲ್ಲಿ ಸರೋಜ್‌ರ ಕೊಡುಗೆ ಅತ್ಯಂತ ಗಮನಾರ್ಹ.

ಪಾರ್ಟಿ ಕಾರ್ಯಕರ್ತರು, ಜನಸಾಮಾನ್ಯರೊಂದಿಗೆ ಅತ್ಯಂತ ಸ್ನೇಹಶೀಲತೆ ಅವರ ಮುಖ್ಯ ಲಕ್ಷಣವಾಗಿತ್ತು. ಪಕ್ಷದೊಳಗಿನ ಸಮರದಲ್ಲಿ ಮಾರ್ಕ್ಸ್‌ವಾದ -ಲೆನಿನ್‌ವಾದದ ರಕ್ಷಣೆಯಲ್ಲಿ, ಪರಿಷ್ಕರಣವಾದದ ವಿರುದ್ಧ ಗಟ್ಟಿ ನಿಲುವು ತಳೆದಿದ್ದರು. ಸರೋಜ್ ಆರಂಭದಿಂದಲೇ ಸಿ.ಪಿ.ಐ.(ಎಂ)ನ ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯರಾಗಿದ್ದ ಕಾಮ್ರೇಡ್ ಸರೋಜ್ ಎಡ ಪಂಥವಾದಿಗಳು ಪಶ್ಚಿಮ ಬಂಗಾಳ ಸಮಿತಿಯನ್ನು ಛಿದ್ರಗೊಳಿಸಲು ಪ್ರಯತ್ನಿಸಿದಾಗ ಅವರನ್ನು ದೂರ ಗೊಳಿಸಿ ಮಾರ್ಕ್ಸ್‌ವಾದ-ಲೆನಿನ್‌ವಾದ ಪಕ್ಷ ರಕ್ಷಿಸುವಲ್ಲಿ ದೊಡ್ಡ ಪಾತ್ರವಹಿಸಿದರು ಎಂದು ಪಿ.ಬಿ.ಶ್ರದ್ಧಾಂಜಲಿ ತಿಳಿಸಿದೆ.

ತನ್ನ ಆರೋಗ್ಯವನ್ನು ಲಕ್ಷಿಸದೆ ಪಶ್ಚಿಮ ಬಂಗಾಳ ರಾಜ್ಯ ಸಮಿತಿಯ ಕಾರ್ಯದರ್ಶಿಯ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಬಂದ ಸರೋಜ್‌ರದ್ದು ಪಕ್ಷದ ಪತ್ರಿಕೆಗಳ ಪ್ರಸಾರ ಜಾಸ್ತಿ ಮಾಡುವಲ್ಲಿಯೂ ದೊಡ್ಡ ಪಾತ್ರ.

ಸರೋಜ್‌ರವರ ನಿಧನಕ್ಕೆ ಧೀರ್ಘಸಂತಾಪ ಸೂಚಿಸುತ್ತಾ ಪಿ.ಬಿ. ಹೇಳಿಕೆ ಅವರ ಪತ್ನಿ ಕಾಂ. ಕನಕ ಮುಖರ್ಜಿ ಮತ್ತು ಕುಟುಂಬದ ಇತರ ಸದಸ್ಯರಿಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

ಸಂಪಾದಕೀಯ

ಕಾಂ. ಸರೋಜ್ ಮುಖರ್ಜಿ ಹಾಕಿದ ದಾರಿಯಲ್ಲಿ ಮುನ್ನಡೆಯುತ್ತೇವೆ

ಕಾಂ. ಸರೋಜ್ ಮುಖರ್ಜಿ ಇನ್ನಿಲ್ಲ. ಆದರೆ ಅವರು ತಮ್ಮ ಆದರ್ಶ ಜೀವನದ ಮೂಲಕ ನಮಗೆಲ್ಲಾ ಮಾರ್ಗದರ್ಶನ ನೀಡುತ್ತಾರೆ.

ಸಮಾಜವಾದದೆಡೆಗೆ ತಮ್ಮ ದೇಶವನ್ನು ಒಯ್ಯುವುದರ ಮೂಲಕ ಮಾತ್ರ ಭಾರತದಂತಹ ಬಡದೇಶದ ಜನತೆ ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಲು ಸಾಧ್ಯ ಎಂದು ಮನಗಂಡು ಭಾರತ ಸ್ವಾತಂತ್ರ ಸಂಗ್ರಾಮದಲ್ಲಿ ತನ್ನನ್ನು (ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗಲೇ ತೊಡಗಿಸಿಕೊಂಡ ಕಾಂ. ಸರೋಜ್ ಮುಖರ್ಜಿ, ಉಪ್ಪಿನ ಸತ್ಯಾಗ್ರಹ ನಡೆಸಿದ ಬೆನ್ನಲ್ಲೇ 1931 ರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದರು.

ಸ್ವಾಮಿ ವಿವೇಕಾನಂದರ ತಮ್ಮ ಕ್ರಾಂತಿಕಾರಿ ಡಾ। ಭುಪೇಂದ್ರನಾಥ್ ದತ್ತಾ ಇವರಿಂದ ಮಾರ್ಕ್ಸ್‌ವಾದ ಲೆನಿನ್‌ವಾದದೆಡೆಗೆ ಆಕರ್ಷಿಸಲ್ಪಟ್ಟ ಕಾಂ. ಸರೋಜ್ ಮುಖರ್ಜಿಯವರು ಭಾರತ ಕಮ್ಯುನಿಸ್ಟ್ ಚಳುವಳಿಯ ಸ್ಥಾಪಕರಲ್ಲೊಬ್ಬರಾದ ಕಾಂ. ಮುಝಫ್ಫರ್ ಅಹ್ಮದ್ ಕೈ ಕೆಳಗೆ ತರಬೇತಿಗೊಂಡರು. ಕಾಂ. ಹಲೀಮ್ ಮತ್ತು ಬಿನೊಯ್ ಚೌಧುರಿಯವರ ಜತೆ ಗೂಡಿ ಬಂಗಾಳದಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ದೃಢವಾಗಿ ಬೆಳೆಸುತ್ತಾ ಬಂದರು.

ಕಾಂ. ಸರೋಜ್ ಮುಖರ್ಜಿ ಒಬ್ಬ ಹಿರಿಯ ಕಮ್ಯುನಿಸ್ಟ್ ಧುರೀಣರು. ಆರಂಭದ ಕಮ್ಯುನಿಸ್ಟ್ ಹಿರಿಯರಲ್ಲಿ ಕಂಡು ಬಂದ ಹಲವು ಪ್ರತಿಭೆಗಳ ವ್ಯಕ್ತಿತ್ವ ಬೆಳೆಸಿಕೊಂಡು ಬಂದವರು. ವಿದ್ಯಾರ್ಥಿ ರಂಗ, ಕಾರ್ಮಿಕ ರಂಗ, ರೈತರಂಗ ಮತ್ತು ಪಾರ್ಟಿ ಸಂಘಟನೆಗಳಲಿ ಅವರದ್ದು ಪಳಗಿದ ಕೈ.

ಆದ ಕಾರಣ, 1980 ರಲ್ಲಿ ಕಾಂ. ಪ್ರಮೋದ್ ದಾಸಗುಪ್ತರ ಮರಣದ ನಂತರದಲ್ಲಿ ಕಾಂ. ಸರೋಜ್ ಮುಖರ್ಜಿಯವರು ಪಶ್ಚಿಮ ಬಂಗಾಳದ ರಾಜ್ಯ ಕಾರ್ಯದರ್ಶಿಯಾಗಿ ಆ ಸ್ಥಾನದಲ್ಲಿ ಎಲ್ಲಾ ರೀತಿಯಲ್ಲೂ ಸಮರ್ಥವಾಗಿ ನಡೆದು ಕೊಂಡು ಬಂದರು. ಇಂದು ಅವರ ಮರಣದ ನಂತರ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಎಲ್ಲಾ ರೀತಿಯಲ್ಲೂ ಸುದೃಢವಾಗಿ ಇನ್ನಷ್ಟು ಬೆಳೆದು ಅವರು ಹಾಕಿಕೊಟ್ಟ ಮಾರ್ಗದಲ್ಲಿ ಮುಂದುವರಿಯುವುದರಲ್ಲಿ ಸಂಶಯವಿಲ್ಲ.

ಕಾಂ. ಸರೋಜ್ ಮುಖರ್ಜಿ ಒಬ್ಬ ಪ್ರತಿಭಾವಂತ ಪತ್ರಕರ್ತ ಕೂಡಾ. ಪಕ್ಷದ ಹಲವಾರು ಪತ್ರಿಕೆಗಳನ್ನು ಸಂಪಾದಿಸಿಕೊಂಡು ಬಂದ ಕೀರ್ತಿ ಅವರದ್ದು.

ಅವರು ವಿರಳ ಮಾತಿನ ವ್ಯಕ್ತಿ. ಮಿತಭಾಷಿ. ಅತ್ಯಧಿಕ ಜವಾಬ್ದಾರಿಗಳನ್ನು ಹೊತ್ತಿರುವ ಅವರು ಯಾವಾಗಲೂ ತಮ್ಮನ್ನು ಕಾರ್ಯದಲ್ಲಿ ತೊಡಗಿಸಿಕೊಂಡಿರುತ್ತಿದ್ದರು. ಪಕ್ಷದ ಪೊಲಿಟ್ ಬ್ಯುರೋ ಸದಸ್ಯನಾಗಿ, ಸಾಮೂಹಿಕ ಕ್ರಾಂತಿಕಾರಿ ಪಕ್ಷವೊಂದರ ಪಶ್ಚಿಮ ಬಂಗಾಳದಂತಹ ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿ, ಎಡರಂಗದ ಸಮನ್ವಯ ಸಮಿತಿಯ ಅಧ್ಯಕ್ಷರಾಗಿ ಅವರು ಈ ಎಲ್ಲಾ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಿದರು.

ಪುಟ ?

ಸ್ಥಳೀಯ ಸಂಸ್ಥೆಗಳ ಚುನಾವಣೆ ರದ್ದು

ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸೆಕ್ರೆಟಾರಿಯೇಟ್ ಎಲ್ಲಾ ಸ್ಥಳೀಯ ಚುನಾವಣೆಗಳನ್ನು ಸರಕಾರಿ ನೌಕರರ ಮುಷ್ಕರ ಆರಂಭವಾದ ಕೆಲವೇ ಗಂಟೆಗಳಲ್ಲಿ ರದ್ದು ಮಾಡಿದ ಪ್ರಜಾಪ್ರಭುತ್ವ ವಿರೋಧಿ ಕ್ರಮವನ್ನು ಖಂಡಿಸುತ್ತದೆ.

ಆತುರಾತುರವಾಗಿ ಚುನಾವಣೆಗಳನ್ನು ರದ್ದು ಮಾಡಿ ರಾಜ್ಯ ಸರ್ಕಾರವು ಚುನಾವಣೆಗಳ ಫಲಿತಾಂಶದ ಬಗ್ಗೆ ತಮ್ಮ ಅಂಜಿಕೆಯನ್ನು ವ್ಯಕ್ತಪಡಿಸುವ ಜೊತೆಗೆ ಸಾವಿರಾರು ಮಂದಿ ಅಭ್ಯರ್ಥಿಗಳನ್ನು ಅನಾವಶ್ಯಕ ವೆಚ್ಚಕ್ಕೂ, ಆತಂಕಕ್ಕೂ, ಅನಿಶ್ಚಿತತೆಗೂ ಗುರಿಪಡಿಸಿದೆ. ಸುಗ್ರೀವಾಜ್ಞೆಯ ಮೂಲಕ ತಮ್ಮ ಕಾನೂನು ಬಾಹಿರ ತೀರ್ಮಾನವನ್ನು ಸಕ್ರಮಗೊಳಿಸಲು ನೋಡಿದ ಕ್ರಮವು ಸರ್ವಾಧಿಕಾರಿ ಮನೋಭಾವವನ್ನು ಸ್ಪಷ್ಟಪಡಿಸುತ್ತದೆ.

ಸೆಕ್ರೆಟಾರಿಯೇಟ್ ಈ ಎಲ್ಲಾ ಅಭ್ಯರ್ಥಿಗಳ ಖರ್ಚನ್ನು ರಾಜ್ಯ ಸರಕಾರವು ಭರ್ತಿ ಮಾಡಿಕೊಡಬೇಕೆಂದು ಕೂಡಲೇ ಈ ಚುನಾವಣೆಗಳ ದಿನಾಂಕವನ್ನು ಎಲ್ಲಾ ರಾಷ್ಟ್ರೀಯ ಮತ್ತು ರಾಜ್ಯದ ಪಕ್ಷಗಳ ಪ್ರತಿನಿಧಿಗಳನ್ನು ಕೇಳಿ ನಿರ್ಧರಿಸಬೇಕೆಂದು ಸರಕಾರವನ್ನು ಒತ್ತಾಯಿಸುತ್ತದೆ.

ಸರ್ಕಾರಿ ನೌಕರರ ಮೇಲೆ ಲಾಠಿ ಚಾರ್ಜ್

"ಸರ್ಕಾರವನ್ನು ತಲ್ಲಣಗೊಳಿಸಿದ ನೌಕರರ ಮುಷ್ಕ"ರದ ಬಗ್ಗೆ ಐಕ್ಯರಂಗ ಮುದ್ರಣಾಲಯದಲ್ಲಿರುವಾಗಲೇ ಮುಷ್ಕರವನ್ನು ಹಿಂತೆಗೆದುಕೊಳ್ಳುವ ನೌಕರರು ಸಂಘದ ಪದಾಧಿಕಾರಿಗಳ ನಿರ್ಧಾರದ ಬಗ್ಗೆ ಎಲ್ಲೆಡೆ ನೌಕರರ ಅಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ಅಷ್ಟು ಮಾತ್ರವಲ್ಲ, ಇದರಲ್ಲಿ ಸರ್ಕಾರದ ಆಡಳಿತ ಶಾಹಿ ಧೋರಣೆ, ನೌಕರರ ಹಿತಾಸಕ್ತಿಗೆ ವಿರುದ್ಧವಾಗಿ ಅವರ ಬೆನ್ನ ಹಿಂದೆ ಸಂಧಾನಕ್ಕೆ ಬರಲು ಅಖಿಲ ಭಾರತ ರಾಜ್ಯ ಸರ್ಕಾರ ನೌಕರರ ಒಗ್ಗಟ್ಟನ್ನು ಒಡೆಯಲು ನಿರಂತರ ಪ್ರಯತ್ನಿಸುತ್ತಿರುವ ಕಾಂಗ್ರೆಸ್ ಲೋಕ ಸಭಾ ಸದಸ್ಯ ಸಹಯೋಗವನ್ನು ಉಪಯೋಗಿಸಿದ್ದು ಇವೆಲ್ಲವೂ ನೌಕರರ

ಪುಟ ?

ಒಳಪುಟಗಳಲ್ಲಿ:



ಅಗಲಿದ ಕ್ರಾಂತಿಕಾರಿಗೆ ಭಾವಪೂರ್ಣ 'ಲಾಲ್ ಸಲಾಮ್!'

ಫೆಬ್ರುವರಿ 11, 1990 ಕಲ್ಕತ್ತೆಯ ಅಲಿಮುದ್ದೀನ್ ರಸ್ತೆ. ಸಿ.ಪಿ.ಐ. (ಎಂ) ರಾಜ್ಯ ಸಮಿತಿಯ ಕಚೇರಿಯಿರುವ ಜಾಗ ಸಾವಿರಾರು ಜನ ವಿವಿಧ ಜನವಿಭಾಗಗಳಿಂದ ಬಂದ ಮಹಿಳೆಯರು, ಪುರುಷರು, ಮಕ್ಕಳು, ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದ ಜನ. 60 ವರ್ಷಗಳ ಕಾಲ ರಾಜ್ಯದ ಜನಸಮೂಹಗಳ ಹೋರಾಟಗಳಲ್ಲಿ ನಿರಂತರ ಪಾತ್ರವಹಿಸಿದ್ದ, ನೇತೃತ್ವ ನೀಡಿದ್ದ ಮುಂದಾಳುವಿನ ಅಂತಿಮ ಯಾತ್ರೆಯಲ್ಲಿ ಭಾಗವಹಿಸಲು ಭಾರ ಹೃದಯದಿಂದ ನಿಂತಿದ್ದರು.

ಸಿ.ಪಿ.ಐ. (ಎಂ) ನ ಮುಖಂಡರಾದ ಶೈಲೇನ್ ದಾಸ್‌ಗುಪ್ತ, ಬಿನೋಯ್ ಚೌಧರಿ, ಬಿಮಾನ್ ಬಸು, ಅನಿಲ್ ಬಿಸ್ವಾಸ್, ರಬೀನ್ ಸೇನ್ ಮತ್ತಿತರು ಹೆಗಲು ಕೊಟ್ಟು, ಕಾಂ. ಸರೋಜ್ ಮುಖರ್ಜಿಯವರ ದೇಹವನ್ನು ಅಲಂಕೃತ 'ಕಾಂ. ಸರೋಜ್ ಮುಖರ್ಜಿ ಲಾಲ್ ಸಲಾಂ' ಎಂಬ ಫಲಕ ಹೊತ್ತ ಟ್ರಕ್‌ನಲ್ಲಿ ಇಟ್ಟರು. ರಕ್ತಕೆಂಪಿನ ಪಕ್ಷದ ಬಾವುಟ ಹೊತ್ತ 80 ಸ್ವಯಂ ಸೇವಕರು. ಅವರ ಜೊತೆಗೆ ಸರೋಜ್‌ರವರ ಭಾವಚಿತ್ರ ಹಿಡಿದ ಸ್ವಯಂಸೇವಕರು. ಹಿಂದೆ 'ಇಂಟರ್ ನ್ಯಾಷನಲ್'' ಹಾಡುತ್ತಿದ್ದ ಇಪ್ಟಾ ತಂಡ. ಅವರ ಹಿಂದೆ ಕೈಹಿಡಿದು ನಡೆಯುತ್ತಿದ್ದ ಸಿ.ಪಿ.ಐ. (ಎಂ) ಪಶ್ಚಿಮ ಬಂಗಾಳ ರಾಜ್ಯ ಸಮಿತಿಯ ಮುಖಂಡರು, ಜತೆಗೆ ಎಡ ರಂಗದ ಮುಖಂಡರು. ನಂತರ ಎರಡು ಟ್ರಕ್ಕುಗಳು, ಒಂದರಲ್ಲಿ ಪಾಲಿಟ್ ಬ್ಯೂರೋ ಸದಸ್ಯರಾದ ಇ.ಎಂ.ಎಸ್., ಜ್ಯೋತಿ ಬಸು, ಸುರ್ಜಿತ್, ಸಮರ್‌ಮುಖರ್ಜಿ, ಅಚ್ಯುತಾನಂದನ್, ಇನ್ನೊಂದರಲ್ಲಿ ಬೇರೆ ರಾಜ್ಯಗಳಿಂದ ಬಂದ ಪಕ್ಷದ ಮುಖಂಡರು. ಅಂತಿಮ ಪಯಣದುದ್ದಕ್ಕೂ ಜನತೆ ಅರ್ಪಿಸುವ ಪುಷ್ಪಗಳನ್ನು ಹೊರಲು ಇನ್ನೊಂದು ಟ್ರಕ್ಕಿನ ವ್ಯವಸ್ಥೆ ಮಾಡಬೇಕಾಯಿತು.

ಈ ಟ್ರಕ್ಕುಗಳ ಹಿಂದೆ 'ಗಣ ಶಕ್ತಿ' ಪತ್ರಿಕೆಯ ಕೆಲಸಗಾರರು. ನಂತರ ಪ್ರತಿಯೊಂದು ಜಿಲ್ಲಾ ಸಮಿತಿಯ ಬ್ಯಾನರು ಹಿಡಿದ ಕಾರ್ಯಕರ್ತರು, ಜನ ಸಮೂಹಗಳು.

ದಾರಿಯುದ್ದಕ್ಕೂ ಇಕ್ಕೆಲಗಳಲ್ಲಿ ತುಂಬಿದ ಅಗಲಿದ ಕ್ರಾಂತಿಕಾರಿಗೆ ಕೊನೆಯ ಲಾಲ್ ಸಲಾಂ ಅರ್ಪಿಸಲು ಸುವಿರಾರು ಮಂದಿ. ಶ್ರದ್ಧಾಂಜಲಿ ಅರ್ಪಿಸುವ ಕಮಾನುಗಳು ಪ್ರಖ್ಯಾತ ಹಾಡುಗಾರ ಭೂಪೇನ್ ಹಜಾರಿಕಾ ಮತ್ತಿತರ ಗಣ್ಯರು ಪುಷ್ಪಾಂಜಲಿ ಅರ್ಪಿಸಿದರು.

ಒಟ್ಟು ಎರಡು ಲಕ್ಷಕ್ಕೂ ಹೆಚ್ಚು ಮಂದಿ ಕಾಮ್ರೇಡ್ ಸರೋಜ್ ಮುಖರ್ಜಿಯವರ ಅಂತಿಮ ಪಯಣದಲ್ಲಿ ಭಾಗವಹಿಸಿದರು. 10.30 ಕ್ಕೆ ಹೊರಟ ಈ ಪಯಣ 1.30 ಕ್ಕೆ ಚಿತಾಗಾರ ತಲುಪಿತು ಸ್ವಯಂಸೇವಕರ ಭಾವಪೂರಿತ ಗೌರವರಕ್ಷೆ ಹಾಗೂ 'ಇಂಟರ್‌ನ್ಯಾಷನಲ್' ಹಾಡಿನ ಮಧ್ಯೆ ಈ ಚಾರಿತ್ರಿಕ ಹೋರಾಟಗಾರ ಜೀವ ಬೆಂಕಿಯ ಜ್ವಾಲೆಗಳಲ್ಲಿ ಕಣ್ಮರೆಯಾಯಿತು.

ಸ್ಥಳೀಯ ಸಂಶೋಧನೆಯ ಹೊಸ ಸಂಸ್ಕೃತಿಗೆ ಕರೆ

ಭಾರತೀಯ ವಿಜ್ಞಾನ ಕಾಂಗ್ರೆಸ್‌ನಲ್ಲಿ ಕೇಳಿ ಬಂದ ಕೆಲವು ದನಿಗಳು:

ಪ್ರೊಫೆಸರ್ ಯಶಪಾಲ್

(ಭಾರತೀಯ ವಿಜ್ಞಾನ ಕಾಂಗ್ರೆಸ್ 77ನೇ ಅಧಿವೇಶನದ ಅಧ್ಯಕ್ಷರು)

ಈಗ ದೊಡ್ಡ ಪ್ರಮಾಣದಲ್ಲಿ ಪ್ರಚಲಿತವಿರುವ ವಿದೇಶಿ ತಂತ್ರಜ್ಞಾನ ಮತ್ತು ಸಾಲಗಳನ್ನು ಉಪಯೋಗಿಸುವ ಸಂಸ್ಕೃತಿಯ ಬದಲು, ಹೊಸ ಸರಕುಗಳನ್ನು ಉತ್ಪಾದಿಸುವ ಆವಿಷ್ಕಾರದ ಹೊಸ ಸಂಸ್ಕೃತಿ ತರಬೇಕಾಗಿದೆ.....

ವಿಜ್ಞಾನ ನೀತಿ ನಿರೂಪಕರು ಬೌದ್ಧಿಕ ಹಕ್ಕುಗಳು ಮತ್ತು ಪೇಟೆಂಟ್‌ಗಳ ಮೇಲಿನ ಅಂತರಾಷ್ಟ್ರೀಯ ಒಪ್ಪಂದಕ್ಕೆ ಅಭಿವೃದ್ಧಿ ಹೊಂದಿದ ದೇಶಗಳ ಒತ್ತಡಕ್ಕೆ ಮಣಿದು ಸಹಿ ಹಾಕಬಾರದು. ಈ ಒತ್ತಡಕ್ಕೆ ಮಣಿದರೆ ಸಹಿ ಸ್ವಾವಲಂಬನೆ, ಅಲಿಪ್ತತೆ ಮತ್ತು ಸ್ವಾತಂತ್ರ್ಯವನ್ನು ಕಳೆದುಕೊಂಡು ನಮ್ಮದೇ ಆದ ರೀತಿಯಲ್ಲಿ ಬೆಳವಣಿಗೆ ಸಾಧಿಸುವುದು ಸಾಧ್ಯವಾಗುವುದಿಲ್ಲ...

ಪೇಟೆಂಟ್ ಕಾನೂನುಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಒಂದು ತೊಡಕು. ಈ ಪೇಟೆಂಟ್ ಕಾನೂನುಗಳಲ್ಲಿ ಬದಲಾವಣೆ ಅಗತ್ಯವಿದೆ. ಈಗಿರುವ ಕಾನೂನುಗಳು ಸಂಪೂರ್ಣವಾಗಿ ಅನ್ಯಾಯ ಕಾರಿಯಾದವು. ಅಭಿವೃದ್ಧಿ ಹೊಂದುತ್ತಿರುವ ದೇಶಗಳನ್ನು ಕೈಗಾರಿಕೆ ಮತ್ತು ತಂತ್ರ ಜ್ಞಾನದಲ್ಲಿ ಹಿಂದುಳಿಯುವಂತೆ ಮಾಡುವ ಉದ್ದೇಶವುಳ್ಳದ್ದು.

ವಿ.ಪಿ.ಸಿಂಗ್

ವಿಜ್ಞಾನದ ತಿರುಳು ಪ್ರಜಾಪ್ರಭುತ್ವದ ತಿರುಳಿನಂತೆ. ಹೊಸ ಪೀಳಿಗೆಗೆ ವೈಜ್ಞಾನಿಕವಾಗಿ ಪ್ರಶ್ನಿಸುವುದನ್ನು ಹೇಳಿಕೊಟ್ಟರೆ, ಮನುಷ್ಯನಿಗೆ ಪ್ರಯೋಜನಕಾರಿಯಾಗಬಹುದಾದ ವೈಜ್ಞಾನಿಕ ಬೆಳವಣಿಗೆ ಸಾಧ್ಯವಿದೆ...

ಡಾ। ಪಿ.ಎಂ. ಭಾರ್ಗವ

(ಸೆಲ್ಯುಲರ್ ಮತ್ತು ಮೊಲೆಕ್ಯುಲರ್ ಫೆಬ್ರುವರಿ 14ರಂದು ಜೀವ ತಂತ್ರಜ್ಞಾನದ ಕೇಂದ್ರಿಯ ಇಲಾಖೆ ಜೀನೋಮ್ ಮ್ಯಾಪಿಂಗ್ ಬಗ್ಗೆ ಕರೆದಿರುವ ಸಭೆಯಲ್ಲಿ ನಾನು ಭಾಗವಹಿಸುತ್ತಿಲ್ಲ. ಇದಕ್ಕೆ ಕಾರಣ ಅಮೇರಿಕನ್ ವಿಜ್ಞಾನಿಯನ್ನು ಈ ಸಭೆಗೆ ಕರೆದಿರುವುದು. ಈತ ಅಮೆರಿಕಾದ 3 ಶತ ಕೋಟಿ ಡಾಲರು ಜಿನೋಮ್ ಮ್ಯಾಪಿಂಗ್ ಕಾರ್ಯಕ್ರಮದಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ವ್ಯಕ್ತಿ....

ಅಮೇರಿಕ ಅವರ ಜಿನೋಮ್ ಕಾರ್ಯಕ್ರಮ ಆರಂಭಿಸುವ ಮೊದಲು ನನಮಗೆ ತಿಳಿಸಲಿಲ್ಲ. ನಾವ್ಯಾಕೆ ನಮ್ಮ ಕಾರ್ಯಕ್ರಮದ ಬಗ್ಗೆ ಅವರ ಜತೆ ಚರ್ಚೆ ನಡೆಸಬೇಕು?....

ಒಂದು ದೇಶದ ಜಿನೋಮ್ ಮ್ಯಾಪಿಂಗ್ ಮಾಹಿತಿ ಬಹಳ ನಾಜೂಕಾದ್ದು. ಆದ್ದರಿಂದ ಈ ಮ್ಯಾಪಿಂಗ್ ಕಾರ್ಯಕ್ರಮಗಳನ್ನು ಭಾರತೀಯರೇ ಅವರ ಜಾಣ್ಮೆ, ಅನುಭವದ ಆಧಾರದ ಮೇಲೆ ಮಾಡಲು ಸಾಧ್ಯವಿದೆ.

ಅಮೇರಿಕಾ ತನ್ನ ಜಿನೋಮ್-ಳ ಕಾರ್ಯಕ್ರಮದ ಮಾಹಿತಿಯನ್ನು ಯಾರೊಂದಿಗೂ ಹಂಚಿಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಕಾರ್ಯಕ್ರಮದಲ್ಲಿ ಹಣತೊಡಗಿಸಿದರೆ ಮಾತ್ರ ಈ ಮಾಹಿತಿಯನ್ನು ಬೇರೆಯುವರಿಗೆ ಕೊಡಬಹುದು.

ಜಿನೋಮ್ ಕಾರ್ಯಕ್ರಮವನ್ನು ಭಾರತ ತೆಗೆದುಕೊಳ್ಳದಿದ್ದರೆ ಗಂಭೀರ ಪರಿಣಾಮಗಳಿವೆ ಮತ್ತು ಅದರ ವೆಚ್ಚ ಏರುತ್ತಾ ಹೋಗುತ್ತದೆ.

ಮಾನವ ಜಿನೋಮ್ ಮ್ಯಾಪಿಂಗ್ ಕಾರ್ಯಕ್ರಮವೆಂದರೇನು?

ಪ್ರತಿಯೊಂದು ಜೀನ್ (ವಂಶಾಣು) ಬಗ್ಗೆ ಮಾಹಿತಿ ಸಂಗ್ರಹಣೆ ಈ ಮಾಹಿತಿ ಮಾನವ ಶರೀರದ ನಕಾಶೆ (ಜೆನೆಟಿಕ್ ಮ್ಯಾಪ್) ತಯಾರಿಸಲು ಪ್ರಯೋಜನವಾಗುತ್ತದೆ.

ವಿಧಾನ ಸಭಾ ಚುನಾವಣೆಗಳಿಗೆ ಸಿ.ಪಿ.ಐ. (ಎಂ) ಅಭ್ಯರ್ಥಿಗಳು

ಬಿಹಾರದ 324 ಸ್ಥಾನಗಳಲ್ಲಿ 16 ಕ್ಕೆ ಸಿ.ಪಿ.ಐ. (ಎಂ) ಸ್ಪರ್ಧಿಸುತ್ತಿದೆ. ಇವರಲ್ಲಿ ಒಬ್ಬರು ಮಹಿಳೆ.

ಮಧ್ಯ ಪ್ರದೇಶದ 324 ಸ್ಥಾನಗಳಲ್ಲಿ ಇಂದೂರ್ ಭಿಲ್ಲಾ ಸೇರಿ ಒಟ್ಟು 8 ಸ್ಥಾನಗಳಲ್ಲಿ ನಮ್ಮ ಅಭ್ಯರ್ಥಿಗಳಿದ್ದಾರೆ. ಎರಡು ಗಿರಿಜನ ಮೀಸಲು ಸ್ಥಾನಗಳು. ಮಹಾರಾಷ್ಟ್ರದ 288 ಸ್ಥಾನಗಳಲ್ಲಿ 12 ರಲ್ಲಿ ಸಿ.ಪಿ.ಐ. (ಎಂ) ಸ್ಪರ್ಧೆಯಿದೆ. ಪ್ರಗತಿಪರ ಪ್ರಜಾರಂಗದ ಅಂಗವಾಗಿ ಸಿ.ಪಿ.ಐ. (ಎಂ) ಸ್ಪರ್ಧಿಸುತ್ತಿದೆ. ರಾಜಧಾನಿ ಮುಂಬೈಯಲ್ಲಿ ಎರಡು ಕಡೆ ಆದಿವಾಸಿ ಆಂದೋಲನದ ಠಾಣೆ ಜಿಲ್ಲೆಯಲ್ಲಿ ಎರಡು ಹಾಗೂ ಇತರ ಎಂಟು ಜಿಲ್ಲೆಗಳಲ್ಲಿ. ಇವುಗಳಲ್ಲಿ 3 ಗಿರಿಜನ ಮೀಸಲು ಕ್ಷೇತ್ರದ ಎರಡು ಹರಿಜನ ಮೀಸಲು ಕ್ಷೇತ್ರ..

ರಾಜಸ್ಥಾನ 200 ಸೀಟುಗಳಲ್ಲಿ 19 ಕ್ಕೆ ಸ್ಪರ್ಧಿಸುತ್ತಿದೆ. ಉದಯ್‌ಪುರ, ಜಯಪುರ, ಅಜ್ಮೀರ್ ನಂತರ ಪ್ರಮುಖ ನಗರಗಳಲ್ಲದೆ ಪ್ರಮುಖ ಜಿಲ್ಲೆಗಳಲ್ಲಿ ಸಿ.ಪಿ.ಐ. (ಎಂ) ಅಭ್ಯರ್ಥಿಗಳು ಕಣದಲ್ಲಿದ್ದಾರೆ. 3 ಗಿರಿಜನ ಮೀಸಲು ಕ್ಷೇತ್ರಗಳು. ಒರಿಸ್ಸಾದ 147 ರಲ್ಲಿ 3 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದ್ದಾರೆ.

ಹಿಮಾಚಲ ಪ್ರದೇಶದ 68 ರಲ್ಲಿ 9 ಸ್ಥಾನಗಳಲ್ಲಿ ಕಣದಲ್ಲಿದ್ದಾರೆ. ಇವುಗಳಲ್ಲಿ ಎರಡು ಗಿರಿಜನ ಮೀಸಲು ಕ್ಷೇತ್ರ.

ಪಾಂಡಿಚೇರಿಯಲ್ಲಿ ಎರಡು ಕಡೆ. ಮಣಿಪುರದಲ್ಲಿ ಒಂದು ಸ್ಥಾನದಲ್ಲಿ ಸಿ.ಪಿ.ಐ. (ಎಂ) ಸ್ಪರ್ಧಿಸುತ್ತಿದೆ.

ಸಂಪಾದಕೀಯ

......ಪುಟ 1 ರಿಂದ

ಶಿಸ್ತಿನ ಬಗ್ಗೆ ಬಹಳ ಕಟ್ಟು ನಿಟ್ಟು ಕಾಂ. ಸರೋಜ್ ಮುಖರ್ಜಿ. ಈ... ದಲ್ಲಿ ಅವರು ಯಾರಿಗೂ ಉದಾರತೆ ತೋರಿದವರಲ್ಲ.

ಕಾಂ. ಜ್ಯೋತಿ ಬಸು ಹೇಳಿದಂತೆ ಕಾಂ. ಸರೋಜ್ ಮುಖ... ಸಂಯುಕ್ತ ರಂಗದ ನಿರ್ಮಾಪಕರಲ್ಲಿ ಪ್ರಮುಖರು. ಸಂಯುಕ್ತ ರಂ... ಸಂಯುಕ್ತ ಕಾರ್ಯಾಚರಣೆ ಕಮ್ಯುನಿಸ್ಟ್ ಚಳುವಳಿಯ ಪ್ರಬಲ ಮುನ್ನ... ಮುಖ್ಯ. ಇದನ್ನು ದಕ್ಷತೆಯಿಂದ ಬಳಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ರಾಷ್ಟ್ರೀಯ ಪಕ್ಷವಾಗಿ ಕಟ್ಟಿ ಬೆಳೆಸುವ ದಾರಿಯನ್ನು ಅವರು ತೋರಿ ಕೊಟ್ಟ...

ವಿದೇಶಗಳಲ್ಲಿ ವಿಶೇಷವಾಗಿ ಪೂರ್ವ ಯುರೋಪಿನಲ್ಲಿ ಸಮಾಜವಾದಿ ಕೆಲವೊಂದು ಕ್ಲಿಷ್ಟ ಬೆಳವಣಿಗೆಗಳನ್ನು ಆಧರಿಸಿ ಸಾಮ್ರಾಜ್ಯ ಶಾಹಿಗಳು, ಶಾಹಿಗಳು ಸಮಾಜವಾದದ ಮೇಲೆ ಮಾರ್ಕ್ಸ್‌ವಾದ-ಲೆನಿನ್‌ವಾದದ ನಡೆಡುತ್ತಿರುವ ತೀವ್ರ ದಾಳಿಯ ಈ ಕಾಲದಲ್ಲಿ ಕಾಂ. ಸರೋಜ್‌ಮುಖ... ಜೀವನ ದರ್ಶನ ನಮಗೆಲ್ಲರಿಗೂ ಸ್ಫೂರ್ತಿಯ ಸೆಲೆ.

ಭಾರತದಂತಹ ದೇಶದ ಜನತೆಯ ಸಮಸ್ಯೆಗಳ ಮೂಲಭೂತ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಕಾರ್ಮಿಕ ವರ್ಗ ರೈತಾಪಿ ವರ್ಗದ ಆಧರದ ಮೇಲೆ ಸಧ್ಯದ ಬಂಡವಾಳ ಶಾಹಿ-ಭೂಮಾಲಿಕ ವರ್ಗಗಳು, ಬಂಡವಾಳಶಾಹಿ ನೇತೃತ್ವದ ಪ್ರಜಾಪ್ರಭುತ್ವದಿಂದ ದೇಶವನ್ನು ಜನತಾ ಪ್ರ... ದತ್ತ ಒಯ್ಯುವ, ಅದನ್ನು ಸಾಧಿಸಿ ಸಮಾಜವಾದಿ ಸಮಾಜ ವ್ಯ... ಮುಂದುವರಿಯುವುದೊಂದೇ ದಾರಿ. ಸರೋಜ್‌ರಂತವರು ಹಾಕಿಕೊ... ದಾರಿಯಲ್ಲಿ ಮುಂದುವರಿಯೋಣ.

ಇದೇ ನಾವು ಕಾಂ. ಸರೋಜ್ ಮುಖರ್ಜಿಯವರಿಗೆ ಸಲ್ಲಿ... ಶ್ರದ್ಧಾಂಜಲಿ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿ... ಸರೋಜ್ ಮುಖರ್ಜಿಯವರಿಗೆ ಹೃತ್ಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸುತ್ತ...

ಸಂತಾಪ ಸಂದೇಶಗಳು

ಸಿ.ಪಿ.ಐ. (ಎಂ) ಕೇಂದ್ರ ಸಮಿತಿಗೆ ಕಾಂ.ಸರೋಜ್‌ಮುಖರ್ಜಿಯವರ ನಿಧನದ ಬಗ್ಗೆ ಹಲವಾರು ಸಂತಾಪ ಸಂದೇಶಗಳು ಬಂದಿವೆ. ಚೀಣ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಅಂತರ್ರಾಷ್ಟ್ರೀಯ ವಿಭಾಗ, ಜಪಾನೀ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಸ್ಥಾಯೀ ಅಧ್ಯಕ್ಷ ಮಂಡಳಿಯ ಸದಸ್ಯ, ಬಾಂಗ್ಲಾದೇಶ್ ಕಮ್ಯುನಿಸ್ಟ್ ಪಕ್ಷದ ಪ್ರಧಾನ ... ದರ್ಶಿ, ಸಿ.ಪಿ.ಐ. ಕೇಂದ್ರ ಸೆಕ್ರೆಟ... ಭಾರತದಲ್ಲಿ ಸೋವಿಯೆತ್ ... ಜರ್ಮನ್ ಗಣತಂತ್ರ ಮತ್ತು ... ರಿಯಾ ಜನತಾ ಗಣತಂತ್ರದ ರ... ಗಳು, ಭಾರತದಲ್ಲಿ ಆಫ್ರಿಕಾ ... ಕಾಂಗ್ರೆಸ್ ನ ಮುಖ್ಯ ಪ್ರತಿನಿಧಿ, ... ಟ್ನಾಂ ಕಮ್ಯುನಿಸ್ಟ್ ಪಕ್ಷದ ... ಸಮಿತಿಯ ವಿದೇಶ ವ್ಯ... ಆಯೋಗ ಮತ್ತು ಭಾರತದಲ್ಲಿ ... ಟ್ನಾಂ ರಾಯಭಾರಿ ಸಂತಾಪ ಕಳುಹಿಸಿದವರಲ್ಲಿ ಪ್ರಮುಖರು.

ಜನ ವಿಜ್ಞಾನ ಕಾಂಗ್ರೆಸ್ ಬೆಂಗಳೂರಿನಲ್ಲಿ

ಅಖಿಲ ಭಾರತ ಜನವಿಜ್ಞಾನ ಜಾಲ, ವಿವಿಧ ರಾಜ್ಯಗಳಲ್ಲಿ ಕೆಲಸ ಮಾಡುತ್ತಿರುವ ಜನವಿಜ್ಞಾನ ಚಳುವಳಿ ಸಂಘಟನೆಗಳ ಕೆಲಸವನ್ನು ಕ್ರೋಢಿಕರಿಸುತ್ತಿರುವ ಸಂಸ್ಥೆ. ಈ ಕೇಂದ್ರಗಳಲ್ಲಿ ಜನ ವಿಜ್ಞಾನ ಕಾಂಗ್ರೆಸ್ ನಡೆಸುತ್ತದೆ. ಈ ವರ್ಷದ 3 ನೇ ಜನ ವಿಜ್ಞಾನ ಕಾಂಗ್ರೆಸ್ ಮಾರ್ಚ್ 8ರಿಂದ 11ರವರೆಗೆ ನಡೆಯುತ್ತದೆ. ಈ ಕಾಂಗ್ರೆಸ್‌ಗೆ ಸುಮಾರು 25ಕ್ಕೂ ಹೆಚ್ಚು ಜನ ವಿಜ್ಞಾನ ಸಂಘಟನೆಗಳು ತಮ್ಮ ಪ್ರತಿನಿಧಿಗಳನ್ನು ಕಳಿಸುತ್ತವೆ.

ಬೆಂಗಳೂರಿನ ಅಧಿವೇಶನಕ್ಕೆ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಆತಿಥೇಯ ಸಂಘಟನೆ/ ಜನ ವಿಜ್ಞಾನ ಕಾಂ... ಉದ್ಘಾಟನಾ, ಮತ್ತು ಸಮಾ... ಸಾಮಾನ್ಯ ಸಮಾವೇಶಗಳಲ್ಲದೆ ... ವಿಷಯಗಳಲ್ಲಿ-ಆರೋಗ್ಯ, ಸಾಕ್ಷರತೆ ... ವಿಜ್ಞಾನ ಪ್ರಚಾರ ಮತ್ತು ಸ್ವಾ... ಒಂದೇ ಕಾಲಕ್ಕೆ ನಡೆಯು... ಮೂರು ಅಧಿವೇಶನಗಳನ್ನು ಸಂ... ಜವಾಬ್ದಾರಿಯನ್ನು ಬೇರೇ ಬೇರೆ ... ಗಳಿಗೆ ಕೊಡಲಾಗಿದೆ. ಸ್ವಾ... ಅಧಿವೇಶನದ ಜವಾಬ್ದಾ... ಬೆಂಗಳೂರಿನ ವಿಜ್ಞಾನಿಗಳ ಸ... ವಿಜ್ಞಾನ ಮತ್ತು ಬೆಳವಣಿಗೆ ... ವಹಿಸಿಕೊಂಡಿದೆ.

ಲಾಠಿ ಚಾರ್ಜ್...

ಪುಟ 1 ರಿಂದ

ತಾಳ್ಮೆಗೆಡಿಸಿ ರೊಚ್ಚಿಗೆಬ್ಬಿಸಿತು ... ಪದಾಧಿಕಾರಿಗಳ ಮೇಲಿನ ... ಕಾರಣವಾಯಿತು. ಮುಷ್ಕರವನ್ನು ... ಪಕ್ಷಿಯವಾಗಿ ಹಿಂತೆಗೆದುಕೊಂಡ ... ನಾಯಕತ್ವದ ಕರೆಯ ಬಗ್ಗೆ ತ... ತ್ತಿದ್ದೂರೂ ನೌಕರರು ತಮ್ಮ ಕಛೇ... ಮರಳಿದ್ದಾರೆ.

ರಾಜ್ಯ ಸರ್ಕಾರದ ಈ ನೌಕರ ... ಸರ್ವಾಧಿಕಾರಿ ಮನೋಭಾವದ ... ಯನ್ನು ಪಕ್ಷದ ರಾಜ್ಯ ಕಾ... ಮಂಡಳಿ ಖಂಡಿಸಿದೆ

ಸಂಚಿಕೆ 7 ಪೂರ್ಣಗೊಳ್ಳ... ಮುನಿಸಿಪಲ್ ಚುನಾವಣೆಗಳನ್ನು ... ಪಡಿಸಿದ ಸುದ್ದಿ ಬಂದುದರಿಂದ ... ಬಗ್ಗೆ ಲೇಖನ, ಸುದ್ದಿಗಳೇ ಬ... ಸಂಚಿಕೆಯನ್ನು ಪರಿಷ್ಕರಿಸ... ಬಂತು. ಇದರಿಂದ ಪ್ರಕಟಣೆ ... ವಿಳಂಬವಾಗಿ ಸಂಯುಕ್ತ ಸಂಚಿಕೆ ಈಗ ಹೊರಬರುತ್ತಿದೆ.

ಸರ್ಕಾರವನ್ನು ತಲ್ಲಣಗೊಳಿಸಿದ ನೌಕರರ ಮುಷ್ಕರ

ಎಸ್.ಆರ್. ಆರಾಧ್ಯ

ಇದೇ ಫೆಬ್ರವರಿ 15 ರಂದು ಐದು ಲಕ್ಷ ಮಂದಿ ನೌಕರರು ತಮ್ಮ ದೀರ್ಘ ಕಾಲದ ಬೇಡಿಕೆಗಳಿಗಾಗಿ ಅನಿರ್ದಿಷ್ಟ ಕಾಲದ ಮುಷ್ಕರ ಹೂಡಿದರು. ರಾಜ್ಯಾದ್ಯಂತ ಅಭೂತಪೂರ್ವ ಯಶಸ್ಸನ್ನು ಕಂಡ ಸಿದ್ಧ ಸರ್ಕಾರಿ ನೌಕರರ ಮುಷ್ಕರ ಕಾಂಗ್ರೆ ಸರ್ಕಾರವನ್ನು ತಲ್ಲಣಗೊಳಿಸಿತು. ಶಿಸ್ತಿನ ಕ್ರಮ ಮತ್ತು ಸಂಬಳ ಕಡಿತಗಳ ಬೆದರಿಕೆಯನ್ನೊಡ್ಡಿದರೂ ಮುಖ್ಯ ಮಂತ್ರಿ ಕಛೇರಿಯೂ ಸೇರಿದಂತೆ ಎಲ್ಲಾ ವಿಭಾಗಗಳ ನೌಕರರು ಸಂಪೂರ್ಣ ಹರತಾಳನಡೆಸಿದ್ದು ವೀರೇಂದ್ರ ಪಾಟೀಲರನ್ನು ದಿಗ್ಭ್ರಮೆಗೊಳಿಸಿತು. ಮೂರು ದಿನಗಳ ಆಡಳಿತ ಯಂತ್ರವನ್ನು ಸ್ತಬ್ಧಗೊಳಿಸಿದ ನೌಕರರು ಇದೀಗ ಮುಷ್ಕರವನ್ನು ಹಿಂತೆಗೆದುಕೊಂಡು ಕೆಲಸಕ್ಕೆ ಹಾಜರಾಗಿರುತ್ತಾರೆ.

ನೌಕರರ ಬೇಡಿಕೆಗಳು:-

ಕೇಂದ್ರ ಸರ್ಕಾರಿ ನೌಕರರಿಗೆ ಸಮನಾದ ವೇತನ, ಹದಿನೈದು ವರ್ಷಗಳ ಕಾಲ ಸೇವೆ ಸಲ್ಲಿಸಿದ ನೌಕರರಿಗೆ ಸ್ವಯಂಚಾಲಿತ ಬಡ್ತಿ, ತುಟ್ಟಿ ಭತ್ಯೆ ಬಾಕಿಯ ನಗದು ಪಾವತಿ ಸರ್ಕಾರಿ ನೌಕರರಿಗೂ ಬೋನಸ್ ನೀಡಬೇಕು ಇತ್ಯಾದಿ ಬೇಡಿಕೆಗಳಲ್ಲದೆ ಸರ್ಕಾರಿ ನೌಕರರನ್ನು ಅವಹೇಳನ ಮಾಡುವ ಸಚಿವರ ವರ್ತನೆಯನ್ನು ಪ್ರತಿಭಟಿಸುವುದು ಮುಷ್ಕರದ ಮುಖ್ಯ ಉದ್ದೇಶವಾಗಿತ್ತು. ಬಸವಲಿಂಗಪ್ಪನವರು ಈ ಹಿಂದೆ ಸರ್ಕಾರಿ ನೌಕರರ ಬಗ್ಗೆ ಬೇಜವಾಬ್ದಾರಿ ಹೇಳಿಕೆಗಳನ್ನು ನೀಡಿರುವುದು ಇಲ್ಲಿ ಸ್ಮರಿಸಬಹುದಾಗಿದೆ.

ಕಾಂಗ್ರೆಸ್‌ನ ಕಾರ್ಮಿಕ ವಿರೋಧಿ ನೀತಿ:

ಜನತಾದಳ ಸರ್ಕಾರ ಅಧಿಕಾರವಿದ್ದಾಗಲೇ ತಮ್ಮ ಬೇಡಿಕೆಗಳನ್ನು ಮಂಡಿಸಲಾಗಿದ್ದು ರಾಜ್ಯಪಾಲರ ಆಡಳಿತಾವಧಿಯಲ್ಲಿ ನೀಡಿದ ಭರವಸೆಗಳನ್ನು ಹೊಸ ಸರ್ಕಾರವೊಂದು ಅಧಿಕಾರಕ್ಕೆ ಬಂದಿರುವಾಗಲು ಈಡೇರಿಸದಿರುವುದರಿಂದ ಮುಷ್ಕರ ಹೂಡುವುದು ಅನಿವಾರ್ಯವಾಯಿತೆಂದು ನೌಕರರ ಸಂಘದ ಪದಾಧಿಕಾರಿಗಳು ತಿಳಿಸಿದ್ದರು. ನನೆಗುದಿಯಲ್ಲಿದ್ದ ಸಮಸ್ಯೆಯ ಕುರಿತು ಸಹಾನುಭೂತಿಯಿಂದ ಪರಿಶೀಲಿಸಿ ಮಾತುಕತೆ ಪ್ರಾರಂಭಿಸುವ ಬದಲು ಸರ್ಕಾರ ಮೊಂಡುತನದಿಂದ ವರ್ತಿಸಿದೇ ಮುಷ್ಕರ ಪ್ರಾರಂಭವಾಗುವ ಮೊದಲೇ ಯಾವುದೇ ಪ್ರಚೋದನೆಯಿಲ್ಲದೆ ಬೆಂಗಳೂರು ನಗರದಲ್ಲಿ ಪ್ರತಿಬಂಧ ಕಾಜ್ಞೆಯನ್ನು ಹೇರಿ ಬಲಪ್ರಯೋಗದ ಮೂಲಕ ಮುಷ್ಕರವನ್ನು ವಿಫಲಗೊಳಿಸುವ ಕುತಂತ್ರ ಫಲಿಸಲಿಲ್ಲ.

ಮುಷ್ಕರದ ಕಾಲದಲ್ಲಿ ಸರ್ಕಾರ ನಡೆದುಕೊಂಡ ರೀತಿ ಕಾಂಗ್ರೆಸ್‌ನ ಸರ್ವಾಧಿಕಾರಿ ಮತ್ತು ಕಾರ್ಮಿಕ ವಿರೋಧಿ ಧೋರಣೆಯನ್ನು ಮತ್ತೊಮ್ಮೆ ಬಯಲಿಗೆಳೆದಿದೆ. ವೀರೇಂದ್ರ ಪಾಟೀಲರಂತೂ ತಮ್ಮ ಅರವತ್ತರ ದಶಕದಲ್ಲಿ ಗರಿಷ್ಠವ ಎತ್ತರದಲ್ಲಿ ಪ್ರದರ್ಶಿಸಿದ್ದ ನೌಕರ ವಿರೋಧಿ ದರ್ಪದ ಆಡಳಿತ ವೈಖರಿಯನ್ನೇ ಈಗಲೂ ಪ್ರದರ್ಶಿಸುತ್ತಿದ್ದಾರೆ. ವಿವೇಚನಾರಹಿತ ನಿಲುಮೆಯನ್ನು ಕೆಲವು ಕಾಂಗ್ರೆಸ್ ನಾಯಕರೇ ಬಹಿರಂಗವಾಗಿ ಟೀಕಿಸಿರುವುದನ್ನು ಕಾಣಬಹುದಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಇತ್ತೀಚೆಗೆ ಉತ್ತರಪ್ರದೇಶದಲ್ಲಿ ಅಧಿಕಾರಕ್ಕೆ ಬಂದಿರುವ ಮುಲಾಯಂಸಿಂಗ್ ಯಾದವ್ ನೇತೃತ್ವದ ಜನತಾದಳ ಸರ್ಕಾರವು ರಾಜ್ಯ ಸರ್ಕಾರಿ ನೌಕರರಿಗೂ ಕೇಂದ್ರ ಸರ್ಕಾರಿ ತತ್ಸಮಾನ ವೇತನವನ್ನು ಪ್ರಕಟಿಸಿರುವುದನ್ನು . ಇಲ್ಲಿ ಗುರುತಿಸಬಹುದಾಗಿದೆ ಪಶ್ಚಿಮಬಂಗಾಳ ಎಡರಂಗ ಸರ್ಕಾರ ಅನೇಕ ವರ್ಷಗಳಿಂದಲೂ ಸರ್ಕಾರಿ ನೌಕರರರಿಗೂ ಹಾಗು ಪೋಲೀಸರಿಗೂ ಸಹ ಬೋನಸ್ ನೀಡುತ್ತಾ ಬಂದಿದೆ.

ಮುಷ್ಕರದ ವಾಪಸಾತಿ:

ರಾಜ್ಯ ಸರ್ಕಾರವು ಹಣಕಾಸಿನ ಬಿಕ್ಕಟನ್ನು ಎದುರಿಸುತ್ತಿದ್ದು ಬೇಡಿಕೆಗಳ ಪರಿಶೀಲನೆಗೆ ಕಾಲಾವಕಾಶ ನೀಡಬೇಕೆಂದು ಮುಖ್ಯ ಮಂತ್ರಿಗಳು ಕೋರಿದ್ದರೂ ನೌಕರರಿಗೆ ಸ್ಪಷ್ಟವಾದ ಭರವಸೆ ನೀಡಲು ಸಿದ್ಧರಿರಲಿಲ್ಲ. ಕೊನೆಗೂ ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟವೊಂದರ ಪದಾಧಿಕಾರಿಗಳ ಮಧ್ಯ ಪ್ರವೇಶದಿಂದ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಗಿದೆ. ಸರ್ಕಾರವೂ ತನ್ನ ಒಣಪ್ರತಿಷ್ಠೆಯನ್ನು ಕೈಬಿಟ್ಟು ವಾರ್ತಾ ಸಚಿವ ವೀರಪ್ಪ ಮೊಯ್ಲಿಯವರ ಮೂಲಕ ನೌಕರರ ಸಂಘದೊಂದಿಗೆ ರಾಜಿ ಮಾಡಿಕೊಳ್ಳುವುದು ಅನಿವಾಯವಾಯಿತು. ಸರ್ಕಾರಿ ನೌಕರರೂ ಬಹಳ ಎಚ್ಚರಿಕೆಯಿಂದ ತಮ್ಮ ಮುಂದಿನ ತಂತ್ರವನ್ನು ರೂಪಿಸಿಕೊಳ್ಳ ಬೇಕಾಗಿದೆ. ಇತರೆ ಕೇಂದ್ರ ಕಾರ್ಮಿಕ ಸಂಘಟನೆಗಳೊಂದಿಗೆ ನಿರಂತರ ಸಂಪರ್ಕ ಬಿಟ್ಟುಕೊಂಡು ಸಾರ್ವಜನಿಕರ ಸಹಾನು ಭೂತಿಯನ್ನು ಗಳಿಸಲು ಸಹ ಸೂಕ್ತ ಕ್ರಮಗಳನ್ನು 'ಕೈಗೊಳ್ಳಬೇಕಾಗಿದೆ.

ಸಿ.ಐ.ಟಿ.ಯು. ಸೌಹಾರ್ದ ಬೆಂಬಲ

ಸಿ.ಐ.ಟಿ.ಯು. ರಾಜ್ಯ . ಮಂಡಳಿ ಅಧ್ಯಕ್ಷರಾದ ಎಸ್. ಸೂರ್ಯನಾರಾಯಣ ರಾವ್‌ರವರು ಫೆ. 17 ರಂದು ಪತ್ರಿಕಾ ಗೋಷ್ಠಿಯ ಮೂಲಕ ರಾಜ್ಯ ಸರ್ಕಾರಿ ನೌಕರರ ಚಳುವಳಿಗೆ ಸೌಹಾರ್ದ ಬೆಂಬಲ ವ್ಯಕ್ತಪಡಿಸಿದರು. ನೌಕರರ ಬೇಡಿಕೆಗಳ ಕುರಿತು ಸರ್ಕಾರದ ಧೋರಣೆಯನ್ನು ಕಟುವಾಗಿ ಟೀಕಿಸಿ ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಕೇಂದ್ರ ಕಾರ್ಮಿಕ ಸಂಘಟನೆಗಳೂ ಸಹ ನೇರ ಕಾರ್ಯಾಚರಣೆಗಿಳಿಯುವುದು ಅನಿವಾರ್ಯವಾಗಬಹುದೆಂದು ಎಚ್ಚರಿಕೆ ನೀಡಿದರು. ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಧುರೀಣರು ನೌಕರರ ಮುಷ್ಕರವನ್ನು ವಿರೋಧಿಸಲು ಪ್ರತಿಚಳುವಳಿ ಹೂಡುವುದಾಗಿ ಬೆದರಿಕೆಯೊಡ್ಡಿದನ್ನು ಇಲ್ಲಿ ಗಮನಿಸಬೇಕಾಗಿದೆ. ಸರ್ಕಾರಿ ನೌಕರರು ಪಡೆಯುತ್ತಿರುವ ವೇತನದ ಅರ್ಧದಷ್ಟು ಸಂಭಾವನೆಗೆ ದುಡಿಯಲು ಸಿದ್ಧರಿರುವ ನಿರುದ್ಯೋಗಿ ಯುವಕರನ್ನು ಒದಗಿಸುವುದಾಗಿ ಸಹ ಸೂಚಿಸಿದ್ದರು. ಕೆಲವು ಮಧ್ಯಮ ವರ್ಗದ ಬುದ್ಧಿಜೀವಿಗಳು ಸಹ ಇದೇ ವಾದಗಳನ್ನು ಪ್ರತಿಪಾದಿಸುತ್ತಿದ್ದಾರೆ. ದಿವಂಗತ ಶ್ರೀಮತಿ ಇಂದಿರಾಗಾಂಧಿಯವರು ತುರ್ತು ಪರಿಸ್ಥಿತಿಯ ಕಾಲದಲ್ಲಿ ವೇತನ ಸ್ಥಗಿತ ನೀತಿಯನ್ನು ಜಾರಿಗೆ ತಂದಿದ್ದನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

ಸರ್ಕಾರಿ ಇಲಾಖೆಗಳಲ್ಲಿ ಅದಕ್ಷತೆ ಮತ್ತು ಭ್ರಷ್ಟಾಚಾರ ತುಂಬಿ ತುಳುಕುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಿ ಸಹಕರಿಸಬೇಕೆಂಬುದು ನಿರ್ವಿವಾದ .

ಕೆಲವರಲ್ಲಿ ಕಂಡುಬರಬಹುದಾದ ಲಂಚಗುಳಿತನವನ್ನು ಪ್ರತಿಭಟಿಸುವಾಗಲೇ ವಿರುದ್ಧವೋ ಅಥವಾ ಹೋಟೇಲ್‌ಗಳಲ್ಲಿ ತಿಂಡಿಗಳ ಗುಣಮಟ್ಟ ಕಳಪೆಯಾಗಿ ಬಿಲ್ಲಿನ ಹೊರೆ ಹೆಚ್ಚಾದಾಗ ಮಾಣಿಯ ಮೇಲೆಯೇ ತಿರುಗಿ ಬೀಳುವ ರೀತಿಯಲ್ಲಿ ಬಡಪಾಯಿ ನೌಕರರ ಮೇಲೆಯೇ ಎಲ್ಲಾ ತಪ್ಪುಗಳನ್ನು ಹೊರಿಸುವುದು ಸೂಕ್ತವೆನಿಸುವುದಿಲ್ಲ.

ಸರ್ಕಾರಿ ನೌಕರರ ಮುಂದಿರುವ ಸವಾಲು:

ಸರ್ಕಾರಿ ನೌಕರರು ಸಾಕಷ್ಟು ಸಂಬಳ ಪಡೆದು ಸುಖದ ಸುಪ್ಪತ್ತಿಗೆಯಲ್ಲೇ ಓಡಾಡುತ್ತಿದ್ದಾರೆಂಬ ತಪ್ಪು ಗ್ರಹಿಕೆಯ ಹಿನ್ನೆಲೆಯಲ್ಲಿ ನಿರುದ್ಯೋಗಿಗಳು ಮತ್ತು ಅರೆಉದ್ಯೋಗಿಗಳನ್ನು ಎತ್ತಿಕಟ್ಟುವ ಕುತಂತ್ರವನ್ನು ಸಹ ಸರ್ಕಾರ ಅನುಸರಿಸುತ್ತಾ ಬಂದಿದೆ. ಹಿಂದೊಮ್ಮೆ ಬ್ಯಾಂಕ್ ನೌಕರರ ಮುಷ್ಕರದ ಸಂದರ್ಭದಲ್ಲಿ ನಿರುದ್ಯೋಗಿ ಪದವೀಧರರ ಸಂಘದವರು ತಾವು ಕಡಿಮೆ ವೇತನಕ್ಕಾಗಿ ದುಡಿಯಲು ಸಿದ್ಧರಿರುವುದಾಗಿ ಘೋಷಿಸಿ ಪ್ರತಿ ಚಳುವಳಿ ಹೂಡಿದರು. ಇದನ್ನು ಗಮನಿಸಿದ ಸರ್ಕಾರ ಸ್ಟೈಫಂಡರಿ ಪದವೀಧರರ ಯೋಜನೆಯೊಂದನ್ನು ರೂಪಿಸಿ ಉತ್ಸಾಹಿ ತರುಣರ ಕಡಿಮೆ ಬೆಲೆಯ ಶ್ರಮವನ್ನು ಧಾರಾಳವಾಗಿ ಬಳಸಿಕೊಳ್ಳುತ್ತಾ ಬಂದಿದೆ. ತದನಂತರ ಸ್ಟೈಫಂಡರಿ ಪದವೀಧರರು ಸ್ಟೈಫಂಡ್ ಹೆಚ್ಚಳ ಮತ್ತು ಕೆಲಸವನ್ನು ಖಾಯಂಗೊಳಿಸಬೇಕೆಂಬ ಬೇಡಿಕೆಗಳನ್ನು ಮುಂದಿಟ್ಟು ಹೋರಾಟ ನಡೆಸುವುದು ಅನಿವಾರ್ಯವಾಯಿತೆಂಬುದು ಸಹ ಅಷ್ಟೇ ವಾಸ್ತವವಾಗಿದೆ. ಆದ್ದರಿಂದ ಸರ್ಕಾರಿ ನೌಕರರ ಸಂಘಗಳ ನಾಯಕತ್ವ ಸ್ಟೈಫಂಡರಿ ಪದವೀಧರರು ದಿನಗೂಲಿ ನೌಕರರು, ಆಡಳಿತ ಪಕ್ಷದ ಶಾಸಕರು, ಮಂತ್ರಿಗಳು ಮತ್ತು ಅಧಿಕಾರಶಾಹಿ ವರ್ತುಲದಲ್ಲೇ ಸಮಸ್ಯೆಯ ಮೂಲ ಅಡಗಿದೆಯೆಂಬುದನ್ನು ಸಾರ್ವಜನಿಕರು ಸಹ ಮನಗಾಣಬೇಕಾಗಿದೆ.

ಬೆಲೆಗಳು ವಿಪರೀತ ಏರಿದಾಗ ಸಾಮಾನ್ಯ ಚಿಲ್ಲರೆ ಅಂಗಡಿ ಮಾಲೀಕನ ಜೊತೆಗೆ ಶಿಕ್ಷಕರು, ಅಂಗನವಾಡಿ ಶಿಕ್ಷಕಿಯರು, ಕಿರಿಯ ಆರೋಗ್ಯ ಸಹಾಯಕಿಯರು, ಸ್ಥಳೀಯ ಅಭ್ಯರ್ಥಿಗಳು ಮುಂತಾದ ಸರ್ಕಾರದ ನಿರ್ಲಕ್ಷ್ಯ ಮತ್ತು ತೀವ್ರ ಶೋಷಣೆಗೆ ಗುರಿಯಾಗಿರುವ ಸಹೋದ್ಯೋಗಿಗಳ ಭವಿಷ್ಯದತ್ತ ಸಹ ಗಂಭೀರವಾಗಿ ಗಮನ ಹರಿಸುವುದು ಅತ್ಯವಶ್ಯಕವಾಗಿದೆ.

ಇ.ಎಸ್.ಐ. ಅವ್ಯವಸ್ಥೆಯನ್ನು ಪ್ರತಿಭಟಿಸಿ ಕಾರ್ಮಿಕರಿಂದ ಪ್ರದರ್ಶನ

ಮಂಗಳೂರು: ಇ.ಎಸ್.ಐ. ಡಿಸ್ಪೆನ್ಸರಿಗಳಲ್ಲಿ ಡಾಕ್ಟರುಗಳನ್ನು ನೇಮಿಸಬೇಕು; ಸಾಕಷ್ಟು ಔಷಧಿಗಳನ್ನು ಒದಗಿಸಬೇಕು; ಕಾರ್ಮಿಕರ ಬಗ್ಗೆ ಇಲಾಖೆಯ ನೌಕರಶಾಹಿ ನೀತಿ ಕೊನೆಗೊಳ್ಳಬೇಕು ಮತ್ತು ಇ.ಎಸ್.ಐ. ಆಸ್ಪತ್ರೆಯಲ್ಲಿ ಸಮರ್ಪಕವಾದ ವೈದ್ಯಕೀಯ ಸವಲತ್ತುಗಳನ್ನು ಒದಗಿಸಬೇಕೆಂದು ಒತ್ತಾಯಿಸಿ ಸಿ.ಐ.ಟಿ.ಯು. ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ತಾ. 8.2.90 ರಂದು ಸಂಜೆ ಕಾರ್ಮಿಕರು ನಗರದಲ್ಲಿ ಮೆರವಣಿಗೆ ನಡೆಸಿ ಇ.ಎಸ್.ಐ. ಪ್ರಾದೇಶಿಕ ಸಲಹಾ ಸಮಿತಿಯ ಅಧ್ಯಕ್ಷರಾದ ಅಸಿಸ್ಟೆಂಟ್ ಲೇಬರ್ ಕಮಿಷನರ್‌ರವರ ಕಛೇರಿ ಎದುರು ಮತಪ್ರದರ್ಶನ ನಡೆಸಿ ಮನವಿ ಅರ್ಪಿಸಿದರು. ಇ.ಎಸ್.ಐ. ಇಲಾಖೆಯು ಕಾರ್ಮಿಕರಿಂದ ಹಾಗೂ ಮಾಲೀಕರಿಂದ ಹಣವನ್ನು ಸಂಗ್ರಹ ಮಾಡುತ್ತಿದ್ದರೂ ಕಾರ್ಮಿಕರಿಗೆ ಯಾವುದೇ ಸವಲತ್ತುಗಳನ್ನು ಒದಗಿಸದಿರುವ ಬಗ್ಗೆ ಟೀಕಿಸಿ ಇದನ್ನು ಕೂಡಲೇ ಸರಿಪಡಿಸದಿದ್ದರೆ ತೀವ್ರವಾದ ಹೋರಾಟಕ್ಕೆ ಇಳಿಯುವುದಾಗಿ ತಿಳಿಸಲಾಗಿದೆ.

ಮನವಿಯನ್ನು ಸ್ವೀಕರಿಸಿದ ಸಲಹಾ ಸಮಿತಿ ಅಧ್ಯಕ್ಷರು ಕೂಡಲೇ ಈ ಬಗ್ಗೆ ಜಂಟಿ ಸಭೆ ನಡೆಸಿ ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಮನವಿಅರ್ಪಿಸಲು ತೆರಳಿದ ನಿಯೋಗದಲ್ಲಿ ಶ್ರೀ. ಕೆ. ಮೋನಪ್ಪ, ಶ್ರೀ ಬಿ. ಮಾಧವ ಶ್ರೀ ಕಮಲಾಕ್ಷ ಬಂಗೇರ, ಶ್ರೀ ಕೆ.ಶಂಕರ್, ಶ್ರೀ ಪಿ.ಉಮೇಶ್ ಭಂಡಾರಿ, ಶ್ರೀ ಬಿ. ಉಮನಾಥ, ಶ್ರೀ ಲೋಕಯ್ಯ ಶೆಟ್ಟಿ, ಶ್ರೀರಾಮಣ್ಣ ಶೆಟ್ಟಿ, ಶ್ರೀ ಬಿ. ನಾರಾಯಣ ಶೈ ಮೊದಲಾದವರಿದ್ದರು.

ನಂತರ ನಡೆದ ಸಭೆಯನ್ನುದ್ದೇಶಿಸಿ ಸಿ.ಐ.ಟಿ.ಯು. ಪ್ರಧಾನ ಕಾರ್ಯದರ್ಶಿ ಶ್ರೀ ಬಿ. ಮಾಧವನವರು ಮಾತನಾಡಿ ಇ.ಎಸ್.ಐ. ಇಲಾಖೆಯು ಇನ್ನಾದರೂ ಈ ಬಗ್ಗೆ ಕ್ರಮ ಕೈಗೊಳ್ಳದಿದ್ದಲ್ಲಿ ತೀವ್ರ ತರದ ಹೋರಾಟಕ್ಕೆ ಸಿದ್ಧರಾಗುವಂತೆ ಕರೆ ನೀಡಿತು.



ಇತ್ತೀಚೆಗೆ ಬೆಂಗಳೂರಿನ ಸಿ.ಪಿ.ಎ.ಸಿ. (ಕರ್ನಾಟಕ ಪ್ರಗತಿಪರ ಕಲಾ ಮಂಡಳಿ) ಹಾಗೂ ಸಮುದಾಯ ದಿಂದ ನಗರದ ವಿಸ್ತರಣಗಳಲ್ಲಿ, ಕಾರ್ಮಿಕ ವಸತಿಗಳಲ್ಲಿ ಬೀದಿ ನಾಟಕದ ಸಪ್ತಾಹ. ಭಾರತವನ್ನು ಸುಡುತ್ತಿರುವ ದಾವಾನಲದ ಬಗ್ಗೆ ಅತ್ಯವಶ್ಯಕವಾದೊಂದು ನಾಟಕದ ವಿಶಿಷ್ಟ ಪ್ರಯೋಗ. ಕಾರ್ಮಿಕರ ಐಕ್ಯತೆಗಾಗಿ ತನ್ನ ಜೀವನವನ್ನು ಮುಡುಪಿಟ್ಟು ಮಡಿದ ಸಪ್ಧರ್ ಹಾಶ್ಮಿಯವರ ಮರಣದ ವಾರ್ಷಿಕ ನೆನಪಿಗೆಂದು ಅರ್ಹ ಕಾಣಿಕೆ. ಬೇರೆ ರೂಪು ತಳೆದು ಎಲ್ಲೆಡೆ ಹರಡ ಬೇಕಾದ ಸಂದೇಶ.

ವೆಂಕಟೇಶ್

ಕೆಳವರ್ಗದ ಕೇರಿ ವಾತಾವರಣ. ಬೆಳಿಗ್ಗೆ ಸಮಯ/ ಮಸೀದಿಯ ಮುಲ್ಲಾ ಕೂಗು. ಸುಪ್ರಭಾತ. ಹಾಲುತಗೊಳ್ಳಿ ಬೀದಿ ನೀರಿಗಾಗಿ ಜಗಳ. *factory siren*, ತರಕಾರಿ ಮಾರಾಟದ ಕೂಗು ಹೀಗೆ ವಿವಿಧ ಶಬ್ದಗಳಿಂದ ಇಡೀ ದೃಶ್ಯದಲ್ಲಿ ಮೂಡಿಬರುತ್ತದೆ. ಪ್ರತಿಧ್ವನಿಯೂ ಮತ್ತು ದೃಶ್ಯವೂ ಒಂದಾದ ಮೇಲೆ ಒಂದು ಬರಬೇಕು ಮತ್ತು ಕೊನೆಯಲ್ಲಿ ಎಲ್ಲಾ ಧ್ವನಿಗಳು ಹೆಚ್ಚಾಗಿ ಕ್ರಮೇಣ ಕಡಿಮೆಯಾಗಬೇಕು. ಆಗ ಗುಡಿಸಲಿನಿಂದ 'ಪ್ಯಾರೆ' ಹೊರಗೆ ನಿಂತಿರುತ್ತಾನೆ. ಎದುರುಗಡೆ ಗುಡಿಸಲಿನಿಂದ 'ರಾಮು' ಕೈಯಲ್ಲಿ ಬಕೆಟ್ ಹಿಡಿದುಕೊಂಡು ಹೊರಗೆ ಬರುತ್ತಾನೆ. ಇಬ್ಬರೂ ಬೀಡಿ ಕಟ್ಟುವವರು.

ಪ್ಯಾರೇ: ಏನು ರಾಮಣ್ಣ ಈಗ ಎದ್ದಿರುವಹಾಗಿದೆ.

ರಾಮು: ಇನ್ನೇನು ಮಾಡೋದಪ್ಪ ರಾತ್ರಿ 1 ಗಂಟೆಗೆ ಬಡ್ಡಿಮಗಂದು ನೀರು ಬರೋದು. ಸ್ವಲ್ಪ ಎಮಾರಿದರೆ ಕುಡಿಯೋಕ್ಕೂ ನೀರಿರೊಲ್ಲ.

ಪ್ಯಾರೇ: Society ಯಲ್ಲಿ ಅಕ್ಕಿ ಬಂದಿದೆಯಂತೆ ತಗೊಂಡ್ಯಾ

ರಾಮು: ನಮ್ಮ ಹತ್ತಿರ ದುಡ್ಡಿದ್ದಾಗ ಅಕ್ಕಿ ಬಂದಿರೋಲ್ಲ, ಈಗ ಅಕ್ಕಿ ಬಂದಿದೆ - ಕೈಖಾಲಿ.

ಪ್ಯಾರೇ: ನಮ್ಮ ಜೀವನ ಇಷ್ಟೇ ಆಗೋಯ್ತು. ಮುಂದಿನವಾರ ಹಬ್ಬ ಬರ್‍ತಾಯಿದೆ. ಮಕ್ಕಳಿಗೆ ಬಟ್ಟೆಕೊಡಿಸ್ಕೋಬೇಕು. ಅದಕ್ಕೂ ಕಾಸಿಲ್ಲ.

ರಾಮು: ಸಾವ್ಕಾರತ್ರ advance ತಗೋ:

ಪ್ಯಾರೇ: ಸಾವ್ಕಾರತ್ರ advance ತಗೋತೀವಿ. ಅವರು ಸಂಬಳದಲ್ಲಿ ಮುರ್‍ಕೊತಾರೆ. ಮುಂದಿನ ತಿಂಗಳು ಕಡಿಮೆಯಾಗಿರೋದನ್ನ ಭರ್ತಿ ಮಾಡೋದಿಕ್ಕೆ ಸಾಲ ತಗೋ-ಬಡ್ಡಿ-ಬಡ್ಡಿಗೆ. ಇಷ್ಟೇ ಆಗೋಯ್ತು.

ರಾಮು: ಹಿಂಗೇ ಮಾತಾಡ್ತನಿಂತರೆ ಕೆಲಸಕೇಡು - ನಡಿ ನಡಿ.

ದೃಶ್ಯ: 2

ಕೇರಿಯ ಹೋಟೇಲ್. ಯಾವುದಾದರೂ ಸಿನಿಮಾ ಹಾಡು ಹೇಳಬಹುದು. ಗಿರಾಕಿಗಳು ಒಬ್ಬರಾದ ಮೇಲೆ ಒಬ್ಬರು ಬರುತ್ತಾರೆ. ಚಹಾ ಕುಡಿಯುತ್ತಾ ಮಾತುಕತೆ ಪ್ರಾರಂಭಿಸುತ್ತಾರೆ.

ವ್ಯಕ್ತಿ *1:* ಕೇಳಿದ್ದೆನಪ್ಪ ನಮ್ಮ ಕೃಷ್ಣಪ್ಪನ ಹಸು ನಿನ್ನೆ ರಾತ್ರಿಯಿಂದ ಪತ್ತೆಯಿಲ್ಲಂತೆ.

ವ್ಯಕ್ತಿ *2:* ಎಲ್ಲಿ ಹೋಗಿರುತ್ತೆ? ಗೂಟಕ್ಕೆ ಕಟ್ಟಿರೊದು ಬಿಡಿಸಿಕೊಂಡು ಇಲ್ಲೇ ಎಲ್ಲೋ ಹೋಗಿರುತ್ತದೆ.

ವ್ಯಕ್ತಿ *3:* ನನಗೆ ಗ್ಯಾರಂಟಿ. ಮಾಂಸ ಕಡಿಯೋ ಖಾದರ್ ಹೊಡೆದು ಹಾಕಿರಬಹುದು.

ವ್ಯಕ್ತಿ *2;* ಸುಮ್ಮ ಸುಮ್ಮನೆ ಯಾರ ಮೇಲೂ ತಪ್ಪು ಹಾಕಬಾರದು. ಅವನದ್ದು ಮಾಂಸ ಕಡಿಯೋ ಕಸುಬಾದ್ರು ಹಸವನ್ನು ಕುಯ್ದಿರೊಲ್ಲ.

ವ್ಯಕ್ತಿ *3:* ನಿಮಗೆಲ್ಲ ನನ್ನ ಮಾತಿನಲ್ಲಿ ನಂಬಿಕೆಯಿಲ್ಲ, ಇಷ್ಟಕ್ಕೂ ನನಗೇನಾಗಬೇಕಿದೆ. ನಿನ್ನೆ ಬೆಳಿಗ್ಗೆ ಅವನು ಕೃಷ್ಣಪ್ಪನ ಮನೆ ಮುಂದೆ ಠಳಾಯಿಸ್ತಿದ್ದ.

ವ್ಯಕ್ತಿ *2:* ಠಳಾಯಿಸಬಿಟ್ರೆ ಅವನು ಕತ್ತರಿಸ್ದ ಅಂತಾ ಹೇಗೆ ಹೇಳ್ತೀಯಾ? ನಿನ್ನ ಮಾತು ಕಟ್ಕೊಂಡ್ರೆ (ರೇಗಿ).

ವ್ಯಕ್ತಿ *1:* ಏನಯ್ಯ ಆಗಿಬಿಡತ್ತೆ. ನೀವು ನಾಮರ್ದ ಗಳ ತರಹ ಕೂತಿರಿ

ವ್ಯಕ್ತಿ *2:* ಯಾವನೋ ನಾಮರ್ದ್? ಕೇರಿನಲ್ಲಿ ಎಲ್ಲಾ ಅಣ್ಣತಮ್ಮಂದಿರ ಹಾಗೆ ಇದ್ದೀವಿ. ನೀನೇ ತರಲೆ ನನ್ನಗ ಕಿತಾಪತಿ ಹಚ್ತಾಯಿದ್ದೀಯಾ. ಹೋದ ವರ್ಷ ರಾಮಣ್ಣನ ಮಗಳು ಸ್ಕೂಲಿನಿಂದ ಬರೋದು ಹೊತ್ತಾಗಿದ್ದಕ್ಕೆ ಸಾಬರು ಕದ್ಕೊಂಡು ಹೋದ್ರು ಸೂಳೇ ಗೇರಿಗೆ ಮಾರ್‍ತಾರೆ ಅಂತಾ ಎಲ್ರಿಗೂ ಹೇಳ್ತಾ ಬಂದ್ಯಲ್ಲ. ಅವತ್ತು ಹುಡುಗಿ ಇನ್ನೊಂದು ನಿಮಿಷ ತಡವಾಗಿ ಬಂದಿದ್ರೆ ಇಲ್ಲಿ ರಕ್ತದ ಹೊಳೆ ಹರೀತಾ ಇತ್ತು. ಇನ್ನೊಂದು ಸರ್ತಿ ಇಂಥಾ ಕೆಲಸ ಮಾಡಿದ್ಯೊ.

ವ್ಯಕ್ತಿ *3:* ಏನು ಮಾಡಿಬಿಡ್ತೀಯಾ

ವ್ಯಕ್ತಿ *2:* ಸೂಳೇಮಗನೆ ಬೋಟಿತೆಗೆದುಬಿಡ್ತೀನಿ. (ಕತ್ತಿನ ಪಟ್ಟಿ ಹಿಡಿಯುತ್ತಾನೆ)

ಅಲ್ಲಿದ್ದ ಉಳಿದ ಜನರು ಜಗಳ ಬಿಡಿಸುತ್ತಾರೆ ವ್ಯಕ್ತಿ *2:* ದೂರ ಕರೆದುಕೊಂಡು ಹೋದಮೇಲೆ ಉಳಿದವರಿಗೆ ವ್ಯಕ್ತಿ *3,* ಪಿಸುಗುಟ್ಟುವ ಧ್ವನಿಯಲ್ಲಿ 'ನಿಮಗೆ ಗೊತ್ತಿಲ್ಲ ಆ ಊರಿನಲ್ಲಿ ಮದುವೆಯಾದ ಹುಡುಗಿಯನ್ನು ಹಾರಿಸ್ಕೊಂಡು ಹೋದ್ರು ಇತ್ಯಾದಿ-ಇತ್ಯಾದಿ ಹರಟುತ್ತಾನೆ. ಉಳಿದವರು ಆಶ್ಚರ್ಯ ಸೂಚಕವಾಗಿ ಆಂ ಎನ್ನುತ್ತಾ ಕೊನೆಯಲ್ಲಿ ಆಂ ಆಂ ಎನ್ನುವ ಹಲ್ಲೆಯ ಧ್ವನಿಯಾಗಿ ಪರಿವರ್ತನೆಯಾಗಬೇಕು.

ದೃಶ್ಯ: 3

(ಪ್ಯಾರೇ ಗಾಭರಿಯಾಗಿ ಓಡೋಡುತ್ತಾ ರಾಮಣ್ಣನ ಮನೆಗೆ ಬುರುತ್ತಾನೆ)

ಪ್ಯಾರೇ: ರಾಮಣ್ಣ ರಾಮಣ್ಣ ನಿನ್ನೆರಾತ್ರಿ ಮಾಂಸದಂಗಡಿ ಖಾದರನ ಹಿಡ್ಕೊಂಡು ಚಚ್ಚಿದಾರೆ. ಅವನು ಹಸುವನ್ನು ನೋಡಿಲ್ಲ ಅಂದ್ರೂ ಬಿಡ್ಲಿಲ್ಲ. ಕೈಕಾಲು ಮೂಳೆ ಮುರಿಯೋ ಹಾಗೆ ಹೊಡೆದಿದ್ದಾರೆ.

ರಾಮಣ್ಣ: ಯಾಕೋ ಪ್ಯಾರೇ ಈಗ ನಡೀತಿರೋದು ವಿಚಿತ್ರವಾಗಿದೆ. ನಾವು ಚಿಕ್ಕೊರಿದ್ದಾಗ ಇಂತಹ ಗಲಾಟೆ ಗಳೇ ಆಗ್ತಾಯಿರಲಿಲ್ಲ. ಯಾರಮನೇಲಿ ತೊಂದ್ರೆ ಬಂದ್ರೂ ಇಡೀ ಕೇರಿನೇ ನಿಂತು ಬಗೆ ಹರಿಸ್ತಾ ಇದ್ರೂ.

ಪ್ಯಾರೇ: ನಿಮ್ಮಪ್ಪ ಮೊಹರಂ ಬಂದರೆ ವೇಷ ಹಾಕ್ತಾಯಿದ್ದ. ಅವನ ಹುಲಿವೇಷ ಅಂ ಯಾವ ಹಬ್ಬ ಬಂದರೂ ಕೇರಿ ಕೇರಿನೇ ಸಂಭ್ರಮ ಪಡ್ತಾಯಿತ್ತು.

ರಾಮು: ಏ ಪ್ಯಾರೇ ನಿಮ್ಮಪ್ಪನ ತರಹ ಗಣೇಶನ ಮಂಟಪ ಯಾರು ಕಟ್ತಾಯಿದ್ರು ಹೇಳು. ಆಗ ನಾವುನೀವು ಬೇರೆ ಜಾತಿ ಅಂತಾ ಹೇಳೋಕೆ ಆಗ್ತಾಯಿರಲಿಲ್ಲ.

ಪ್ಯಾರೇ: ನೀನು ಹೇಳೋ ಹಾಗೆ ಎಲ್ಲಾ ವಿಚಿತ್ರವಾಗಿದೆಯಣ್ಣ.

ರಾಮು: ಇನ್ನೊಂದು ವಿಷಯ ಗಮನಿಸಿದ್ದೀನಿ ನಮ್ಮ ಕೇರಿಲಿ ಮೊದಲು ಇದ್ದದ್ದು ಖಾನ್ ಸಾಹೇಬರ ಅಂಗಡಿ. ಮೊನ್ನೆ ಮೊನ್ನೆ ಒಂದು ಅಂಗಡಿ ಹಾಕಿದ ನಲ್ಲ ರಾಘಣ್ಣ ಅವನು ನನಗೆ ಕದ್ದು ಹೇಳ್ತಾನೆ. ನೀವು ಯಾಕೆ ಆ ಸಾಬರವನ ಅಂಗಡಿಗೆ ಹೋಗ್ತಿರಾ ನನ್ನಂಗಡಿಗೆ ಬನ್ನಿ.

ಪ್ಯಾರೇ: (ಮಧ್ಯಪ್ರವೇಶಿಸುತ್ತಾ) ನಮ್ಮ ಖಾನ್ ಸಾಹೇಬನೂ ಸುಮ್ಮ ಇಲ್ಲ.

ನಮ್ಮ ಜನ ಅವರಂಗಡಿಲೇ ವ್ಯಾಪಾರ ಮಾಡ್ಬೇಕು ಅಂತಾ ಖಾಜಿಗಳ ಹತ್ರ ಹೇಳಿಸ್ದ.

ರಾಮಣ್ಣ: ಏನು ಇವನಾಗಲೀ ಅವನಾಗಲಿ ಪುಕಸಟ್ಟೆ ಕೊಡ್ತಾರಾ ಪ್ಯಾರೇ: ಈ ವ್ಯಾಪಾರಿಗಳು ಮಧ್ಯೆ ಷೈಪೋಟೀಲಿ ಊರು ಹಾಳಾಗ್ತಾಯಿದೆ. ಮತ್ತೆ ಖಾದರಿನಗೆ ನಮ್ಮ ಜನ ತಲೆ ಕೆಡಿಸ್ತಾಯಿದ್ರು. ನಮ್ಮನ್ನ ಹೊಡೆದೋರಿಗೆ ನೀವು ಬುದ್ಧಿಕಲಿಸಬೇಕು. ಅದು ಬೇಡ ಅಂತಾಹೇಳಿದಕ್ಕೆ ನನ್ನ ಮೇಲೆ ತಿರುಗಿಬಿದ್ರು.

ರಾಮಣ್ಣ: ನೋಡು ಪ್ಯಾರೇ. ಈ ವಿಷಯ ಇಲ್ಲಿಗೆ ಬಿಡಬಾರದು. ನಡಿ ನಾವು ಹೋಗಿ ಅವರಿಗೆ ಬುದ್ಧಿ ಹೇಳೋಣ.

ವ್ಯಕ್ತಿ: ರಾಮಣ್ಣ, ರಾಮಣ್ಣ, ಕೃಷ್ಣಪ್ಪನ ಹಸು ಸಿಗ್ತು.

ರಾಮು: ಪ್ಯಾರೇ: ಸಧ್ಯ ಗಂಡಾಂತರ ತಪ್ಪು.

ದೃಶ್ಯ: 4

ಬೀಡಿ ಕೆಲಸಗಾರರು ಸೇರಿ ಬೀಡಿ ಕಟ್ಟುತ್ತಿರುತ್ತಾರೆ. ಸೂಪರ್‌ವೈಸರ್ ಬಂದು ಹೊಗೆಸೊಪ್ಪು ಹಾಳು ಮಾಡ ಬೇಡ್ರಿ. ಎಲೆ ಸರಿಯಾಗಿ ಕಟ್ಟು ಎಂದು ಗದರಿಸು ತ್ತಾನೆ. ರಾಮು ಪ್ಯಾರೇ ಸೇರಿದಂತೆ ಎಲ್ಲರೂ ಬೀಡಿ ಕಟ್ಟುವ ಕೆಲಸದಲ್ಲಿ ತೊಡಗಿಯುತ್ತಾರೆ. ಕೆಮ್ಮಿನ ಶಬ್ದ.

ವ್ಯಕ್ತಿ *1:* ಬೆಳಿಗ್ಗೆಯಿಂದಾ ಸಾಯಂಕಾಲದ ವರೆಗೆ ಬೀಡಿ ಕಟ್ಟೊದು ತಪ್ಪಲ್ಲಾ.

ವ್ಯಕ್ತಿ *2:* ಕೇಳಿದ್ರೆನಪ್ಪ ಸುದ್ಧಿ (ಎಲ್ಲರೂ ಏನು - ಏನು)- ನಮ್ಮ ಮಾಲೀಕರು ನಮ್ಮ ಬೇಡಿಕೆಯನ್ನು ಒಪ್ಪಿಕೊಂಡಿದ್ದಾರೆ. ನಮ್ಮ ಯೂನಿಯನ್ ಲೀಡರ್‌ನ್ನು ವಾಪಸ್ಸು ಕೆಲಸಕ್ಕೆ ತಗೋತಾರಂತೆ. ಸಂಬಳ ಹೆಚ್ಚಿಸ್ತಿದ್ದಾರೆ - ಬೋನಸ್ ಕೊಡ್ತಾರಂತೆ -

ವ್ಯಕ್ತಿ *3:* ಒಳ್ಳೆ ಸುದ್ದಿ ತಂದೆಯಣ್ಣ. ಈ ಬರೋ ದುಡ್ಡಿನಲ್ಲಿ ಒಂದು ಹಳೇ ಸೈಕಲ್ ತಗೋತೀನಿ.

ವ್ಯಕ್ತಿ *4 :* ನಾನು ತಿಂಗಳಿಂದ ಬಾಡಿಗೆ ಕೊಟ್ಟಿಲ್ಲ. ಕೊನೆ ಪಕ್ಷ ತಿಂಗಳ ಬಾಡಿಗೆಯಾದ್ರು ಕೂಟ್ಟಿಡ್ತೀನಿ -

ವ್ಯಕ್ತಿ *5:* ಮಕ್ಕಳಫೀ ಕೊಡದೇ ಸ್ಕೂಲಿನಿಂದ ಓಡಿಸಿದ್ದಾರೆ -ದುಡ್ಡಿನಲ್ಲಿ ಮೊದಲು ಆ ಕೆಲಸ ಮಾಡ್ತೀನಿ. (ಮತ್ತೊಬ್ಬ ಕೆಲಸಗಾರನಿಗೆ) ನಿನಗೇನು ಖುಷಿಯಿಲ್ವಣ್ಣ ಸಪ್ಪಗಿದಿಯಲ್ಲ.

ವ್ಯಕ್ತಿ *6 :* ಏನು ಹೇಳಲಣ್ಣ - ನನ್ನ ಮಗಳಿಗೆ ಮದುವೆ ಗೊತ್ತಾಗಿದೆ ದುಡ್ಡು ಸಾಲ್ತಾಯಿಲ್ಲ.

ರಾಮು :- ನೋಡು ನೀನು ಯೋಚನೆ ಮಾಡ್ಬೇಡ - ನಾವೆಲ್ಲ ಸ್ವಲ್ಪ ದುಡ್ಡು ಹಾಕೋಣ ಅವನಿಗೆ ಸುಲಭವಾಗುತ್ತೆ (ಎಲ್ಲರಿಗೂ) ಏನ್ರಪ್ಪಾ ಹೇಳ್ತೀರಿ.

ಕೆಲಸಗಾರರು (ಸ್ವಲ್ಪ ನಿಧಾನಿಸಿ) ಕೊನೆಯಲ್ಲಿ ಆಗಲಿ". ಆಗಲಿ ಎನ್ನುತ್ತಾರೆ

ಈ ವರ್ಷ ಇವನ ಹಬ್ಬ ಜೋರು - (ಮತ್ತೊಬ್ಬ ಕೆಲಸಗಾರನನ್ನು)ತೋರಿಸಿ ಇವನು ಕಂಟ್ರಬಿಟ್ಟು (bottle) ಪಾರಿನ್‌ಗೆ ಹೋಗ್ತಾನೆ. (ನಗು)

ವ್ಯಕ್ತಿ *2:* ಇನ್ನೊಂದು ವಿಷ್ಯ ಮರ್‍ತಿದ್ದೀವಿ. ಈ
ನಮ್ಮ ತಿಮ್ಮನಿಗೆ ರಂಭೆಯಂತ ಹುಡುಗಿಂ
ನೋಡಿ ಮದುವೆ ಮಾಡಿಬಿಡಬೇಕು.

(ಎಲ್ಲರೂ ತಿಮ್ಮನನ್ನು ಚುಡಾಯಿಸುತ್ತಾರೆ)

ಆಹಾ ನಿನ್ನ ಮದುವೆಯಂತೆ -
ಓಹೋ ನಿನ್ನ ಮದುವೆಯಂತೆ
ಹುಡುಗಿ ಮಾತ್ರ ಇಲ್ವಂತೆ
ಡಂ ಡಂ ಡಂ -

(ಜೋರಾಗಿ ನಗುತ್ತಾರೆ) (freeze)

(ಮಾಲೀಕರ ನಗುತ್ತಾ ಪ್ರವೇಶ)

ಗಣೇಶಪ್ಪ (ಮಾಲೀಕ): ಬರಬೇಕು ಬರಬೇಕು
ಸಾಹೇಬರು - ಏನು ಬಡವನ ಮನೆಗೆ ಬಂ
ಹೇಗಿದೆ ವ್ಯಾಪಾರ ?

ಖಾನ್ ಸಾಹೇಬ್ (ಮತ್ತೊಬ್ಬ ಮಾಲೀಕ):
ಸ್ವಾಮಿ ಹೀಗೆ ಮಾಡ್ಬಿಟ್ರಿ. ಹಿಂಗಾದ್ರೆ
ಮುಳುಗಿ ಹೋಗಿಬಿಡ್ತೀವಿ-

ಗಣೇಶಪ್ಪ: ಯಾಕ್ ಸ್ವಾಮಿ ಅಂತಾದೇನಾಯ್ತು-

ಖಾನ್‌ಸಾಹೇಬ್: ಅಲ್ಲಾ ಸ್ವಾಮಿ ನಿಮ್ಮ ಕಂ
ಕಾರ್ಮಿಕರು ಕೇಳಿದಕ್ಕೆ ಆಗಲಿ ಅಂದಿದ್ದೀರಲ್ಲ.
ಕಂಪನಿಯವರು ಸುಮ್ಮನೆ ಇರ್‍ತಾರಾ.

ಗಣೇಶಪ್ಪ: ಅಷ್ಟೆತಾನೇ ನಿಮ್ಮ ಭಯ ಸಾಹೆ
ಕಾರ್ಮಿಕರ ಜತೆ ಮಾಡಿಕೊಳ್ಳುವ agreement
ಬಿಟ್ಟರೇ ಅಷ್ಟೆ-

ಖಾನ್‌ಸಾಹೇಬ್: ಮತ್ತೇನು ಮಾಡ್ತೀರಿ-

ಗಣೇಶಪ್ಪ: ನೋಡಿ ಅಗ್ರಿಮೆಂಟ್ ಬೆಲೆ ಇ
(ಹರಿದು ಹಾಕುತ್ತಾನೆ) ನಿಮ್ಮ ಕಂಪನೀಲಿ
ಧರ್ಮದ ಜನ ಇದ್ದಾರಲ್ಲ, ಅವರ ಮಧ್ಯೆ
ಜಗಳ ಹುಟ್ಟುಹಾಕಬೇಕು ಅಷ್ಟೆ-ನೋಡಿ (ಕಿವಿ
ಹೇಳುವಂತೆ) ನಿಮ್ಮ ಜನಗಳಿಗೆ ಹೇಳಿಕೊಡಿ
ಜನಗಳನ್ನ ನಾನು ನೋಡಿಕೋಳ್ತೀನಿ-

ಖಾನ್‌ಸಾಹೇಬ್: ಸಖತ್ ತಲೆಸ್ವಾಮಿ. ನಿ
ಬರ್‍ತೀನಿ ನಮಸ್ಕಾರ. (ಇಬ್ಬರು ಎರಡು ಗುಂಪ
ಪ್ರಚೋದಿಸುತ್ತಾರೆ.)

(ಸೂತ್ರಧಾರನ ಪ್ರವೇಶ)

ಈಗ ನೀವು ನೋಡ್ತಾಯಿರೋದು ನಮ್ಮ ಊರ
ನಿಮ್ಮ ಊರು ಕತೆನೂ ಇರಬಹುದು-
ಈ ಊರಿನಲ್ಲಿರೊರಲ್ಲಿ ಹೆಚ್ಚಿನವರು
ಕಟ್ಟೋರು-ಅಂದರೆ ಬಡವರು ಅಂತಾ
ಹೇಳ್ಬೇಕಿಲ್ಲ. ಈ ಊರಿನಲ್ಲಿರುವ ಸಾವ್ಕಾ
ಬೆರಳಲ್ಲಿ ಎಣಿಸಿ ಬಿಡಬಹುದು.

ಈ ಊರು ಬಡತನಕ್ಕೆ ಅಷ್ಟೆಅಲ್ಲ
ವಾಗಿರೋದು. ಇಲ್ಲೊಂದು ಹಳೆಯ ಮ
ಏದೆ ಅಲ್ಲಿ ಯಾವಾಗಲೋ ಒಬ್ಬರು ಸ್ವಾ
ದ್ದರಂತೆ. ಅವರು ಯಾವ ಜಾತಿ.
ಯಾರಿಗೂ ಗೊತ್ತಿಲ್ಲ ವೈಶಿಷ್ಟ ಅಂದರೇ



ಕೆ.ಜಿ.ಎಫ್. ಬಿ.ಇ.ಎಂ.ಎಲ್. ಕಾರ್ಖಾನೆಯ ಕಾಂಟ್ರಾಕ್ಟ್ ಕಾರ್ಮಿಕರ ಹೋರಾಟಕ್ಕೆ ಜಯ.

ಸ್ಥಳೀಯ ಸಾರ್ವಜನಿಕ ಉದ್ದಿಮೆ ಯಾದ ಭಾರತ ಅರ್ತ್‌ಮೂವರ್ಸ್ ಲಿಮಿ ಟೆಡ್ (ಬೀಇಎಂಎಲ್) ಕಾರ್ಖಾನೆಯಲ್ಲಿ ಸುಮಾರು 2000 ಮಂದಿ ದಿನಕೂಲಿ ಕಾರ್ಮಿಕರಿದ್ದಾರೆ. ಕಾರ್ಖಾನೆಯ ಆರಂಭ ದಿಂದಲೂ ಕಂಟ್ರಾಕ್ಟರುಗಳ ಮೂಲಕ ಅತೀ ಕಡಿಮೆ ಕೂಲಿಗೆ ಇವರನ್ನು ನೇಮಿಸಿಕೊಳ್ಳಲಾಗುತ್ತಿದೆ. ಇತ್ತೀಚಿನವರೆಗೆ ಇವರ ದಿನಕೂಲಿ ರೂ. 10.85. 1989 ಆಗಸ್ಟ್ 1ನೇ ತಾರೀಖಿನಿಂದ 5ನೇ ತಾರೀಖಿನವರೆಗೆ 5 ದಿನಗಳ ಮಿಂಚಿನ ಮುಷ್ಕರವನ್ನು ಈ ಕಾರ್ಮಿಕರು ಹೂಡಿದರು. ಸ್ಥಳೀಯ ಸಿಐಟಿಯು ಮುಖಂಡರಾದ ಕಾ. ಎಸ್. ಸುವರಿದಾಸ್, ಕಾ. ಎ. ಜಯರಾಂ ಮತ್ತು ವಕೀಲರಾದ ಕಾ. ಬಾಲನ್‌ರವರು ಈ ಹೋರಾಟಕ್ಕೆ ನೇತೃತ್ವ ವಹಿಸಿ ಸೂಕ್ತ ಮಾರ್ಗದರ್ಶನ ನೀಡಿದರು. ಮುಷ್ಕರವನ್ನು ವಿಫಲಗೊಳಿಸಲು ಕಾಂಟ್ರಾಕ್ಟರರು, ಆಡಳಿತ ವರ್ಗ ಮತ್ತು ಇತರ ಕಾರ್ಮಿಕ ವಿರೋಧಿ ಶಕ್ತಿಗಳು ನಡೆಸಿದ ಪ್ರಯತ್ನ ವಿಫಲವಾಯಿತು. ತಗಾದೆ ಲೇಬರ್ ಕಮಿಷನರ್‌ವರ ಮುಂದೆ ಹೋಗಿ ದಿನಕ್ಕೆ ರೂ. 16.50 ದಿನಕೂಲಿಯ ಒಪ್ಪಂದ ಮತ್ತು ಮುಷ್ಕರದ ದಿನದಿಂದ ಹೆಚ್ಚುವರಿ ಸಂಬಳದ ಬಾಕಿಯನ್ನು (Arears) ಕೊಡಬೇಕೆಂದು ಒಪ್ಪಂದವಾಯಿತು. ದಿನಾಂಕ 10-2-90 ರಂದು ಹೆಚ್ಚುವರಿ ಸಂಬಳದ ಬಾಕಿಯನ್ನುಎಲ್ಲಾ ದಿನಕೂಲಿ ಕಾರ್ಮಿಕರಿಗೆ ಪಾವತಿ ಮಾಡಿದರಲ್ಲದೆ ಫೆಬ್ರವರಿ ತಿಂಗಳಿಂದ ಹೊಸ ದಿನಕೂಲಿಯನ್ನು ಕಾರ್ಮಿಕರು ಪಡೆಯುವರು. ಕಾಂಟ್ರಾಕ್ಟ್ ಕಾರ್ಮಿಕರ ಸಂಘಕ್ಕೆ ಸದಸ್ಯತ್ವವನ್ನು ಮಾಡುವ ಮಾಡಿ CITU ಗೆ ನೊಂದಾಯಿಸಲು ಕೆಲಸಗಳು ನಡೆಯುತ್ತಿವೆ. ಈ ಹೋರಾಟಕ್ಕೆ ದೊರೆತ ಜಯ ಮತ್ತು ಸಂಘಟನೆ ಬೀಇಎಂಎಲ್‌ನ ಚರಿತ್ರೆಯಲ್ಲೇ ಮೊಟ್ಟ ಮೊದಲನೆಯದಾಗಿದೆ.

ವರಮಾನ ತೆರಿಗೆ ವಿನಾಯಿತಿಗಾಗಿ ರಾಜ್ಯ ಮಟ್ಟದ ಸಮಾವೇಶ

ಸಿ.ಐ.ಟಿ.ಯು ರಾಜ್ಯ ಸಮಿತಿ, ವರಮಾನ ತೆರಿಗೆಯ ಭಾರದಲ್ಲಿ ತತ್ತರಿಸುತ್ತಿರುವ ಸಂಬಳದಾರರ ಸಮಸ್ಯೆ ಪರಿಹಾರಕ್ಕೆ ಸೂಕ್ತ ರೀತಿಯ ವಿನಾಯಿತಿಗಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ರಾಜ್ಯ ಮಟ್ಟದ ಸಮಾವೇಶ ಏರ್ಪಡಿಸಲು, ಇತರ ಸಂಘಗಳನ್ನು ಅದರಲ್ಲಿ ಅಣಿನೆರಿಸಲು ಕಾರ್ಯಕ್ರಮ ಹಮ್ಮಿಕೊಂಡಿದೆ. ಇದಕ್ಕನು ಗುಣವಾಗಿ 27-2-1990 ಮಂಗಳವಾರ ಬೆಂಗಳೂರಿನ ಪುರಭವನದಲ್ಲಿ ಸಂಜೆ 5 ಘಂಟೆಗೆ ರಾಜ್ಯಮಟ್ಟದ ಸಮಾವೇಶ ನಡೆಯಲಿದೆ. ಬೆಂಗಳೂರಿನ ಹಲವಾರು ಬ್ಯಾಂಕ್, ಎಲ್.ಐ.ಸಿ. ಕೇಂದ್ರ ರಾಜ್ಯ ಸರ್ಕಾರಿ ನೌಕರರು ಐ.ಐ.ಸಿ. ಮೈಕೋ ಸಂಘಗಳನ್ನು ಒಳಗೊಂಡ ಒಂದು ಸಿದ್ಧತಾ ಸಮಿತಿಯನ್ನು ರಾಜ್ಯ ಮಟ್ಟದ ಸಮಾ ವೇಶ ನಡೆಸಲು ರಚಿಸಲಾಗಿದೆ. ಈ ಸಮಾವೇಶವನ್ನು ತಮಿಳುನಾಡಿನ ಸಿ.ಐ.ಟಿ.ಯು ನಾಯಕರಾದ ಶ್ರೀ ಆರ್. ಉಮಾನಾಥ್ ಉದ್ಘಾಟಿಸಲಿದ್ದಾರೆ. ಈ ಸಮಾವೇಶ ಕೇಂದ್ರ ಸರ್ಕಾರವನ್ನು:

1. ವಿನಾಯಿತಿ ಗರಿಷ್ಠ ಮಿತಿಯನ್ನು ರೂ: 18,000ರಿಂದ 50,000ಕ್ಕೆ ಹೆಚ್ಚಿಸಬೇಕೆಂದು
2. ವರಮಾನ ತೆರಿಗೆ ಕಾನೂನಿನ ಸೆಕ್ಷನ್ 80(ಸಿ) ಪ್ರಕಾರ ವಿನಾಯಿತಿ ಮೊಬಲಗನ್ನು ಈಗಿರುವ ರೂ: 6,000ಕ್ಕಿಂತಲೂ ಹೆಚ್ಚಿಸಬೇಕೆಂದು
3. ಹುಟ್ಟಿಭತ್ಯವನ್ನು ವರಮಾನ ತೆರಿಗೆ ಪರಿಮಿತಿಯಿಂದ ತೆಗೆಯಬೇಕೆಂದು
4. 1-3-87ಕ್ಕಿಂತಲೂ ಒಂದೆಯೇ ಮನೆ ಕಟ್ಟಿಸಿರುವ ನೌಕರರಿಗೂ ಈಗಿರುವ ಪರಿಹಾರವನ್ನು ದೊರಕಿಸಬೇಕೆಂದೂ,
5. ಈ ಪರಿಹಾರವನ್ನು 80(ಸಿ)ಯಲ್ಲಿ ಸೇರಿಸದೆ ಬೇರೆಯಾಗಿ ಕೊಡಬೇಕೆಂದು,
6. ಮನೆ ಬಾಡಿಗೆ ಭತ್ಯೆಯನ್ನು (ಹೆಚ್.ಆರ್.ಎ) ವರಮಾನ ತೆರಿಗೆ ಪರಿಮಿತಿಯಿಂದ ತೆಗೆಯಬೇಕೆಂದು ಒತ್ತಾಯಿಸುತ್ತದೆ.

ಸಂಬಳದಾರರ, ನಿಗದಿತ ವರಮಾನದ ಪ್ರತಿ ನೌಕರರ, ಕಾರ್ಮಿಕರ ಬೇಡಿಕೆಗಳು ಸಂಪೂರ್ಣ ಸಮಂಜಸವಾಗಿವೆ ಹಾಗೂ ನ್ಯಾಯಬದ್ಧವಾಗಿವೆ. ಏಕೆಂದರೆ ಹಣ ದುಬ್ಬರದ ಪರಿಸ್ಥಿತಿಯಲ್ಲಿ ರೂಪಾಯಿ ಬೆಲೆ 11 ಪೈಸೆಗಳಿರುವಾಗ 1960ರ ವರಮಾನ ತೆರಿಗೆ ಮಿತಿಗೆ ಹೋಲಿಸಿದರೆ ತಿಂಗಳಿಗೆ ರೂ. ವರಮಾನದ ವರೆಗೂ ತೆರಿಗೆ ಹಾಕುವುದು ತರ್ಕಹೀನವಾಗುತ್ತದೆ. ಅಲ್ಲದೆ ನೌಕರರಿಗೆ ವರಮಾನ ತೆರಿಗೆ ಸಂಬಂಧ ಪಟ್ಟಂತೆ ಇನ್ನೂ ಹಲವಾರು ಸಮಸ್ಯೆಗಳಿವೆ. ಇವನ್ನೆಲ್ಲಾ ಸಮಾವೇಶದಲ್ಲಿ ಚರ್ಚಿಸಲಾಗುವುದೆಂದು ಸಮಾವೇಶದ ಸಂಯೋಜಕರಾದ ಎನ್.ವೀರಾಸ್ವಾಮಿ ಹಾಗೂ ಕೆ.ವಿ. ಶ್ರೀನಿವಾಸನ್ ತಿಳಿಸಿದ್ದಾರೆ.

ರಾಜ್ಯ ಸರ್ಕಾರಿ ನೌಕರರ ಮುಷ್ಕರಕ್ಕೆ ಸಿ.ಪಿ.ಐ.(ಎಂ) ಬೆಂಬಲ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸೆಕ್ರೆಟಾರಿಯೇಟ್ ರಾಜ್ಯ ಸರಕಾರಿ ನೌಕರರು ತಮ್ಮ ಬೇಡಿಕೆಗಳ ಸಲುವಾಗಿ ನಡೆಸಿರುವ ಮುಷ್ಕರಕ್ಕೆ ಸಂಪೂರ್ಣ ಬೆಂಬಲ ನೀಡುವ ನಿರ್ಣಯ ಕೈಕೊಂಡು, ಸರಕಾರ ನೌಕರ ಸಂಘದ ಪ್ರತಿನಿಧಿಗಳೊಡನೆ ಯಾವ ಪೂರ್ವಭಾವಿ ಕರಾರುಗಳಿಲ್ಲದೆ ಚರ್ಚಿಸಿ ಸೌಹಾರ್ದಯುತ ವಾತಾವರಣ ಉಂಟು ಮಾಡಬೇಕೆಂದು ರಾಜ್ಯ ಸರಕಾರವನ್ನು ಒತ್ತಾಯಪಡಿಸಿದೆ. ನಷ್ಟದಲ್ಲಿರುವ ಸರಕಾರಿ ಕಾರ್ಖಾನೆಗಳನ್ನು ಖಾಸಗಿ ಮಾಲೀಕರಿಗೆ ವಹಿಸಿಕೊಡಬೇಕೆಂಬ ಆರ್ಥಿಕ ಮಂತ್ರಿಗಳಾದ ರಾಜಶೇಖರ ಮೂರ್ತಿಯವರ ಹೇಳಿಕೆ ಅಪಾಯಕರವಾಗಿದ್ದು, ಸಾರ್ವಜನಿಕ ಕ್ಷೇತ್ರದ ಕಾರ್ಖಾನೆಗಳನ್ನು ಖಾಸಗೀಕರಣ ಗೊಳಿಸಬೇಕೆಂಬ ಕಾಂಗ್ರೆ ಮಂತ್ರಿ ಮಂಡಲದ ಅಭಿಪ್ರಾಯವನ್ನು ಸಿ.ಪಿ.ಐ (ಎಂ) ವಿರೋಧಿಸುತ್ತದೆಂದು ಹೇಳಿದೆ.

ಪೌರಕಾರ್ಮಿಕರ, ಮಂಡಲ ಪಂಚಾಯ್ತ್ ನೌಕರರ ಬೆಂಬಲ

ಕರ್ನಾಟಕ ರಾಜ್ಯ ಪೌರಕಾರ್ಮಿಕರ ಒಕ್ಕೂಟದ ಅಧ್ಯಕ್ಷರೂ ಕರ್ನಾಟಕ ರಾಜ್ಯ ಮಂಡಲಪಂಚಾಯತ್ ಎಂಪ್ಲಾಯೀಸ್ ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿಯವರೂ ಆದ ಎನ್.ಕೆ.ಉಪಾಧ್ಯಾಯರು ತಾರೀಖು 15-02-1990 ರಂದು ನಡೆಯಲಿರುವ ರಾಜ್ಯ ಸರಕಾರಿ ನೌಕರರ ಮುಷ್ಕರಕ್ಕೆ ತಮ್ಮ ಸಂಘಟನೆಗಳಿಂದ ಸಂಪೂರ್ಣ ಬೆಂಬಲ ವ್ಯಕ್ತ ಮಾಡಿದ್ದಾರೆ.

ಮಿತಿ ಮೀರಿದ ಆಟೋರಿಕ್ಷಾ ಪರ್ಮಿಟ್ ಚಾಲಕರ ಪ್ರತಿಭಟನೆ

ಸಾಗರದಲ್ಲಿ ಮಿತಿಗೆ ಮೀರಿ ಹೊಸ ಆಟೋರಿಕ್ಷಾ ಪರ್ಮಿಟ್ಟುಗಳನ್ನು ಕೊಡುತ್ತಿರುವ ರಾಜ್ಯ ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ 6-2-90 ರಂದು ಎಲ್ಲ ಆಟೋರಿಕ್ಷಾ ಚಾಲಕರು ತಮ್ಮ ತಮ್ಮ ರಿಕ್ಷಾಗಳನ್ನು ಸಾಗರದ ಎ.ಆರ್.ಟಿ.ಓ. ಕಛೇರಿಯ ಎದುರು ಸಾಲಾಗಿ ನಿಲ್ಲಿಸಿ ಮುಷ್ಕರ ನಡೆಸಿದ್ದಾರೆ. ಆಟೋರಿಕ್ಷಾ ಹೊಸ ಪರ್ಮಿಟ್‌ಗಳನ್ನು ಮಿತಿಗೆ ಮೀರಿ ಕೊಡುತ್ತಿರುವುದು ನಿರುದ್ಯೋಗವನ್ನು ಸೃಷ್ಟಿ ಮಾಡುವ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯಾಗಿದೆ. ಇದನ್ನು ಮೋಟಾರ್ ಟ್ರಾನ್ಸ್‌ಪೋರ್ಟ್ ಅಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್,, ಸಿ.ಐ.ಟಿ.ಯು. ಚೆನ್ನಾಗಿ ಖಂಡಿಸಿದೆ. ಅಲ್ಲದೇ ಈ ಧೋರಣೆಯನ್ನು ಉದ್ದೇಶಿಸಿ, ನಡೆಸಲಿರುವ ರಿಕ್ಷಾ ಕಾರ್ಮಿಕರ ಹೋರಾಟಕ್ಕೆ ತಮ್ಮ ಯೂನಿಯನ್ನಿನ ಸಂಪೂರ್ಣ ಬೆಂಬಲವಿದೆ ಎಂದು ಯೂನಿಯನ್ ಮುಖಂಡರಾದ, ಕಾಮ್ರೇಡ್ ಎಸ್.ಎ. ಗಜೇಂದ್ರ ತಿಳಿಸಿದ್ದಾರೆ.

ಎಸ್.ಎಫ್.ಐ. ಉತ್ತರಕನ್ನಡ ಜಿಲ್ಲಾ ಸಭೆ

ಭಟ್ಕಳ: ಸ್ವಾತಂತ್ರ ಹೋರಾಟ ಕಾಲದಲ್ಲಿ ಇದ್ದಂಥ ಸಾಮಾಜಿಕ ಚಿಂತನೆಯ ಗುಣ ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ಮಾಯವಾಗುತ್ತಿರುವುದು.ವಿಷಾದನೀಯ. ಈ ಪರಿಸ್ಥಿತಿಯನ್ನು ನಿವಾರಿಸಿ ವಿದ್ಯಾರ್ಥಿಗಳಲ್ಲಿ ಪ್ರಗತಿಪರ ವಿಚಾರಗಳನ್ನು ಬೆಳಿಸುವುದು ತುಂಬಾ ಅಗತ್ಯವಾಗಿದೆ ಎಂದು ಸ್ಥಳೀಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ನೌಕರರ ಸಂಘದ ಮುಖಂಡರಾದ ಶ್ರೀ ಎನ್.ಡಿ.ಜಾಕಾಡ್ರಾ ಅವರು ಅಭಿಪ್ರಾಯಪಟ್ಟರು.

ಅವರು ಜ. 21ರಂದು ಭಟ್ಕಳದ ಮುರ್ಡೇಶ್ವರದಲ್ಲಿ ನಡೆದ ಎಸ್.ಎಫ್.ಐ.ನ ಉತ್ತರ ಕನ್ನಡ ಜಿಲ್ಲಾ ವಿಸ್ತೃತ ಸಭೆಯನ್ನು ಉದ್ಘಾಟಿಸಿ ಮಾತಾಡುತ್ತಿದ್ದರು.

ವಿದ್ಯಾರ್ಥಿಗಳಿಗೆ ರಾಜಕೀಯ ಬೇಡವೆಂಬ ಘೋಷಣೆ ಅರ್ಥಹೀನವಾಗಿದೆ. 18 ವರ್ಷಕ್ಕೆ ಮತದಾನದ ಹಕ್ಕನ್ನುಸಂವಿಧಾನ ಬದ್ಧಗೊಳಿಸಿರುವುದು ಇದಕ್ಕೆ ಸಾಕ್ಷಿಯಾಗಿದೆ ಎಂದು ಅವರು ಹೇಳಿದರು.

ಉದ್ಯೋಗದ ಖಾತರಿಯಿಲ್ಲದ ಆರ್ಥ ಶಿಕ್ಷಣವನ್ನು ದೇಶ ಅನುಸರಿಸಿ ಯುವ ಜನರ ಭವಿಷ್ಯವನ್ನು ಅಂಧಕಾರಗೊಳಿಸುತ್ತಿದೆ. 'ವಿದ್ಯೆಯಿದ್ದವರಿಗೆ ಉದ್ಯೋಗವಿಲ್ಲ,' ಎಂಬ ಆಧುನಿಕ ನಾಣ್ಣುಡಿಗೆ ಅವಕಾಶವಾಗಿದೆ ಎಂದು ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ.ವೈ.ಎಫ್.ಐ) ನ ರಾಜ್ಯ ಸಮಿತಿ ಸಹ ಕಾರ್ಯದರ್ಶಿ ಆರ್.ಜಯಕುಮಾರ್ ಟೀಕಿಸಿದರು.

ಯುವಜನರಲ್ಲಿನ ನಿರುದ್ಯೋಗದ ಅತೃಪ್ತಿಯನ್ನು ಪ್ರತ್ಯೇಕವಾದಿ ಶಕ್ತಿಗಳು ದುರುಪಯೋಗಪಡಿಸಿಕೊಂಡು ವಿಚ್ಛಿದ್ರಕಾರಿ ಬೆಳವಣಿಗೆಗಳನ್ನು ಬೆಳಿಸುತ್ತಿದೆ ಎಂದು ಅವರು ಹೇಳಿದರು. ಈ ರೀತಿ ವಿದ್ಯಾರ್ಥಿಗಳನ್ನು ದಿಕ್ಕು ತಪ್ಪಿಸುವವರ ಬಗ್ಗೆ ಎಚ್ಚರಿಕೆಯಿಂದಿರಬೇಕೆಂದು ಜಯಕುಮಾರ್ ಹೇಳಿದರು.

ಮುಂಗಾರು ಉಪಸಂಪಾದಕ ಕೆ.ವಿಶ್ವನಾಥ ಅವರೂ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಎಸ್.ಎಫ್.ಐ. ರಾಜ್ಯ ಸಮಿತಿ ಉಪಾಧ್ಯಕ್ಷ ಶಾಂತರಾಮ ಎಸ್.ನಾಯಕ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.

'ಸಮುದಾಯ'ದ ಕೃಷ್ಣಮೂರ್ತಿ ಕಾವ್ರಾಡಿ, ಎ.ಐ.ಡಿ. ಡಬ್ಲ್ಯು. ಎ.ಯ ಎಸ್.ಆರ್ ಲೀಲಾವತಿ, ಬಂಡಾಯ ಸಾಹಿತಿ ವಿಡಂಬಾರಿ ಶುಭಕೋರಿ ಮಾತಾಡಿದರು. ವಿಠಲ್ ಆರ್.ಭಂಡಾರಿ ಸ್ವಾಗತಿಸಿದರು. ಸುಭಾಸಕೊಪ್ಪಿಕರ ವಂದಿಸಿದರು.

ನೂತನ ಜಿಲ್ಲಾ ಸಮಿತಿಗೆ ಆಯ್ಕೆ

ಅಧ್ಯಕ್ಷರು: ಸುಭಾಷ್‌ಕೊಪ್ಪಿಕರ

ಕಾರ್ಯದರ್ಶಿ: ಶಾಂತರಾಮ ನಾಯಕ್

ಉಪಾಧ್ಯಕ್ಷರು: ಈಶ್ವರ ನಾಯ್ಕ, ಸುರೇಶ ಮೇಸ್ತಾ

ಸಹ ಕಾರ್ಯದರ್ಶಿ: ವಿಠಲ ಭಂಡಾರಿ, ರಾಜೇಶ್ ಶೆಟ್ಟಿ ಮತ್ತು 6 ಮಂದಿ ಸದಸ್ಯರು.

“ಆಗಸದಂಚಿನಲ್ಲಿ ಸ್ವಾತಂತ್ರ್ಯದ ಹೊಂಬೆಳಕು ವಿಮೋಚನಾ ಹೋರಾಟಕ್ಕ ದ್ವಿಗುಣ ಚೈತನ್ಯ



ದಕ್ಷಿಣ ಆಫ್ರಿಕಾದ ಜನ ಹಾಡಿದರು. ಕುಣಿದಾಡಿದರು. ಅವರಲ್ಲಿ ಬಹುಮಂದಿ ಯುವಜನ ಕೇವಲ ಪೋಸ್ಟರುಗಳಲ್ಲಿ ಕಾಣುತ್ತಿದ್ದ ಕಾಲ ನಿಂತು ಬಿಟ್ಟಿದೆಯೇನೋ ಎಂಬಂತೆ ಇನ್ನೂ ಐವತ್ತರ ಆ ಮಗ್ಗುಲಲ್ಲೇ ಇದ್ದಂತಿದ್ದ, ಆ ಚಾರಿತ್ರಿಕ ವ್ಯಕ್ತಿ ಒಮ್ಮೆಲೇ 27 ವರ್ಷಗಳನ್ನು ನೆಗೆದು ನಡೆದು ಬರುತ್ತಿರುವುದನ್ನು ಅದೇ ಬಿಗಿಮುಷ್ಟಿ ಎತ್ತಿಹಿಡಿದು ತಮ್ಮತ್ತ ಬರುತ್ತಿರುವು ದನ್ನು ಕಂಡು ಭಾವಪರವಶರಾದರು. ಅವರಷ್ಟೇ ಅಲ್ಲ ಇಡೀ ವಿಶ್ವವೇ ಕುಣಿದಾಡಿತು.

ಡಾ। ನೆಲ್ಸನ್ ರೋಲಿಹ್‌ಲಾಹ್ಲಾ ಮಂಡೇಲಾ ಬಿಡುಗಡೆಯಾದರು. ಫೆಬ್ರವರಿ 11ರ ಸ್ಥಳೀಯ ಸಮಯ ಸಂಜೆ 4.14 ಕ್ಕೆ.

ಇಡೀ ವಿಶ್ವದ ಪ್ರಜಾಪ್ರಭುತ್ವವಾದಿ ಜನಸಮೂಹಗಳ ಅಭೂತಪೂರ್ವ ಬೆಂಬಲ ಪಡೆದ ದಕ್ಷಿಣ ಆಫ್ರಿಕಾದ ಜನರ ಅರ್ಧ ಶತಮಾನದ ನಿರಂತರ ಹೋರಾಟ ಒಂದು ಬೃಹತ್ ವಿಜಯ ಸಾಧಿಸಿತು.

ಸ್ವತಃ ಮಂಡೇಲಾ ಬಿಡುಗಡೆಯ ಸ್ವಲ್ಪವೇ ಮೊದಲು ನೀಡಿದ ಸಂದರ್ಶನದಲ್ಲಿ ಹೇಳಿದಂತೆ ಇದು ವಿಮೋಚನಾ ಹೋರಾಟದ ಮತ್ತು ಅಂತರಾಷ್ಟ್ರೀಯ ಒತ್ತಡದ ಫಲ.

> ‘ಬಿಳಿಯರಿಗೆ ಪ್ರಜಾಪ್ರಭುತ್ವದ ವಾಸ್ತವತೆ ನೆನೆಸಿಕೊಂಡರೇ ಭಯ. ಎಂದಿನವರೆಗೆ ತಮ್ಮ “ಗುಂಪು ಹಕ್ಕು” ಗಳ ಬಗ್ಗೆ ಮಾತನಾಡುತ್ತಾರೋ ಅಂದಿನ ವರೆಗೆ ಅವರು ವರ್ಣದ್ವೇಷದ ನುಡಿಗಟ್ಟಿನಲ್ಲೇ ಮಾತನಾಡಿದಂತೆ.’

“ದಕ್ಷಿಣ ಆಫ್ರಿಕಾದಲ್ಲಿ ಸಾಮರಸ್ಯ ನಾನು ಸದಾ ಬಯಸಿದ್ದೆ. ಆದ್ದರಿಂದ ಒಂದು ಜನಾಂಗದ್ವೇಷಿಯಲ್ಲದ ಪ್ರಜಾಪ್ರಭುತ್ವ ದೇಶ ಕಟ್ಟುವ ಆಸೆ ಇರುವ ಯಾವುದೇ ಅವಕಾಶವನ್ನು ಪೂರ್ಣವಾಗಿ ಬಳಸಲು ನಾನು ಬದ್ಧ. ದುರದೃಷ್ಟವಶಾತ್ ಬಿಳಿಯರಿಗೆ ಪ್ರಜಾಪ್ರಭುತ್ವದ ವಾಸ್ತವತೆ ನೆನೆಸಿಕೊಂಡರೇ ಭಯ. ಅವರು ತಮ್ಮ ಸಮೂಹ ಹಕ್ಕುಗಳ ಬಗ್ಗೆ ಎಂದಿನ ವರೆಗೆ ಮಾತನಾಡುತ್ತಾರೋ ಅಂದಿನ ವರೆಗೆ ಅವರು ವರ್ಣದ್ವೇಷದ ಭಾಷೆಯಲ್ಲೇ ಮಾತನಾಡಿದಂತೆ”

26 ವರ್ಷಗಳ ಹಿಂದೆಯೂ ಮಂಡೇಲಾ ಇದನ್ನೇ ಹೇಳಿದ್ದರು. ಅವರನ್ನು ಕಾನೂನು ಬಾಹಿರವಾಗಿ ಜೀವಾವಧಿ ಶಿಕ್ಷೆಗೆ ಗುರಿಮಾಡಿದ ವರ್ಣದ್ವೇಷಿಗಳ ವಿಚಾರಣೆಗೆ ಉತ್ತರ ಕೊಡುತ್ತಾ ಏಪ್ರಿಲ್ 20, 1964 ರಂದು ಅವರು ಉದ್ಗರಿಸಿದ್ದರು. - “ಎಲ್ಲಕ್ಕೂ ಮಿಗಿಲಾಗಿ ನಮಗೆ ಸಮಾನ ರಾಜಕೀಯ ಹಕ್ಕುಗಳು ಬೇಕು. ಯಾಕೆಂದರೆ ಅವಿಲ್ಲದಿದ್ದರೆ ನಮ್ಮ ಮೇಲೆ ಹೇರಿದ ನ್ಯೂನತೆಗಳು ಶಾಶ್ವತವಾಗಿ ಉಳಿಯುತ್ತವೆ. ಈ ದೇಶದ ಬಿಳಿಯರಿಗೆ ಇದು ಕ್ರಾಂತಿಕಾರಕವಾಗಿ ಕಾಣುತ್ತದೆ ಎಂದು ನನಗೆ ಗೊತ್ತು. ಯಾಕೆಂದರೆ ಆಗ ಮತದಾರರಲ್ಲಿ ಬಹು ಸಂಖ್ಯಾತರು ಆಫ್ರಿಕನ್ನರು. ಆದ್ದರಿಂದ ಬಿಳಿಯರಿಗೆ ಪ್ರಜಾಪ್ರಭುತ್ವವೆಂದರೆ ಭಯ.

ಆದರೆ ಈ ಭಯ ಎಲ್ಲರಿಗೂ ಸ್ವಾತಂತ್ರ್ಯ, ಜನಾಂಗೀಯ ಸಾಮರಸ್ಯ ನೀಡಬಲ್ಲ ಏಕೈಕ ಪರಿಹಾರಕ್ಕೆ ಅಡ್ಡಿಯಾಗಲು ಬಿಡೆವು. ಎಲ್ಲರಿಗೂ ಮತ ನೀಡುವ ಹಕ್ಕು ಕೊಟ್ಟರೆ. ಜನಾಂಗೀಯ ಪ್ರಾಬಲ್ಯ ಹೇರಲಾಗುತ್ತದೆ ಎಂಬುದು ನಿಜವಲ್ಲ. ವರ್ಣದ ಮೇಲೆ ನಿಂತ ರಾಜಕೀಯ ವಿಭಜನೆ ಸಂಪೂರ್ಣ ಕೃತಕ. ಅದು ಮಾಯವಾದಾಗ ಒಂದು ವರ್ಣದ ಗುಂಪು ಇನ್ನೊಂದರ ಮೇಲೆ ನಡೆಸುವ ಪ್ರಾಬಲ್ಯವೂ ಮಾಯವಾಗುತ್ತದೆ.”

ಮೂರು ದಶಕದ ಜೈಲುವಾಸ, ಹೊರಗೆ ತನ್ನ ದೇಶಬಾಂಧವರು ಎದುರಿಸಿದ ಅಪಾರ ನೋವು, ದಬ್ಬಾಳಿಕೆ ದಕ್ಷಿಣ ಆಫ್ರಿಕಾದ ವಿಮೋಚನಾ ಹೋರಾಟದ, ನೆಲ್ಸನ್ ಮಂಡೇಲಾರ ತತ್ವಬದ್ಧತೆಯನ್ನು ಕಿಂಚಿತ್ತೂ ಬದಲಿಸಿಲ್ಲ. ಇದು ವಿಮೋಚನಾ ಹೋರಾಟದ ಮಾನವೀಯತೆಯನ್ನು, ಜತೆಗೆ ಈಗಲೂ ತಮ್ಮ ‘ಸಮೂಹ ಹಕ್ಕುಗಳ’ ಮೂಲಕ ವಷ್ಟೇ ಕಾಣುವ ವರ್ಣದ್ವೇಷಿಗಳ, ಅವರ ಪೋಷಕರಾದ ಸಾಮ್ರಾಜ್ಯಶಾಹಿಗಳ ಸಂಕುಚಿತತೆಯನ್ನು, ಅಮಾನವೀಯತೆಯನ್ನು ತೋರುವುದಿಲ್ಲವೇ?

> ತನ್ನ ನಾಝೀ ಪಿತೃವಿನ ನಾಶದ ಮೂರು ವರ್ಷಗಳ ನಂತರ ಹುಟ್ಟಿದ ವರ್ಣದ್ವೇಷಿ ಆಳ್ವಿಕೆ ತನ್ನ ಹುಟ್ಟಿನ ಆರಂಭದಿಂದಲೇ ಒಂದು ಚಾರಿತ್ರಿಕ ಅಸಂಗತಿ, ಕಳೆದು ಹೋಗುತ್ತಿದ್ದ ಯುಗದ ಪಳೆಯುಳಿಕೆ ಅದು ನಾಲ್ಕು ದಶಕ ಇನ್ನೂ ಉಳಿದಿದೆ ಎನ್ನುವುದು ಸಾಮ್ರಾಜ್ಯಶಾಹಿ ಶಕ್ತಿಗಳ ಪ್ರತಿಗಾಮಿ ಶಕ್ತಿಗಳು ಜಿಗುಟುತನದ ಸೂಚಕ.
>
> -ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ ಅಧ್ಯಕ್ಷ ಆಲಿವರ್ ಟಾಂಬೋ

ಆದ್ದರಿಂದಲೇ ಮಂಡೇಲಾ ಘೋಷಿಸಿದರು ನಮ್ಮ ಜನತೆ ರಾಜಕೀಯ ಸಮಾನತೆ, ಆರ್ಥಿಕ ಸಮಾನತೆ, ಸ್ವಾತಂತ್ರ್ಯ ಸಾಧಿಸುವವರೆಗೆ ನಮ್ಮ ಹೋರಾಟಗಳನ್ನು ಕಡಿಮೆ ಮಾಡುವುದಿಲ್ಲ, ಸ್ವಾತಂತ್ರ್ಯ ಕಂತುಗಳಲ್ಲಿ ಕೊಡಲಾಗುವುದಿಲ್ಲ. ಒಬ್ಬ ಒಂದೋ ಸ್ವತಂತ್ರ ಅಥವಾ ಅಸ್ವತಂತ್ರ. ಇದರಲ್ಲಿ ಅರೆಬರೆ ಇಲ್ಲ.

ಬಿಳಿಯರ ಅಲ್ಪಮತದ ಸರ್ಕಾರ ತಾನೇ ಹಾಕಿಕೊಂಡ ವರ್ಣದ್ವೇಷದ ಹಂದರ ಮುರಿಯುವ ಅಜೆಂಡಾವನ್ನು, ಅದರ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ತಾನು ಒಪ್ಪಿಕೊಂಡಿಲ್ಲ ಎಂದು ಸ್ಪಷ್ಟವಾಗಿ ಸಾರಿದರು ಮಂಡೇಲಾ. ಸ್ವಾತಂತ್ರ್ಯದ ತನ್ನ ವಿಚಾರಗಳನ್ನು ಅದು ಇನ್ನು ಮುಂದೆ ನಮ್ಮ ಮೇಲೆ ಹೇರಲು ಸಾಧ್ಯವಿಲ್ಲ. ಸರ್ಕಾರದೊಡನೆ ಎ.ಎನ್.ಸಿ.ಯ. ಮಾತುಕತೆಯ ಆಧಾರಭೂತ ಅಂಶಗಳು ಎರಡು- ಒಂದು ಏಕಘಟಕ ಪ್ರಭುತ್ವದಲ್ಲಿ ಬಹುಮತದ ಆಳ್ವಿಕೆ, ಎರಡು, ಬಿಳಿಯರ ರಾಜಕೀಯ ಹಕ್ಕುಗಳ ರಕ್ಷಣೆ ಎಂದು ಸ್ಪಷ್ಟಪಡಿಸಿದರು. ಡಾ। ಮಂಡೇಲಾ.

> ದಕ್ಷಿಣ ಆಫ್ರಿಕಾದ ಆಡಳಿತ ತೀವ್ರ ಬಿಕ್ಕಟಿನಲ್ಲಿದೆ ಅದೂ ಸಂಪೂರ್ಣ ಬಿಕ್ಕಟ್ಟು ಇದು. ಹಿಂದೆ ದಕ್ಷಿಣ ಆಫ್ರಿಕಾದ ಆರ್ಥಿಕತೆ ಮುನ್ನಡೆಯಲು ನೆರವಾದ ಲಕ್ಷಣಗಳೇ ಇದೀಗ ಅದರ ಬೆಳವಣಿಗೆಗೆ ಅಡ್ಡಿಯಾಗಿವೆ. ಜನಾಂಗ ವಿಭಜಿತ ಸಮಾಜ, ಈ ದಮನವನ್ನು ಗಟ್ಟಿಗೊಳಿಸುವ ಕಂತೆ-ಕಂತೆ ಕಾನೂನುಗಳು ಇದೇ ಆ ಲಕ್ಷಣಗಳು. ಬಿಕ್ಕಟ್ಟಿನಿಂದ ಹೊರಬರಲು ಬಿಡದ ಸಂಗತಿಗಳು.
>
> - ಎ.ಎನ್.ಸಿ.ಯ
> ಉಪ ಪ್ರಧಾನ ಕಾರ್ಯದರ್ಶಿ
> ಹೆನ್ರಿ ಮಕ್‌ಗೋಲೆ

“ನಾನಿಲ್ಲಿ ಒಬ್ಬ ಪ್ರವಾದಿಯಾಗಿ ನಿಂತಿಲ್ಲ. ನಿಮ್ಮೆಲ್ಲರ, ಜನತೆಯ ನಮ್ರ ಸೇವಕನಾಗಿ ನಿಂತಿದ್ದೇನೆ. ಆದ್ದರಿಂದ ನನ್ನ ಜೀವನದ ಉಳಿದ ಅವಧಿಯನ್ನು ನಿಮ್ಮ ಕೈಗಳಲ್ಲಿ ಮಡಗಿದ್ದೇನೆ” ತಾನು ವರ್ಣದ್ವೇಷಿಗಳ ಕಾರಾಗೃಹದಲ್ಲಿದ್ದಾಗ ಹೊರಗೆ ಅದೇ ರಕ್ಕಸರ ಪೈಶಾಚಿಕತೆಯನ್ನು ಎದುರಿಸಿ ನಿಂತ ಜನತೆಗೆ ತಮ್ಮ ಕೃತಜ್ಞತೆ ಅರ್ಪಿಸಿದರು ಮಂಡೇಲಾ ಕೇಪ್‌ಟೌನಿನ ಪುರಭವನದ ಮೆಟ್ಟಿಲುಗಳ ಮೇಲೆ ನಿಂತು 5 ಲಕ್ಷ ದೇಶಬಾಂಧವರನ್ನುದ್ದೇಶಿಸಿ ಮಾತನಾಡುತ್ತಾ.

“ವರ್ಣದ್ವೇಷಿ ಆಳ್ವಿಕೆಯನ್ನು ನಾಶಮಾಡಬೇಕು. ಯಾಕೆಂದರೆ ಅದು ದಕ್ಷಿಣ ಆಫ್ರಿಕಾದ ಮೇಲಷ್ಟೇ ಅಲ್ಲ ಇಡೀ ಆಫ್ರಿಕಾಖಂಡದ ದಕ್ಷಿಣ ಪ್ರದೇಶದ ಮೇಲೆಯೇ ಅನಾಹುತಗಳನ್ನು ಹೇರಿದೆ. ನನ್ನ ಮಿಲಿಯಾಂತರ ಜನಗಳ ಕುಟುಂಬಜೀವನವನ್ನೇ ಅದು ನುಚ್ಚುನೂರು ಮಾಡಿದೆ. ಮಿಲಿಯಾಂತರ ಜನಗಳಿಗೆ ಮನೆಯಿಲ್ಲ. ಉದ್ಯೋಗವಿಲ್ಲ. ದೇಶದ ಆರ್ಥಿಕ ಪಾಳುಬಿದ್ದಿದ್ದೆ ಎ.ಎನ್.ಸಿ.ಯ ಸೈನಿಕ ವಿಭಾಗವಾದ ವಿಮ್ ಖೊಂಟೋ ವಿ ಸಿಜ್ವೆ (ದೇಶದ ಈಟಿ) ಯನ್ನು 1960ರಲ್ಲಿ ಆರಂಭಿಸಿ ಸಶಸ್ತ್ರ ಹೋರಾಟಕ್ಕಿಳಿದದ್ದು ಪೂರ್ಣವಾಗಿ ವರ್ಣದ್ವೇಷದ ಹಿಂಸಾಚಾರದ ವಿರುದ್ಧ ನಮ್ಮ ರಕ್ಷಣಾತ್ಮಕ ಕಾರ್ಯಾಚರಣೆ. ಅಂದು ಸಶಸ್ತ್ರ ಹೋರಾಟದ ಅಗತ್ಯವಿತ್ತು. ಈಗ ಕೂಡಾ ಅದು ಅಗತ್ಯ. ಸಶಸ್ತ್ರ ಹೋರಾಟ ಮುಂದುವರಿಸುವುದಲ್ಲದೆ ಅನ್ಯಮಾರ್ಗವಿಲ್ಲ. ಸಶಸ್ತ್ರ ಹೋರಾಟದ ಅಗತ್ಯವಿಲ್ಲವೆಂದಾಗಬೇಕಾದರೆ ಮಾತುಕತೆಯ ಮೂಲಕ ಇತ್ಯರ್ಥಕ್ಕೆ ಅನುಕೂಲಕರ ವಾತಾವರಣ ಮೂಡಿಸಬೇಕು”- ‘ವಿನಾ ಮಂಡೇಲಾ’ದ ಘೋಷಣೆಗಳ ನಡುವೆ ಮಂಡೇಲಾ ಹೇಳಿದರು.

“ನಾವು ನಮ್ಮ ಸ್ವಾತಂತ್ರ್ಯಕ್ಕಾಗಿ ಬಹಳ ಕಾಲ ಕಾದಿದ್ದೇವೆ. ಇ ಕಾಯಲಾರೆವು. ಎಲ್ಲಾ ರಂಗಗಳಲ್ಲಿ ಹೋರಾಟಗಳ ತೀವ್ರಗೊಳಿಸಬೇಕಾದ ಸಮಯವಿದು. ಸ್ವಾತಂತ್ರ್ಯದ ಹೊಂಬೆ ದಿಗಂತದಲ್ಲಿ ಮೂಡುತ್ತಿರುವಾಗ ನಮ್ಮ ಪ್ರಯತ್ನಗ ದ್ವಿಗುಣಗೊಳ್ಳಬೇಕು. ಬಿಳಿಯ ದೇಶಬಾಂಧವರೇ ಬನ್ನಿ. ಹೊಸದೊಂ ದಕ್ಷಿಣ ಆಫ್ರಿಕಾ ಕಟ್ಟುವಲ್ಲಿ ನಮ್ಮ ಜತೆಗೂಡಿ. ಸ್ವಾತಂತ್ರ್ಯ ಅಂದೋ ನಿಮಗೂ ಒಂದು ರಾಜಕೀಯ ಆಲಯ. ವರ್ಣದ್ವೇಷಿ ಆಳ್ವಿಕೆಯ

> ‘1960 ರಲ್ಲಿ ಸಶಸ್ತ್ರ ಹೋರಾಟಕ್ಕಿಳಿದಾಗ ಅದ ಅಗತ್ಯವಿತ್ತು. ಈಗಲೂ ಅದರ ಅಗತ್ಯ ಇದೆ. ಸಶ ಹೋರಾಟ ಮುಂದುವರಿಸುವುದಲ್ಲದೆ ಅ ಮಾರ್ಗವಿಲ್ಲ’

ದೂರತಳ್ಳಿ ಎಂದು ಅಂತರಾಷ್ಟ್ರೀಯ ಸಮುದಾಯಕ್ಕೆ ನೀಡುತ್ತೇವೆ.” ಮಂಡೇಲಾ ಕೇಪ್‌ಟೌನಿನ ಪುರಭವನದ ಮೆಟ್ಟಿಲು ಮೇಲಿಂದ ಕರೆ ನೀಡಿದರು. ಐದು ಲಕ್ಷ ಆಫ್ರಿಕನ್ನರು ಮಾತ್ರವ ಇಡೀ ವಿಶ್ವವೇ ಆಲಿಸಿತು.

ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಹೇಳಿರುವಂತೆ ಮಂಡೆ ಬಿಡುಗಡೆ ದುಷ್ಟ ವರ್ಣದ್ವೇಷಿ ಆಳ್ವಿಕೆಯ ಮೇಲೆ ಅಂ ವಿಜಯವಲ್ಲ. ಮೊದಲ ಬೃಹತ್ ವಿಜಯ. ಇದು ಎಲ್ಲರಿಗ ಚೆನ್ನಾಗಿ ದಕ್ಷಿಣ ಆಫ್ರಿಕನ್ನರಿಗೆ, ಎ.ಎನ್.ಸಿ.ಗೆ. ಗೊತ್ತು. ಆದ್ದರಿಂದ ಮಂಡೇಲಾ ಎಲ್ಲಾ ರಂಗಗಳಲ್ಲಿ ಹೋರಾಟ ತೀವ್ರಗೊಳಿಸುವ ನೀಡಿದರು. ಅಗಾಧ ತ್ಯಾಗ, ಬಲಿದಾನಗಳನ್ನಿತ್ತು ದಕ್ಷಿಣ ಆಫ್ರಿ ಜನತೆ ಎ.ಎನ್.ಸಿ. ಮತ್ತು ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷ ಸಾ ಸವಾಲೆಸೆಯುವ ತಮ್ಮ ಸತತ ಹೋರಾಟ ಮುಂದುವರಿಸಿ ಧ್ಯೇಯವನ್ನು ಖಂಡಿತಾ ಸಾಧಿಸುತ್ತಾರೆ ಎಂಬ ಸಂಪೂರ್ಣ ಭ ನಮಗಿದೆ.





ಸಿ.ಐ.ಟಿ.ಯು ಸಂತಸ

ವರ್ಣದ್ವೇಷ ಮತ್ತು ಶೋಷಣೆಯ ವಿರುದ್ಧ ಪ್ರಸಿದ್ಧ ಹೋರಾಟಗಾರ ನೆಲ್ಸನ್ ಮಂಡೇಲಾ ಬಿಡುಗಡೆಯ ಬಗ್ಗೆ ಸಿ.ಐ.ಟಿ.ಯು. ತನ್ನ ಅತೀವ ಹರ್ಷವನ್ನು ವ್ಯಕ್ತಪಡಿಸಿದೆ. ಫ್ರೆಬ್ರುವರಿ 12 ರಂದು ಪ್ರಧಾನ ಕಾರ್ಯದರ್ಶಿ ಸಮರ್ ಮುಖರ್ಜಿಯವರು ಈ ಬಗ್ಗೆ ಒಂದು ಹೇಳಿಕೆ ನೀಡಿ ಪ್ರಿಟೋರಿಯಾ ಆಳ್ವಿಕೆಯ ಸ್ಥಾನದಲ್ಲಿ ಪ್ರಜಾಪ್ರಭುತ್ವ ಆಯ್ಕೆಯ ಆಧಾರದ ಮೇಲೆ ಒಂದು ಜನಾಂಗ - ದ್ವೇಷಿಯಲ್ಲದ ಸರಕಾರ ಬರುವವರೆಗೆ ವರ್ಣದ್ವೇಷಿ ಸರಕಾರದ ವಿರುದ್ಧ ಅಂತರಾಷ್ಟ್ರೀಯ ದಿಗ್ಬಂಧನಗಳು ಮುಂದುವರಿಯಬೇಕೆಂದು ಈ ಗೌರವಾನ್ವಿತ ಮುಂದಾಳುವಿನ ನಿಲುವನ್ನು ಸಿ.ಐ.ಟಿ.ಯು ಪೂರ್ಣವಾಗಿ ಅನುಮೋದಿಸುತ್ತದೆ ಎಂದು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಥ್ಯಾಚರ್ ಸರಕಾರ ನಾಚಿಕೆಯಿಲ್ಲದೆ ಕೆಲವು ದಿಗ್ಬಂಧನಗಳನ್ನು ಹಿಂತೆಗೆದುಕೊಂಡಿರುವುದನ್ನು ಕಾಂ. ಸಮರ್ ಮುಖರ್ಜಿ ಖಂಡಿಸಿದ್ದಾರೆ.

ದಕ್ಷಿಣ ಆಫ್ರಿಕಾರದ ನಮ್ಮ ಹೋರಾಟನಿರತ ಸಹೋದರನನ್ನು ಬೆಂಬಲಿಸಬೇಕೆಂದು ಭಾರತದ ಕಾರ್ಮಿಕವರ್ಗಕ್ಕೇ ಸಿ.ಐ.ಟಿ.ಯು ಕರೆ ನೀಡಿದೆ.

ಪೊಲಿಟ್‌ಬ್ಯೂರೋ ಹಾರ್ದಿಕ ಸ್ವಾಗತ

ಅತ್ಯಂತ ಮಹತ್ವದ ವಿಜಯ .....ಆದರೆ ಅಂತಿಮ ವಿಜಯವಲ್ಲ

ಫ್ರೆಬ್ರುವರಿ 11 ರಂದು ಸಿ.ಪಿ.ಐ. (ಎಂ) ಪೊಲಿಟ್‌ಬ್ಯೂರೋ ಒಂದು ಪತ್ರಿಕಾ ಹೇಳಿಕೆ ನೀಡಿ ನೆಲ್ಸನ್ ಮಂಡೇಲಾರವರನ್ನು 27 ವರ್ಷಗಳ ದೀರ್ಘ ಕಠಿಣ ಕಾರಾಗೃಹವಾಸದ ನಂತರ ಬಿಡುಗಡೆ ಮಾಡಿರುವುದನ್ನು ಹಾರ್ದಿಕವಾಗಿ ಸ್ವಾಗತಿಸಿದೆ. ದುಷ್ಟ ವರ್ಣ ದ್ವೇಷಿ ಸರಕಾರದ ವಿರುದ್ಧ ಎ.ಎನ್.ಸಿ. ನೇತೃತ್ವದಲ್ಲಿ ದಕ್ಷಿಣ ಆಫ್ರಿಕಾದ ಜನರ ವೀರ ಹೋರಾಟಗಳು, ಪ್ರಬಲ ಅಂತರ್ರಾಷ್ಟ್ರೀಯ ಸೌಹಾರ್ದತೆ ಮತ್ತು ಅಂತರ್ರಾಷ್ಟ್ರೀಯ ಪ್ರಜಾಪ್ರಭುತ್ವ ಆಂದೋಲನದ ಬಲದಿಂದಾಗಿ ನೆಲ್ಸನ್ ಮಂಡೇಲಾರನ್ನು ಬಿಡುಗಡೆ ಗೊಳಿಸುವುದಲ್ಲದೆ ವರ್ಣದ್ವೇಷಿ ಸರಕಾರಕ್ಕೆ ಮತ್ತು ಅದರ ಸಾಮ್ರಾಜ್ಯಶಾಹಿ ಗುರುಗಳಿಗೆ ಬೇರೆ ದಾರಿಯಿರಲಿಲ್ಲ ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ನೆಲ್ಸನ್ ಮಂಡೇಲಾರ ಬಿಡುಗಡೆ ಎ.ಎನ್.ಸಿ. ನೇತೃತ್ವದಲ್ಲಿ ದಕ್ಷಿಣ ಆಫ್ರಿಕಾದ ಜನತೆ ನಡೆಸಿದ ದೀರ್ಘ, ವೀರಾವೇಶದ ಹೋರಾಟಕ್ಕೆ ಮತ್ತು ಮಾನವ ಘನತೆ ಮತ್ತು ಸ್ವಾತಂತ್ರ್ಯಕ್ಕೆ ಬೆಲೆ ಕೊಡುವ ಎಲ್ಲರಿಗೂ ಒಂದು ಗಮನಾರ್ಹ ವಿಜಯ.

ಎ.ಎನ್.ಸಿ. ಮೇಲೆ ನಿಷೇಧ ತೆಗೆದಿರುವುದು ಮತ್ತು ನೆಲ್ಸನ್ ಮಂಡೇಲಾರ ಬಿಡುಗಡೆ ಜನತೆಯ ಹೋರಾಟದಲ್ಲಿ ಅತ್ಯಂತ ಮಹತ್ವಪೂರ್ಣ ವಿಜಯಗಳಾದರೂ, ದುಷ್ಟ ವರ್ಣದ್ವೇಷಿ ಆಳ್ವಿಕೆಯ ವಿರುದ್ಧ ಅಂತಿಮ ವಿಜಯವಲ್ಲ ಎಂದು ಪೊಲಿಟ್‌ಬ್ಯೂರೋ ಅಭಿಪ್ರಾಯ ಪಟ್ಟಿದೆ. ವರ್ಣ ದ್ವೇಷವನ್ನು ಮುರಿದು ಹಾಕುವ, ದಕ್ಷಿಣ ಆಫ್ರಿಕಾದಲ್ಲಿ ಒಂದು ನಿಜವಾದ ಪ್ರಜಾಸತ್ತಾತ್ಮಕ , ನ್ಯಾಯ ಪೂರ್ಣ ಸಮಾಜಕ್ಕಾಗಿನ ಹೋರಾಟವನ್ನು ಇನ್ನಷ್ಟು ಚೈತನ್ಯದಿಂದ ಮುಂದುವರಿಸಬೇಕು ಎಂದು ಅದು ಹೇಳಿದೆ.

ಎಂದಿನಂತೆ ಸಿ.ಪಿ.ಐ. (ಎಂ) ವರ್ಣದ್ವೇಷಿ ಆಳ್ವಿಕೆಯನ್ನು ತೊಲಗಿಸಿ ಅಂತಿಮ ವಿಜಯ ಸಾಧಿಸುವ ದಕ್ಷಿಣ ಆಫ್ರಿಕಾದ ಜನತೆ, ಅದರ ಮುಂದಾಳು ಎ.ಎನ್.ಸಿ.ಯ ಹೋರಾಟಗಳಿಗೆ ತನ್ನ ಅಸಂದಿಗ್ಧ ಹಾಗೂ ಅಖಂಡ ಬೆಂಬಲ ಮುಂದುವರಿಸುವುದಾಗಿ ಪೊಲಿಟ್‌ಬ್ಯೂರೋ ಭರವಸೆ ನೀಡಿದೆ.

ದೋಣಿಗಳು ತೀರಗಳ ಸೇರಬೇಕು

ಹಾಡ ಹಾಡಿದ ಗಳಿಗೆ ತಲೆಯೆತ್ತಿ ಬಾಹುಗಳ
ಕಪ್ಪುಕುಕ್ಕುವ ಕೈಯ ಪಡೆಯಬೇಕು
ಕಪ್ಪು ಹೊದ್ದಿಹ ಗಾಳಿ, ಕಪ್ಪು ಲೇಪಿತ ಮೋಡ
ಕಪ್ಪು ಜನರಿಗೆ ನಗೆಯ ನೀಡಬೇಕು.

ಬಿಡುಗಡೆಯ ಬಯಕೆಗಳ ಪುಟ್ಟನ್ನು ಹಿಡಿದಂತ
ದೋಣಿಗಳು ತೀರಗಳ ಸೇರಬೇಕು
ಕಪ್ಪು ಕುಡಿಕೆಗಳಲ್ಲಿ ಕನಸುಗಳ ಕೂಡಿಡುತ
ಬಿಳುಪು ನಗೆಗಳ ಜನರ ನೀಗಬೇಕು

ಬೀಸುಕಲ್ಲಿನ ನಡುವೆ ಕಪ್ಪು ಜನಗಳ ಕೂಗು
ಕನಸ ಕುಟ್ಟಿದ ಒನಕೆ. ಸಾಯಬೇಕು
ಬೆಳ್ಳಿನಗೆಗಳ ಹೊತ್ತು ಬಂದೂಕು ಹಿಡಿದಂತ
ಜನಗಳದೇ ಶವಯಾತ್ರೆ ನಡೆಯಬೇಕು

ಹಾಡು ಉಕ್ಕಲೇ ಬೇಕು ಎದೆಯಂತರಾಳದಲಿ
ಕನಸು ಚಿಗುರಲೇ ಬೇಕು ನೋವ ಕಣಕಣದಲ್ಲಿ
ಕನಸುಗಳು, ಕಾವ್ಯಗಳು ಹಾಡುಗಳ ಹೊಲದಲ್ಲಿ
ಹೊಸತನದ ಗಿಡಗಳನ್ನು ಬೆಳೆಸಬೇಕು.

ಸೂರ್ಯನ್ನ ಮರೆ ಮಾಡಿ ಬೆಳಕನ್ನು ಕದ್ದಂತ
ಜನಗಳಿಗೆ ಕೈಕೋಳ ತೊಡಿಸಬೇಕು
ಹಸಿರನ್ನು ಕದ್ದಂತ ಉಸಿರನ್ನು ಪಡೆದಂತ
ಜನಗಳನು ಗಲ್ಲುಗಳು ಕರೆಯಬೇಕು.

ಕಾವ್ಯ ಪುಟ್ಟಲೇ ಬೇಕು ಖಡ್ಗಗಳ ಮರೆಯಲ್ಲಿ
ಮಾತು ಚಿಗುರಲಿ ಇನ್ನು ಮೌನ ದೂಡಿ
ಕಾವ್ಯಗಳು ಖಡ್ಗಗಳು ಹಸ್ತಲಾಘವ ನೀಡಿ
ಮಂಡೇಲ ಕನಸುಗಳ ಹಾಡಬೇಕು.

— ಜಿ.ಎನ್. ಮೋಹನ್

ಮಂಡೇಲ ಬಿಡುಗಡೆಯ ವಿಜಯೋತ್ಸವ

('ಐಕ್ಯರಂಗ' ಪ್ರತಿನಿಧಿಯಿಂದ)

ಬಂದೀಖಾನೆಯಲ್ಲಿದ್ದುಕೊಂಡೇ ವಿಶ್ವದ ಹಲವು ಕವಿಗಳ ಕಾವ್ಯದಲ್ಲಿ ಕಲಾವಿದರ ಹಾಡು ಕುಣಿತಗಳಲ್ಲಿ ಬಿಚ್ಚಿಕೊಂಡ ನೆಲ್ಸನ್ ಮಂಡೇಲರ ಬಿಡುಗಡೆ ಸಂತಸದ ಮಿಂಚೊಂದನ್ನು ಹುಟ್ಟು ಹಾಕಿದೆ.

ಈ ಸಂತಸವನ್ನು ಹಂಚಿಕೊಂಡು ವಿಶ್ವದ ಹಿರಿಯ ನಾಯಕನಿಗೆ ತಮ್ಮ ಬೆಂಬಲ ಸೂಚಿಸಲು ಬಂಡಾಯ ಸಾಹಿತ್ಯ ಸಂಘಟನೆ ಫೆಬ್ರುವರಿ 10 ರಂದು ವಿಶಿಷ್ಟ ರೀತಿಯ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ಬೆಂಗಳೂರಿನ ಯುವ ಕಲಾವಿದರು ಕವಿಗಳು ಸಂಗೀತಕಾರರು ಮಹಾತ್ಮಗಾಂಧಿ ಪ್ರತಿಮೆಯ ಬಳಿ ಸೇರಿ ಅಲ್ಲಿಂದ ಮಹಾತ್ಮಗಾಂಧಿ ರಸ್ತೆಯ ಅಂತ್ಯದಲ್ಲಿರುವ ಮೇಯೋಹಾಲ್ ಪಾರ್ಕ್ ವರೆಗೆ ನೆಲ್ಸನ್ ಮಂಡೇಲಗಾಗಿ ಓಟ ನಡೆಸಿದರು.

ಹಿನ್ನೆಲೆಯಲ್ಲಿ 11 ಅಡಿ ಎತ್ತರದ ಕೆಂಪು ಬಟ್ಟೆಯ ನೆಲ್ಸನ್ ಮಂಡೇಲ ಬಿಡುಗಡೆಗೆ ಈ ಹಿಂದೆ ಒತ್ತಾಯಿಸಿದ್ದ ವಿಶಿಷ್ಟ ಗಾಳಿಪಟವನ್ನು ಉದ್ಯಾನವನದ ಮರಕ್ಕೆ ಕಟ್ಟಿ ವೇದಿಕೆ ನಿರ್ಮಿಸಲಾಗಿತ್ತು. ಮುಂದೆ ಉರಿಯುತ್ತಿದ್ದ ಪಂಜನ್ನು ಹಿಡಿದ ಯುವ ಕ್ರೀಡಾಳುಗಳು, ನೆಲ್ಸನ್ ಮಂಡೇಲ ಬಿಡುಗಡೆ ಹಾಗೂ ಆಫ್ರಿಕಾದ ಸ್ಥಿತಿಯನ್ನು ಕುರಿತು ಹಾಡುಗಳನ್ನು ಹಾಡಿದ ನಂತರ ಆ ಉದ್ಯಾನವನಕ್ಕೆ ಸಂತಸದ ಘೋಷಣೆಯ ನಡುವೆ 'ನೆಲ್ಸನ್ ಮಂಡೇಲ ಉದ್ಯಾನವನ' ಎಂದು ಹೆಸರಿಸಲಾಯಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಇಂದಿನ ಹಲವು ಸಮಯ ಸಾಧಕ ರಾಜಕಾರಣಿಗಳ ನಡುವೆ ನೆಲ್ಸನ್ ಮಂಡೇಲ ಒಂದು ಚೈತನ್ಯವಾಗಿದ್ದಾರೆ. ಮಂಡೇಲ ಒಬ್ಬ ವ್ಯಕ್ತಿಯಲ್ಲ ಶಕ್ತಿ. ಭಾರತದಲ್ಲಿ ಅಸ್ಪೃಶ್ಯತೆ ವಿರುದ್ಧ ತೀವ್ರ ಹೋರಾಟ ನಡೆಸಿದರೆ ಮಾತ್ರ ಮಂಡೇಲ ಬಿಡುಗಡೆಯ ವಿಜಯೋತ್ಸವಕ್ಕೆ ನಿಜ ಅರ್ಥ ಸಿಕ್ಕುತ್ತದೆ ಎಂದರು.

ಕವಿ ರಂಜಾನ್‌ದರ್ಗಾ ಅವರು ಮಾತನಾಡಿ ವಿಶ್ವದ ಎಲ್ಲ ರಾಷ್ಟ್ರಗಳ ಜನರ ತೀವ್ರ ಒತ್ತಡದಿಂದ ಮಂಡೇಲರನ್ನು ಬಿಡುಗಡೆ ಮಾಡಲಾಗಿದೆ ಎಂದರು. ಪತ್ರಕರ್ತ ಜಿ.ಎನ್. ಮೋಹನ್ ಆಫ್ರಿಕಾ ಹಾಗೂ ಮಂಡೇಲ ಕುರಿತು ಕವನಗಳನ್ನು ಓದಿದರು. ತೇಜಸ್ವಿನಿ ಅವರೂ ಸಭೆಯಲ್ಲಿ ಮಾತನಾಡಿದರು.

'ಸಾಮ್ರಾಜ್ಯವಾದ ಅಳಿಯದೆ ವರ್ಣಭೇದ ತೊಲಗದು' ಘೋಷಣೆಯೊಂದಿಗೆ ಸಭೆ ಮುಕ್ತಾಯವಾಯಿತು. ಕಾರ್ಯಕ್ರಮದಲ್ಲಿ ವಿವಿಧ ಸಂಘಟನೆಗಳ ಸದಸ್ಯರು ಭಾಗವಹಿಸಿದ್ದರು.



ಸಂತಸ ಮೂಡಿಸಿದ ಬಿಡುಗಡೆ

('ಐಕ್ಯರಂಗ' ಪ್ರತಿನಿಧಿಯಿಂದ)

'ನೆಲ್ಸನ್ ಮಂಡೇಲ ಇಡೀ ವಿಶ್ವದ ಸ್ವಾತಂತ್ರ್ಯ ಪ್ರಿಯರ ಸಂಕೇತ. ಎಲ್ಲಾ ರೀತಿಯ ಗಡಿಗಳನ್ನು ಮೀರಿ ನಿಂತವನು' ಎನ್ನುವ ಬೆಂಗಳೂರಿನ ಛಾಯಾಗ್ರಾಹಕ ವಿ. ಕೃಷ್ಣೋಜಿರಾವ್‌ಗೆ ನೆಲ್ಸನ್ ಮಂಡೇಲ ಬಿಡುಗಡೆ ಅತ್ಯಂತ ಸಂತಸ ಮೂಡಿಸಿದೆ.

ಈ ಹಿಂದೆ ಭಾರತ ಸರ್ಕಾರ ಗುಜರಾತ್‌ನಲ್ಲಿ ಏರ್ಪಡಿಸಿದ್ದ ಅಂತರಾಷ್ಟ್ರೀಯ ಗಾಳಿಪಟ ಉತ್ಸವದಲ್ಲಿ ಹಾಗೂ ಕರ್ನಾಟಕ ಜಾನಪದ ಟ್ರಸ್ಟ್ ಏರ್ಪಡಿಸಿದ್ದ ಉತ್ಸವದಲ್ಲಿ ಸಂತೋಷ ಸಂಭ್ರಮಗಳೇ ತುಳುಕಾಡುತ್ತಿದ್ದಾಗ ಇದ್ದಕ್ಕಿದ್ದಂತೆ ಹಾರಿದ 11 ಅಡಿ ಎತ್ತರದ 'ನೆಲ್ಸನ್ ಮಂಡೇಲರನ್ನು ಬಿಡುಗಡೆ ಮಾಡಿ'' ಎಂಬ ಕೆಂಪು ಪಟ ಒಂದು ಕ್ಷಣ ಎಲ್ಲರೂ ಆಫ್ರಿಕಾದ ಜನರ ಸ್ಥಿತಿಯನ್ನು ಯೋಚಿಸುವಂತೆ ಮಾಡಿತು. ಮತ್ತೊಮ್ಮೆ ಅದೇ ಉತ್ಸವದಲ್ಲಿ ಕೃಷ್ಣೋಜಿ ರಾವ್ 15 ಅಡಿ ಎತ್ತರದ 'ಆರ್ಮೇನಿಯಾ ಸಂತ್ರಸ್ತರಿಗೆ ಸಹಾಯ ಮಾಡಿ'' ಎಂಬ ಘೋಷಣೆ ಹೊತ್ತ ಪಟವನ್ನು ಹಾರಿಸಿ ಆರ್ಮೇನಿಯಾದ ಭೀಕರ ಭೂಕಂಪದ ನೆನಪುಗಳನ್ನು ಹುಟ್ಟು ಹಾಕಿ ಎಲ್ಲರ ಗಮನ ಸೆಳೆದಿದ್ದರು.

ಈ ಬಾರಿ ನಡೆದ ಅಂತರಾಷ್ಟ್ರೀಯ ಉತ್ಸವದಲ್ಲಿ ಹಿಂಸೆ ಕೈ ಬಿಡಿ ದೇಶ ಉಳಿಸಿ' ಎಂಬ 60' ಅಡಿ ಎತ್ತರದ ಪಟಕ್ಕಾಗಿ ಮತ್ತೊಮ್ಮೆ ಪ್ರಶಸ್ತಿಯನ್ನು ತಮ್ಮ ಬುಟ್ಟಿಗೆ ಹಾಕಿಕೊಂಡಿದ್ದಾರೆ.

60 ಅಡಿ ಎತ್ತರದ ಈ ಬೃಹತ್ ಗಾಳಿ ಪಟ ಹಾರಿಸಲು ನೀರು ಸೇದುವ ಹಗ್ಗವೇ ಬೇಕು. ಸೂತ್ರಕ್ಕೂ ಹಗ್ಗ ಮತ್ತು ಬೊಂಬು, ಕನಿಷ್ಠ 70 ಜನರು ಈ ಗಾಳಿ ಪಟ ಹಾರಿಸಬೇಕು.

ನನ್ನ ನೋವು ವಿಕಾಸಿತನವೇ ನನ್ನನ್ನು ಯಾವುದಾದರೂ ನೋವಿನ ಘಟನೆಗೆ ತಕ್ಷಣವೇ ಸ್ಪಂದಿಸುವಂತೆ ಮಾಡುತ್ತದೆ. ಇಡೀ ವಿಶ್ವ ನೆಲ್ಸನ್ ಮಂಡೇಲ ಬಂದೀಖಾನೆಯಲ್ಲಿರುವುದಕ್ಕಾಗಿ ವಿಷಾದ ವ್ಯಕ್ತಪಡಿಸುತ್ತಿದ್ದಾಗ ನಾನೇಗೆ ಇದರಿಂದ ಹೊರತಾಗಲಿ. ಮಂಡೇಲ ಗಡಿಗಳನ್ನು ಮೀರಿದವನಾದ್ದರಿಂದ ನಾನೂ ಸಹ ಗಡಿಗಳನ್ನು ದಾಟ ಬಲ್ಲ ಗಾಳಿ ಪಟದ ಮೂಲಕ ಎಲ್ಲರಿಗೂ ಮಂಡೇಲ ಬಗ್ಗೆ ಮೂಡಿಸಲು ಪ್ರಯತ್ನಿಸಿದೆ ಎಂದು ಅವರು 'ಐಕ್ಯರಂಗ' ಕ್ಕೆ ತಿಳಿಸಿದರು.



1989ರ ನವೆಂಬರ್‌ನಲ್ಲಿ ನಡೆದ ಒಂಬತ್ತನೇ ಲೋಕಸಭಾ ಚುನಾವಣೆಗಳಲ್ಲಿ ಪ್ರಮುಖ ವಿಚಾರಗಳಲ್ಲೊಂದಾಗಿದ್ದ ಬೋಫೋರ್ಸ್ ಹಗರಣದ ವಿರುದ್ಧ ಮೊತ್ತ ಮೊದಲು ಬೀದಿಗಿಳಿದು ಪ್ರತಿಭಟಿಸಿದ ಶ್ರೇಯಸ್ಸು ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ. ಸಂಘಟನೆಗಳಿಗೆ ಸಲ್ಲುತ್ತದೆ. ದೇಶದ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಯುವಜನ ಚಳವಳಿಯ ಮುಂಚೂಣಿಯಲ್ಲಿರುವ ಈ ಎರಡೂ ಸಂಘಟನೆಗಳು 1987 ರ ಸೆಪ್ಟೆಂಬರ್‌ನಲ್ಲಿ ರಾಜಧಾನಿ ಹೊಸದೆಹಲಿಯಲ್ಲಿ ಬೃಹತ್ ರ್‍ಯಾಲಿ ನಡೆಸಿ ಭ್ರಷ್ಟಾಚಾರದ ಆರೋಪ ಹೊತ್ತಿರುವ ರಾಜೀವ್‌ಗಾಂಧಿ ನೇತೃತ್ವದ ಕಾಂಗ್ರೆಸ್ (ಐ) ನ ಸರಕಾರ ರಾಜಿನಾಮೆ ನೀಡುವಂತೆ ಆಗ್ರಹಿಸಿದ್ದವು.

ಮಂಗಳೂರಿನಲ್ಲಿ ಫೆಬ್ರವರಿ 4 ಮತ್ತು 5 ರಂದು ನಡೆದ ಎಸ್.ಎಫ್.ಐ. ಕರ್ನಾಟಕ ರಾಜ್ಯ ವಿಶೇಷ ಸಮಾವೇಶದಲ್ಲಿ ಭಾಗವಹಿಸಲು ಆಗಮಿಸಿದ್ದ ಎಸ್.ಎಫ್.ಐ ಪ್ರಧಾನ ಕಾರ್ಯದರ್ಶಿ ನೀಲೋತ್ಪಲ್ ಬಸು ಈ ವಿಚಾರವನ್ನು ತಿಳಿಸಿದರು.

ರಾಷ್ಟ್ರೀಯ ಭದ್ರತೆಗೇ ಸಂಬಂಧಿಸಿದ ವಿಚಾರದಲ್ಲಿ ನಡೆದಂಥ ಭ್ರಷ್ಟಾಚಾರ ಬಹಳ ಕಳವಳಕಾರಿಯಾದುದಾಗಿದ್ದು ಈಗ ಅಧಿಕಾರಕ್ಕೆ ಬಂದಿರುವ ರಾಷ್ಟ್ರೀಯ ರಂಗ ಸರಕಾರ ಅಪರಾಧಿಗಳ ಪತ್ತೆಗೆ ಕೈಗೊಂಡಿರುವ ಕ್ರಮಗಳು ಸರಿಯಾದುದಾಗಿದೆ ಎಂದು ಅವರು ಹೇಳಿದರು. ಇದನ್ನು ಮುಂಬರುವ ತೀರಿಸಿಕೊಳ್ಳುವ ಸಂದರ್ಭವನ್ನಾಗಿ ಪರಿವರ್ತಿಸದೆ ಅಧಿಕಾರ ಶಾಹಿಯ ಮೇಲೆ, ಭ್ರಷ್ಟಾಚಾರದ ವಿರುದ್ಧ ಸಾರ್ವಜನಿಕರ ಕಣ್ಗಾವಲನ್ನು ಬಲಪಡಿಸ ಬೇಕಾದ ಮಹತ್ವವನ್ನು ಅರಿಯುವಂತೆ ಮಾಡಬೇಕಾಗಿದೆ ಎಂದರು.

ಪ್ರಧಾನಿಯಾಗಿದ್ದ ರಾಜೀವ್ ಗಾಂದಿಯವರು ನಿರಂತರವಾಗಿ ಸುಳ್ಳುಗಳನ್ನೇ ಹೇಳಿ ಮುಚ್ಚಿ ಹಾಕಲು ಯತ್ನಿಸಿದ್ದ ಕೋಟ್ಯಾಂತರ ರೂಪಾಯಿ ಕಮಿಷನ್ ಪಾವತಿ ಒಳಗೊಂಡ ಬೋಫೋರ್ಸ್ ಪ್ರಕರಣವನ್ನು ಜನರ ಬಳಿ ಒಯ್ಯುವಲ್ಲಿ ಪತ್ರಿಕಾ ಮಾಧ್ಯಮ ಮಹತ್ತರ ಕೊಡುಗೆ ನೀಡಿದೆ ಎಂದು ನೀಲು ಶ್ಲಾಘಿಸಿದರು.

ಭಾರತದ ಭದ್ರತೆಯನ್ನೇ ಅಪಾಯ ಕ್ಕೀಡು ಮಾಡುವ ನಿಟ್ಟಿನತ್ತ ಸಾಗಿದ ಲಂಚಾವತಾರದಲ್ಲಿ ಒಳಗೊಂಡಿರುವ ಸತ್ಯ ಹೊರ ಬರಲೇಬೇಕು ಎಂದವರು ಹೇಳಿದರು.

ರಾಷ್ಟ್ರೀಯ ರಂಗ ಸರಕಾರ ಜನಪರವಾಗಿರುವಂತೆ ಸಂಯುಕ್ತ ಹೋರಾಟಗಳನ್ನು ರೂಪಿಸಬೇಕು.

ಎಸ್.ಎಫ್.ಐ. ಪ್ರಧಾನ ಕಾರ್ಯದರ್ಶಿ ನೀಲೋತ್ಪಲ ಬಸುರವರೊಡನೆ ಒಂದು ಸಂದರ್ಶನ : ವಿಶ್ವ ಕುಂದಾಪುರ ಅವರಿಂದ

ಐದು ವರ್ಷಗಳ ಕಾಲ 21 ನೇ ಶತಮಾನದ ಮಂತ್ರ ಪಠಿಸುತ್ತಾ ಜನ ಜೀವನವನ್ನು ಬಿಗಡಾಯಿಸಿದ ರಾಜೀವ ಗಾಂಧಿ ಸರಕಾರ ಪದಚ್ಯುತ ಗೊಳ್ಳುವ ಚುನಾವಣಾ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿ ಯುವಜನ ಸಂಘಟನೆಗಳು ನಿರ್ಣಾಯಕ ಪಾತ್ರವಹಿಸಿವೆ ಎಂದು ನೀಲೋತಲ್ ಬಸು ವಿಶ್ಲೇಷಿಸಿದರು.

ನಿರಂತರ ಹೋರಾಟದ ಫಲವಾಗಿ 18ನೇ ವರ್ಷಕ್ಕೆ ಮತದಾನದ ಹಕ್ಕು ಲಭಿಸಿತು. ನವೆಂಬರ್ ಚುನಾವಣೆಗಳಲ್ಲಿ ಸುಮಾರು ಐದು ಕೋಟಿಯಷ್ಟು 18 ರಿಂದ 21 ವರ್ಷದೊಳಗಿನ ವಿದ್ಯಾರ್ಥಿಗಳನ್ನೊಳಗೊಂಡ ಹೊಸ ಯುವ ಮತದಾರರ ಶೈಕಿ ಬಹುತೇಕ ವಿದ್ಯಾರ್ಥಿಗಳು ಅಂದಿನ ಪ್ರತಿಪಕ್ಷಗಳ ಪರವಾಗಿಯೇ ಮತ ನೀಡಿರುವುದು ನಿಚ್ಚಳವಾಗಿದೆ. ಸುಮಾರು 20 ಲಕ್ಷದಷ್ಟು ಸದಸ್ಯರುಳ್ಳ ಅತಿ ದೊಡ್ಡ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆಯಾಗಿ ಎಸ್.ಎಫ್.ಐ. ಇದರಲ್ಲಿ ಸಕ್ರಿಯವಾಗಿ ಭಾಗವಹಿಸಿದೆ ಎಂದರು.

ಉದ್ಯೋಗದ ಹಕ್ಕು ಮಹತ್ವದ ಹೆಜ್ಜೆ

ಸರಿ ಸುಮಾರು ಎಡಪಕ್ಷಗಳ ಪ್ರಭಾವದಿಂದ ರೂಪಿತವಾದ ಚುನಾವಣಾ ಪ್ರಣಾಳಿಕೆಗನುಗುಣವಾಗಿ ರಾಷ್ಟ್ರೀಯ ರಂಗ ಸರಕಾರ ಹಲವಾರು ಉತ್ತಮ ಹೆಜ್ಜೆಗಳನ್ನಿಡುತ್ತಿದೆ. ಉದ್ಯೋಗವನ್ನು ಮೂಲಭೂತ ಹಕ್ಕನ್ನಾಗಿಸಲು ಸಂವಿಧಾನ ತಿದ್ದುಪಡಿ ಮಾಡುವ ಈ ಸರಕಾರದ ದೃಢತೆ ದೇಶದ ಇತಿಹಾಸದಲ್ಲಿ ಒಂದು ಮಹತ್ವ ಪೂರ್ಣವಾದ ಹೆಜ್ಜೆ ಎಂದು ಎಸ್.ಎಫ್.ಐ. ಮುಖಂಡರು ವಿಶ್ಲೇಷಿಸಿದರು. ಆದರೆ, ಹಕ್ಕನ್ನಾಗಿ ಮಾಡಿದಾಕ್ಷಣ ನಿರುದ್ಯೋಗ ಸಮಸ್ಯೆ ಪರಿಹಾರವಾಗುತ್ತದೆಂಬ ಭ್ರಮೆಯಿಲ್ಲ ಎಂದೂ ಹೇಳಿದರು. ತಿದ್ದುಪಡಿಯ ಆಶಯವನ್ನು ಸಾಕಾರಗೊಳಿಸಲಿಕ್ಕಾಗಿ ಹಲವಾರು ಪೂರಕ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ನೇಮಕಾತಿ ಮೇಲಿನ ನಿರ್ಬಂಧ ತೆಗೆದು ಹಾಕುವುದು. ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು. ಮುಚ್ಚಿದ ಕೈಗಾರಿಕೆಗಳನ್ನು ತೆರೆಯುವುದು, ಕಂಪ್ಯೂಟರೀಕರಣ ನಿಲ್ಲಿಸುವುದು. ಹೊಸ ಕೈಗಾರಿಕೆಗಳ ಸ್ಥಾಪನೆ ಮೊದಲಾದ ಕ್ರಮಗಳನ್ನು ಕೈಗೊಳ್ಳಬೇಕು. ಪಶ್ಚಿಮ ಬಂಗಾಳ ಮತ್ತು ಮಹಾರಾಷ್ಟ್ರದಲ್ಲಿ ಯಶಸ್ವಿಯಾಗಿರುವ ಸ್ವಉದ್ಯೋಗ ಯೋಜನೆಯನ್ನು ಎಲ್ಲೆಡೆ ಜಾರಿಗೊಳಿಸ ಬೇಕು.

ಅಲ್ಲದೆ ಗ್ರಾಮೀಣ ಪ್ರದೇಶಗಳ ನಿರುದ್ಯೋಗ ನಿವಾರಣೆಗೆ ಪ್ರಮುಖ ಕೊಡುಗೆಯಾಗಲಿರುವ ಪರಿಣಾಮಕಾರಿ ಭೂಸುಧಾರಣೆಗಳನ್ನು ಜಾರಿಗೊಳಿಸಬೇಕು ಎಂದು ಸಲಹೆ ಮಾಡಿದರು.

ದೇಶದ ವಿವಿಧ ಭಾಗಗಳಲ್ಲಿನ ಮೀಸಲಾತಿ ವಿರೋಧಿ ಚಳವಳಿಯನ್ನು ಖಂಡಿಸಿದ ನೀಲೋತ್ಪಲ್. ಪ್ರಸ್ತುತ ಇರುವ ಮೀಸಲಾತಿ ಸೌಲಭ್ಯಗಳು ಅರ್ಹರಿಗೆ ದಕ್ಕುತ್ತಿಲ್ಲ. ಮೀಸಲಾತಿ ನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬ[...] ಎಂದರು. ಮೀಸಲಾತಿ - ವಿರೋ[...] ಚಳವಳಿಯ ಹಿಂದಿನ ಕೋಮುವ[...] ಶಕ್ತಿಗಳ ಪಾತ್ರವನ್ನು ಬಯಲಿಗೆಳ[...] ಬೇಕಾಗಿದೆ ಎಂದು ಹೇಳಿದ ಅವ[...] ಏನಿದ್ದರೂ ಮೀಸಲಾತಿ ಸಾರ್ವಕಾಲಿಕ [...] ಹಾರವಲ್ಲ ಎಂಬುದನ್ನು ಮನ ದ[...] ಮಾಡಿಕೊಳ್ಳಬೇಕಾಗಿದೆ ಎಂದರು.

ವಿಶ್ವ ಸಂಸ್ಥೆ ಘೋಷಿಸಿರುವ 199[...] ಅಂತರಾಷ್ಟ್ರೀಯ ಸಾಕ್ಷರತಾ ವ[...] ಯಶಸ್ಸಿಗೆ ಎಸ್.ಎಫ್.ಐ. ಯ[...] ಯೋಜನೆ ಹಮ್ಮಿ ಕೊಂಡಿದೆ ಎ[...] ಪ್ರಶ್ನಿಸಿದಾಗ, ನಿರ್ದಿಷ್ಟ ಯೋ[...] ಯನ್ನೇನು ರೂಪಿಸಿಲ್ಲ. ಆದರೆ ಇ[...] ಸಂಘ ಸಂಸ್ಥೆಗಳೊಂದಿಗೆ ಸಕ್ರಿಯವಾ[...] ಸಹಕರಿಸುವುದು ಎಂದು ತಿಳಿಸಿದರು.

ವಿದ್ಯಾರ್ಥಿ ಯುವಜನ ಸಂಘ[...] ಗಳೊಂದಿಗೆ ಸಮಾಲೋಚಿಸುವ ಉ[...] ಪರಿಪಾಠವನ್ನು ಕೇಂದ್ರಸರಕಾರ ಆರ[...] ಸಿದೆ.ಜನವರಿ 31ರಂದು ಅಂಥ ಮೊ[...] ಸಭೆ ದಿಲ್ಲಿಯಲ್ಲಿ ನಡೆಯಿತುಎಂದರು.

ಶ್ರೀಮಂತರ ಪರವಾದ ಹೊಸಶಿ[...] ನೀತಿಯ ಪರಿಕಲ್ಪನೆ ರಾಜೀವಗಾಂಧಿಯ[...] ರೊಂದಿಗೇ ಗಂಟುಮೂಟೆ ಕಟ್ಟಿಕೊಂ[...] ಹೋಗಿದೆ. ಶಿಕ್ಷಣದ ವಾಣಿಜ್ಯೀ ಕರಣ [...] ಬಗ್ಗೆ ಹೊಸ ಸರಕಾರಕ್ಕೆ ಕಾಳಜಿಯಿದ್ದ[...] ಕಾಣುತ್ತಿದೆ ಎಂದು ಹೊಸ ಶಿಕ್ಷಣ [...] ಯ ವಿರುದ್ಧವ್ಯಾಪಕ ಹೋರಾಟ ನಡೆ[...] ಸಂಘಟನೆಯ ನಾಯಕ ಹೇಳಿದರು.

ಉದ್ಯೋಗದ ಹಕ್ಕಿಗೆ ಖಾ[...] ರೇಡಿಯೋ, ಟಿ.ವಿ.ಗೆ ಸ್ವಾಯ[...] ಕಾರ್ಮಿಕ ರಂಗದಲ್ಲಿ ಹಲವ[...] ಸುಧಾರಣೆಗಳು ಮೊದಲಾದ ಉ[...] ಕಾರ್ಯಕ್ರಮಗಳೊಂದಿಗೆ ಹಿಂ[...] ಸರಕಾರಕ್ಕಿಂತ ವಿಭಿನ್ನ ಮಾರ್ಗ[...] ರಾಷ್ಟ್ರೀಯ ರಂಗ ಸರಕಾರ ಸಾಗು[...] ಯಾದರೂ ಅಂದು ಎಲ್ಲವನ್ನೂ ಸಾಧಿಸ[...] ಭ್ರಮೆ ಎಸ್.ಎಫ್.ಐ.ಗಿಲ್ಲ. ಸರಕಾ[...] ಕಾರ್ಯಕ್ರಮಗಳು ಜನಪರವಾಗಿರು[...] ನೋಡಿಕೊಳ್ಳಲು ಎಸ್.ಎಫ್.ಐ. ಸ್ವ[...] ವಾಗಿ ಮತ್ತು ಇತರ ಸಂಘಟನೆಗಳೊಂ[...] ಸಂಯುಕ್ತ ಹೋರಾಟಗಳನ್ನು ರೂಪಿಸು[...] ಎಂದು ನೀತೋತ್ಪಲ್ ಸ್ಪಷ್ಟಪಡಿಸಿದರು.

ಡಿ.ವೈ.ಎಫ್.ಐ. ಕೆಂಪೇಗೌಡ ನಗರ ಘಟಕ

ಬೆಂಗಳೂರು ಡಿ.ವೈ.ಎಫ್.ಐ.ನ ಕೆಂಪೇಗೌಡ ನಗರ ಘಟಕದ ಆಶ್ರಯದಲ್ಲಿ, ದಿನಾಂಕ: 11.2.90 ರಂದು ನಂಜಪ್ಪ ಬ್ಲಾಕ್ ಕಾರ್ಯಕರ್ತರ ಮತ್ತು ಹಿತೈಷಿಗಳ ಸಭೆ ಸ್ಥಳೀಯ ಮಾಚಿ ದೇವರ ದೇವಸ್ಥಾನದ ಆವರಣದಲ್ಲಿ ನಡೆಯಿತು. D.Y.F.Iನ ರಾಜ್ಯಸಮಿತಿಯ ಕಾರ್ಯದರ್ಶಿ ಕೆ.ಎಸ್.ಶಿವರಾಂರವರು ಡಿ.ವೈ.ಎಫ್.ಐ.ನ ಗುರಿ ಸಾಧನೆ ಧೋರಣೆಗಳನ್ನು ಕುರಿತು ಸವಿವರವಾಗಿ ಸಭೆಗೆ ವಿವರಿಸಿದರು. ಕೆ. ಪ್ರಸನ್ನ ಕುಮಾರ್‌ರವರು ಅಧ್ಯಕ್ಷತೆ ವ[...] ದ್ದರು. ಕಾ. ರಾಜುರವರು ಸ್ವಾಗತಿಸಿ[...] ಶ್ರೀರಾಂಪುರ ಘಟಕದ ಕಾ. ರಂಗಸ್ವಾ[...] ಯವರೂ ಮಾತನಾಡಿದರು. ಕಾ.ಡಿ.[...] ನಾಗಪ್ಪನವರು ವಂದನಾರ್ಪಣೆ ಮಾ[...] ದರು. ಸಭೆಗೆ 35 ಜನ ಸಂಗಾತಿ[...] ಆಗಮಿಸಿದ್ದರು. ಈ ಸಭೆಗೆ ಸ್ಥಳೀ[...] ಯುವಕರ ಸಂಘವೂ ಕೂಡ ಬೆಂ[...] ನೀಡಿತ್ತು.

ಸರ್ಕಾರಿ ಆಸ್ಪತ್ರೆಯ ಅವ್ಯವಸ್ಥೆ ಹೋಗಲಾಡಿಸಬೇಕು

ವಿರಾಜಪೇಟೆ ಡಿ.ವೈ.ಎಫ್.ಐ. ಒತ್ತಾಯ

ವಿರಾಜಪೇಟೆ ಒಂದು ತಾಲೂಕು ಕೇಂದ್ರ. ಆದರೆ ಅಲ್ಲಿರುವ ಆಸ್ಪತ್ರೆ ಅವ್ಯವಸ್ಥೆಯ, ಕೊಳಚೆಯ ಆಗರ. ಮಲೇರಿಯಾದ ತವರು. ಒಳರೋಗಿಗಳಿಗೆ ಬಿಸಿ ನೀರಿನ ಪೂರೈಕೆಯಿಲ್ಲ. ರೋಗಿಯ ಸಂಬಂಧಿಗಳು ಫ್ಲಾಸ್ಕ್ ಹಿಡಿದು ನೀರಿಗಾಗಿ ಪರದಾಡುವುದು ಸಾಮಾನ್ಯ ದೃಶ್ಯ. ಇದನ್ನು ಸರಿಪಡಿಸಲು ಸಂಬಂಧ[...] ವರು. ತುರ್ತುಕ್ರಮ ಕೈಗೊಳ್ಳಬ[...] ಇಲ್ಲವಾದರೆ ತೀವ್ರ ಚಳುವಳಿ ಹೂಡ[...] ಗುತ್ತದೆ ಎಂದು ಡಿ.ವೈ.ಎಫ್.[...] ವಿರಾಜಪೇಟೆ ನಗರ ಘಟಕ ಸಂಬಂಧ[...] ಅಧಿಕಾರಿಗಳನ್ನು ಎಚ್ಚರಿಸಿದೆ.

...ನ್ನ ...ಸುಟ್ಟ ಬೆಂಕಿ



ಗಳು, ಮುಸಲ್ಮಾನರೂ ಎಲ್ಲರೂ ಪೂಜೆಮಾಡ್ತಾರೆ- ವರ್ಷಕ್ಕೊಂದು ಸಾರಿ ನಡೆಯೋ ಉತ್ಸವದಲ್ಲಿ ಎಲ್ಲರೂ ಭಾಗವಹಿಸುತ್ತಾರೆ- ಈ ವರ್ಷದ ಹಬ್ಬ ಬರ್‍ತಾಯಿದೆ- ನೋಡೋಣ ಈ ವರ್ಷದ ಹಬ್ಬ ಹೇಗೆ ನಡೆಯೊತ್ತೆ ಅನ್ನೋದನ್ನ ಬನ್ನಿ.

ದೃಶ್ಯ- 5

(ಕೇರಿಯವರೆಲ್ಲಾ ಕುಳಿತಿರುತ್ತಾರೆ. ಮುಖಂಡ ಮಾತನಾಡುತ್ತಾನೆ)

ವ್ಯಕ್ತಿ 1: ಹಬ್ಬಬರ್‍ತಾಯಿದೆ- ಕೆಲಸಗಳು ಶುರುವಾಗಬೇಕು.

ಗುರಪ್ಪ: ನನ್ನದೊಂದು ಮಾತಿದೆ. ಈಗ ಇರುವ ಮಂದಿರ ಹಳೆಯದಾಗಿದೆ ಅದನ್ನು ಒಡೆಸಿ ಬೇರೆ ಕಟ್ಟಿಸಬೇಕು.

ವ್ಯಕ್ತಿ 2: ಅದು ಸರಿಯಾದ ಮಾತು.

ವ್ಯಕ್ತಿ 3: ನಮಗೆ ಜೀವನ ನಡೆಯೋದೆ ಕಷ್ಟ ಆಗಿರೋವಾಗ ಮಂದಿರ ಅದೂ ಇದು ಅಂದ್ರೆ ಎಲ್ಲಿಂದ ದುಡ್ಡು ತರೋದು.

ಗುರಪ್ಪ: ದೇವರ ಕೆಲ್ಸಕ್ಕೆ ಅಡ್ಡಬರಬಾರ್‍ದು-

ವ್ಯಕ್ತಿ 3: ದುಡ್ಡಿದ್ದರೆ ದೇವರು ಪೂಜಾರಿ ಎಲ್ಲಾ ಬರುತ್ತೆ-

ಗುರಪ್ಪ: ನಿನಗೆ ಕೊಡಕ್ಕೆ ಆಗದಿದ್ರೆ ಸುಮ್ಮಕೊತ್ಕೊ ನಾಲಿಗೆ ಉದ್ದ ಬಿಡ್ಬೇಡ.

ವ್ಯಕ್ತಿ 1: ನೋಡ್ರಪ್ಪ ನಾವು ಒಗ್ಗಟ್ಟಾಗಿರೋಣ.

ಗುರಪ್ಪ: ಅದಕ್ಕೆ ನಾನು ಹೇಳ್ತಾಯಿರೋದು ನಮ್ಮಲ್ಲಿ ಒಗ್ಗಟ್ಟಿಲ್ಲದೇ ಇರೋದ್ರಿಂದ ಮಂದಿರ ಸಾಬರ ಕೈಯಲ್ಲಿದೆ. ಹೊಸ ಕಟ್ಟಡ ಕಟ್ಕೊನೆಪದಲ್ಲಿ ಅದನ್ನ ನಾವು ನಮ್ಮವಶಕ್ಕೆ ತೆಗೆದುಕೊಳ್ಳಬೇಕು.

ವ್ಯಕ್ತಿ 3: ಗುರಪ್ಪನಿಂದು ಅತಿಯಾಯ್ತು. ನಮ್ಮೂರ ಮಂದಿರ ನಮಗೆಷ್ಟು ಹೆಚ್ಚೊ ಮುಸಲ್ಮಾನರಿಗೂ ಅಷ್ಟೆ. ಅದನ್ನ ನಮ್ಮದೂ ಅಂತಾ ಸಾಧಿಸೋಕೆ ಹೋದ್ರೆ ಅನಾಹುತ ಆಗುತ್ತೆ.

ಗುರಪ್ಪ: ಏನಯ್ಯ ಅಗ್ಬಿಡತ್ತೆ . ನಮ್ಮ ಅಯ್ಯನೋರ ಮಠದಲ್ಲಿ ಅವರಿಗೇನು ಕೆಲಸ-

ವ್ಯಕ್ತಿ 3: ಆದರೆ ಅದು ಫಕೀರ ಗದ್ದುಗೆ ಅಂತಾನೂ ಪ್ರಸಿದ್ಧಿಯಿದೆ. ಇಲ್ಲಿಯವರೆಗೆ ಯಾವ ತಕರಾರು ಇಲ್ಲದೇ ಒಟ್ಟಿಗೆ ಪೂಜೆ ಮಾಡ್ತೀಯಿದ್ವೀವಿ ಒಟ್ಟಿಗೆ ಹಬ್ಬಮಾಡ್ತಾಯಿದ್ವೀವಿ. ಇಲ್ಲದಿಯಿರೋದನೆಲ್ಲ ಹೇಳೋಕೆ ಬರ್ಬೇಡ (ಹೊರಡುತ್ತಾನೆ)

(ಗುಂಪಿನಲ್ಲಿ ಭಜನೆ ಪ್ರಾರಂಭವಾಗತ್ತದೆ.)

ಶ್ರೀರಾಮ ಜಯರಾಮ ಜಯ ಜಯರಾಮ
ಶ್ರೀರಾಮ ಜಯರಾಮ ಜಾನಕೀ ರಾಮ
ಜಯ ಜಯ ಜಯ ರಾಮ

ಭಜನ ತಾರಕಕ್ಕೆ ಹೋಗುತ್ತಿದ್ದ ಹಾಗೆ RSS Command ಆದೇಶಗಳು ಶುರುವಾಗಬೇಕು- ಗುರಪ್ಪನ ಪಾತ್ರ ಮಾಡುವ ನಟ ಕನಿಷ್ಠ 8 ಜನರಿಗೆ ದೊಣ್ಣೆಗಳನ್ನು ಹಂಚಬೇಕು- ಆದೇಶಗಳು ಚಿಕ್ಕದಿರಬೇಕು. ಮತ್ತು ಶಬ್ದ ಅರ್ಥವಾಗಬಾರದು- ದೊಣ್ಣೆಗಳನ್ನು ಕೈಯಲ್ಲಿ ತೆಗೆದುಕೊಂಡ ಮೇಲೆ ಅಂಗದ ನಡುವ ರಂಗ ಸ್ಥಳಕ್ಕೆ ಹೆದರಿ ಒಂದು ಕಡೆ ಸೇರಬೇಕು ಹಕ್ಕಿ ಮಾಡುವವರು ಸುತ್ತ ಇರಬೇಕು.

ಹಲ್ಗೆಗಾರರು: ಕಾಳಿ (ನರ್ತನ ಶೈಲಿಯಲ್ಲಿ)
ಓಂ ಕಾಳಿ ಭದ್ರಕಾಳಿ

ಉಳಿದವರು: ಓಂ ಕಾಳಿ ಭದ್ರಕಾಳಿ

(ಗುಂಪಿನಿಂದ ರಾಮಣ್ಣ) ನಿಲ್ಲಿಸಿ ದೇವರ ಹೆಸರಿನಲ್ಲಿ ಇಂತಹ ಅನ್ಯಾಯ ಮಾಡ್ಬೇಡಿ. ಇಲ್ಲಿರೋದು ನಿರಪರಾಧಿಗಳು (ಬೇಡಿಕೊಳ್ಳುತ್ತಾನೆ)

ಎ.ಎ. (ಜೋರಾಗಿ ಕೂಗಿ ಮತ್ತೆರಡು ಸಲ ಓಂಕಾಳಿ ಎಂದು ಹೇಳುತ್ತ ಮಧ್ಯದಲ್ಲಿರುವವರು ಬೀಳುತ್ತಿದ್ದಂತೆ)

ಹಲ್ಗೆಗಾರರು (ಅದೇ ಜನ) ಅಲ್ಲಾ ಹೋ ಅಕ್ಬರ್ - ಅಲ್ಲಹೋ ಅಕ್ಬರ್

ಪ್ಯಾರೇ: ನಿಲ್ಲಿಸಿ. ದಯವಿಟ್ಟು ನಿಲ್ಲಿಸಿ. ಅಲ್ಲಾ ಹೆಸರಿನಲ್ಲಿ ಕೊಲೆ ಮಾಡ್ಬೇಡಿ (ಅವನನ್ನು ಚುಚ್ಚುತ್ತಾರೆ ಹೀಗೆ ಮತ್ತೊಂದು ಘೋಷಣೆ ರಾಮನಾಮ ಸತ್ಯ ಹೈ- ಹಾಹಾಕಾರ, ಚೀತ್ಕಾರ ಸಾಗಿರುವಂತೆ ಕೇಳುತ್ತದೆ ಎಲ್ಲರು ಓಡಿಹೋಗುತ್ತಾರೆ.)

ಸೂತ್ರಧಾರ: ಇಲ್ಲಿ ಬಿದ್ದಿರುವ ಹೆಣಗಳನ್ನು ನೋಡಿ. ಇದಕ್ಕೆ ಯಾವ ಜಾತಿಯೂ ಇಲ್ಲ ಧರ್ಮವೂ ಎಲ್ಲ- ಇಲ್ಲ ನಿರಪರಾಧಿ ಬಡಜನಗಳ ಶವ. ಈ ಹಿಂಸೆ ಅತ್ಯಾಚಾರದ ಹಿಂದೆ ಕಾರಣಗಳು ನೆಪವಾಗಿರುತ್ತವೆ.

(ಕೆಳಗೆ ಬಿದ್ದಿದ್ದ ಗುಂಪಿನಿಂದ ರಾಮು ಪ್ಯಾರೇ ಏಳುತ್ತಾರೆ)

ರಾಮು: ನಮ್ಮ ಊರು ಕುರುಕ್ಷೇತ್ರ ಆಗೋಯ್ತಲ್ಲ ಪ್ಯಾರೇ-

ಪ್ಯಾರೇ: ಕೂಲಿಗಾಗಿ ಹೋರಾಟ ಮಾಡ್ತೀವಿ ಅಂತಾ ಎಷ್ಟು ಚೆನ್ನಾಗಿ ಒಗ್ಗಟಾಗಿದ್ವು.

ರಾಮು: ಮಂದಿರದ ವಿಷಯ ತಗೊಂಡು ಅಣ್ಣತಮ್ಮಂದಿರ ಹಾಗೆ ಇದ್ದೊರು ಹೊಡೆದಾಡಿದ್ರು.

ಪ್ಯಾರೇ: ಇನ್ನೊಂದು ವಿಷಯ.. ನಮ್ಮ ಜನಗಳಿಗೆ ಇವತ್ತು ಮಂದಿರ ಕಿತ್ಕೊತಾರೆ, ನಾಳೆ ಹೆಂಡಿಂದರನ್ನ ಹಾರಿಸ್ಕೊಂಡು ಹೋಗ್ತಾರೆ, ನಮ್ಮ ಮನೆಗೆ ಬೆಂಕಿ ಬೀಳುತ್ತೆ" ಅಂತಿದ್ರಲ್ಲ ನಮ್ಮ ಮಾಲೀಕರು ಅದೇ ಖಾನ್ ಸಾಹೇಬರು ಅವರ ಮನೆಗೆ ಒಂದು ಕಲ್ಲೂ ಬಿದ್ದಿಲ್ಲ. ಆದರೆ ಆದರೆ ನಮ್ಮ ಯೂನಿಯನ್ ಲೀಡರ್ ಬಾಷಾಮನೆ ಸುಟ್ಟು ಹಾಕಿದಾರೆ.

ರಾಮು: ನಮ್ಮ ಮಾಲೀಕ ಗಣೇಶಪ್ಪನೂ ಹಾಗೇ ಹೇಳ್ತಾಯಿದ್ದ. 'ನಮ್ಮ ಊರಿನಲ್ಲಿ ನಾವೇ ಪರದೇಶಿಗಳಾಗಿದ್ದೇವೆ. ಈ ಮಂದಿರ ನಮ್ಮ ವಶಕ್ಕೆ ತಗೊಳ್ಳಕೆ ನನ್ನ ಪ್ರಾಣ ಬೇಕಾದರೆ ಕೊಡ್ತೀನಿ ಅಂತಿದ್ದ. ಆದ್ರೆ ಅವನ ಕೂದಲೂ ಕೊಂಕಿಲ್ಲ. ಅವನಿಗೆ ಎದುರಾದ ಚೆಲುವನ್ನ ಚಚ್ಚಿ ಹಾಕಿದಾರೆ.

ಪ್ಯಾರೇ: ಇದಕ್ಕೆಲ್ಲ ಆ ದೇವರೇ ನೋಡ್ಕೊಬೇಕು.

ಸೂತ್ರಧಾರ: ದೇವರು ನೋಡ್ಕೋತಾನೆ ನೀವು ಕೈ ಕೆಟ್ಕೊಂಡು ಕೂತಿರಿ

ಇಬ್ಬರೂ: ಯಾರಪ್ಪ ನೀನು.

ಸೂತ್ರಧಾರ: ನಾನು ದೇವರು.

ಇಬ್ಬರೂ: ನಮ್ಮ ಮಾತು ಕೇಳಿಸಿಕೊಂಡ್ಯಾ.

ಸೂತ್ರಧಾರ: ನನ್ನ ಕೆಲಸಾನೇ ಅದೂ. ಇರಲಿ ಮುಂದೇನು ಮಾಡ್ತೀರಿ.

ರಾಮು: ಇದು ಯಾಕೆ ಹೀಗಾಯ್ತು ಗೊತ್ತಿಲ್ಲ- ಮುಂದೇನು ಮಾಡ್ಬೇಕೊ ತೋಚ್ತಾಯಿಲ್ಲ.

ಸೂತ್ರಧಾರ: ಈಗ ತಾನೆ ಹೇಳ್ತಾಯಿದ್ರೀ ಈ ಗಲಾಟೆ ಪ್ರಾರಂಭವಾಗಿದ್ದು ನೀವು ಕೂಲಿ ಜಾಸ್ತಿಮಾಡೋ ಅಗ್ರಿಮೆಂಟ್ ಮಾಲೀಕರ ಜತೇಲಿ ಮಾಡಿಕೊಂಡ ಮೇಲೆ ತಾನೆ?

ಪ್ಯಾರೆ: ಹೌದು,

ಸೂತ್ರದಾರ: ಅದುವರೆಗೂ ಈ ಊರಿನಲ್ಲಿ ಹೊಸ ಮಂದಿರ ಪ್ರಾರಂಭಿಸೊ ಮಾತು ಬಂದಿತ್ತಾ.? ನಿಮ್ಮ ಮಾಲೀಕರು ನಿಮ್ಮ ಮನೆ ಬಾಗಿಲಿಗೆ ಬಂದಿದ್ರಾ?

ರಾಮು: ಹೌದಣ್ಣ ಅವತ್ತು (ಗಲಾಟೆ ಆಗುವ ಹಿಂದಿನ ದಿನ) ಗಣೇಶಪ್ಪ ಬೆಳಿಗ್ಗೆಯಿಂದ ಸಾಯಂ ಕಾಲದ ವರೆಗೆ ನಮ್ಮ ಕೇರಿನಲ್ಲೇ ಮಾತಾಡ್ತಾಯಿದ್ದ. ಮಂದಿರದ ವಿಷಯ ಹೇಳ್ತಾಯಿದ್ದ.

ಪ್ಯಾರೇ: ನಮ್ಮ ಖಾನ್ ಸಾಹೇಬರೂ ಅವರ ಮನೆಗೆ ಕರಿಸ್ಕೊಂಡು ಬಿರಿಯಾನಿ ಹಾಕ್ಸಿದ್ರು.

ಸೂತ್ರಧಾರ: ಅಲ್ಲಿಗೆ ಹೊಡೆದಾಡಿರೊರು ನೀವು. ಎಟು ತಿಂದಿರುವರು ನೀವು. ಕೇಸುಗಳಾಗಿರೋದು ನಿಮ್ಮ ಮೇಲೆ. ಆದ್ರೆಲಾಭ ಮಾತ್ರ ಅವರಿಗೆ.

ಇಬ್ಬರೂ: ಹೆಂಗಣ್ಣ

ಸೂತ್ರಧಾರ:- ನಿಮ್ಮಲ್ಲಿ ಜಗಳ ಶುರುವಾದ ಮೇಲೆ ಅಗ್ರಿಮೆಂಟ್ ಮಾತೇ ಇಲ್ಲ. ಮಾಲೀಕರು ಆರಾಮವಾಗಿದ್ದಾರೆ. ಹಿಂದೆ ಇಂಗ್ಲಿಷ್‌ನೋರು ಇದೇ ಕೆಲ್ಸ ಮಾಡಿದ್ದು. ತಮ್ಮ ಊಟ ಮುಚ್ಕೊರಿಕ್ಕೆ ನಮ್ಮ ನಮ್ಮಲ್ಲೇ ಜಗಳ ಹಚ್ಚಿದ್ರು.

ರಾಮು: ಪ್ಯಾರೇ: ನಾವೀಗ ಏನು ಮಾಡೋದಣ್ಣ-

ಸೂತ್ರಧಾರ: ಅದಕ್ಕೆ ನಾನು ಬಂದಿರೋದು ಜಾತಿ ಮತದ ವಿಷಯದಲ್ಲಿ ಮನುಷ್ಯ, ಮನುಷ್ಯನ್ನ ಕೊಲ್ಲೋದನ್ನ ನಿಲ್ಲಿಸಬೇಕಾಗಿದೆ. ಈ ದೇಶ ಒಂದು ಸುಂದರವಾದ ತೋಟ. ಇಲ್ಲಿ ನೂರಾರು ಹೂಗಳು ಅರಳಬೇಕು. ನಾವೆಲ್ಲ ಶಾಂತಿಯಿಂದ, ಏಕತೆಯಿಂದ ಸಹ ಬಾಳ್ವೆ ಮಾಡೋಣ.

ಹಾಡು:

ಐಕ್ಯತೆಯ ಹಾಡನ್ನು ಹಾಡೋಣ ಬನ್ನಿ
ಮನಷ್ಯನ ಕೊಲೆಗಳ ನಿಲ್ಲಿಸೋಣ ಬನ್ನಿ
ಜಾತಿ ಮತಗಳ ಬೇಲಿಯ ಮುರಿದು
ಶಾಂತಿಯ ಹೊಸನಾಡನ್ನು ಕಟ್ಟೋಣ ಬನ್ನಿ

ಮನುಷ್ಯರ ಕೊಲೆಗಳ ನಿಲ್ಲಿಸೋಣ ಬನ್ನಿ --



ಮಾರ್ಚ್ 7 ಬೇಡಿಕೆ ದಿನಾಚರಣೆ ನಡೆಸಲು ಸಾರ್ವಜನಿಕ ಉದ್ದಿಮೆ ಕಾರ್ಮಿಕರ ನಿರ್ಧಾರ

ಬೆಲೆಯೇರಿಕೆಯನ್ನು ಪೂರ್ಣವಾಗಿ ಸರಿದೂಗಿಸುವ ಡಿ.ಎ., ಬೋನಸ್ ಮಿತಿ ರದ್ದು, ಆದಾಯ ತೆರಿಗೆಯ ಭಾರದಿಂದ ಪರಿಹಾರ, ಟ್ರಿಬ್ಯುನಲ್ ಅವಾರ್ಡ್ ಅನುಷ್ಠಾನ, ನಿವೃತ್ತಿ ವೇತನದ ಇತ್ಯರ್ಥದಲ್ಲಿ ವಿಳಂಬ ಹಾಗೂ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ಈ ಎಲ್ಲಾ ಪ್ರಶ್ನೆಗಳತ್ತ ರಾಷ್ಟ್ರೀಯ ರಂಗ ಸರಕಾರದ ಗಮನ ಸೆಳೆಯಲು, ಈ ಬಗ್ಗೆ ಕಾರ್ಮಿಕರ ನ್ಯಾಯಬದ್ಧ ಬೇಡಿಕೆಗಳನ್ನು ಒಪ್ಪಿಕೊಳ್ಳುವಂತೆ ಒತ್ತಾಯಿಸಲು ಮಾರ್ಚ್ 7 ರಂದು ಬೆಂಗಳೂರಿನ ಸಾರ್ವಜನಿಕ ಉದ್ದಿಮೆಯ ಕಾರ್ಮಿಕರು ಬೇಡಿಕೆ ದಿನಾಚರಣೆ ನಡೆಸಲು ಈ ಕಾರ್ಮಿಕರ ರಾಜ್ಯ ಮಟ್ಟದ ಸಮಾವೇಶ ಕರೆ ನೀಡಿದೆ. ಈ ಬಗ್ಗೆ ಬೆಂಗಳೂರಿನ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಪರವಾಗಿ ಒಂದು ಪ್ರತಿನಿಧಿ ಮಂಡಲ ಪ್ರಧಾನ ಮಂತ್ರಿಗಳನ್ನು ಭೇಟಿಯಾಗ ಬೇಕೆಂದೂ ನಿರ್ಣಯಿಸಲಾಗಿದೆ.

ಫೆಬ್ರವರಿ 13 ರಂದು ಬೆಂಗಳೂರಿನ ಪುರಭವನದಲ್ಲಿ ನಡೆದ ಈ ಸಮಾವೇಶವನ್ನು ಸಾರ್ವಜನಿಕ ವಲಯ ಕಾರ್ಮಿಕರ ಸಂಯೋಜನಾ ಸಮಿತಿ (ಸಿ.ಐ.ಟಿ.ಯು) ಸಂಘಟಿಸಿತ್ತು. ಸಿ.ಐ.ಟಿ.ಯು ಕಾರ್ಯದರ್ಶಿ ಕಾಂ.ಎಂ.ಕೆ.ಫಂದೆ ಸಮಾವೇಶವನ್ನು ಉದ್ಘಾಟಿಸಿದರು. ಬಿ.ಇ.ಎಲ್. ವರ್ಕರ್ಸ್ ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿ ಕಾಂ. ವಿಭೂತಿಮಠ್ ಸಮಾವೇಶದ ಪ್ರತಿನಿಧಿಗಳನ್ನು ಸ್ವಾಗತಿಸಿದರು. ಕಾಂ. ಅಶ್ವತ್ಥರಾಯಣ (ಬಿ.ಇ.ಎಂ.ಎಲ್., ಕೆ.ಜಿ.ಎಫ್.), ಕಾಂ. ಎಂ.ಸಿ.ಎಸ್. ರಾವ್ (ಬಿ.ಇ.ಎಲ್.), ಕಾಂ.ಚಂದ್ರನ್ (ಬಿ.ಹೆಚ್.ಇ.ಎಲ್) ಕಾಂ. ಬಸಪ್ಪ (ಬಿ.ಇ.ಎಂ.ಎಲ್, ಬೆಂಗಳೂರು) ಹಾಗೂ ಕಾಂ. ಶಾಮಣ್ಣ ರಡ್ಡಿ (ಐ.ಟಿ.ಐ.) ಯವರಿದ್ದ ಅಧ್ಯಕ್ಷ ಮಂಡಳಿ ಸಮಾವೇಶದ ಕಲಾಪಗಳನ್ನು ನಡೆಸಿಕೊಟ್ಟಿತ್ತು.

ಸಮಿತಿಯ ಸಂಯೋಜಕರೂ, ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿಯ ಅಧ್ಯಕ್ಷರೂ ಆದ ಕಾಂ. ಎಸ್. ಸೂರ್ಯನಾರಾಯಣ ರಾವ್ ಮಂಡಿಸಿ, ಕಾಂ. ಎಂ. ಮುನಿರೆಡ್ಡಿ (ಬಿ.ಇ.ಎಲ್) ಅನುಮೋದಿಸಿ, ಸಮಾವೇಶದ ಪ್ರತಿನಿಧಿಗಳು ಸರ್ವಾನುಮತದಿಂದ ಅಂಗೀಕರಿಸಿದ ನಿರ್ಣಯ ಬಿ.ಪಿ.ಐ. ನಿರ್ದೇಶನಗಳನ್ನೂ ಮೂಲೆಗೊತ್ತಿ ಪ್ರಮುಖ ಸಾರ್ವಜನಿಕ ಉದ್ದಿಮೆಗಳಲ್ಲಿ ರಾಷ್ಟ್ರೀಯ ಮಟ್ಟದ ವೇತನ ಇತ್ಯರ್ಥ ಸಾಧಿಸಿದ್ದಕ್ಕಾಗಿ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರನ್ನು ಅಭಿನಂದಿಸಿತು. 22 ಲಕ್ಷ ಕಾರ್ಮಿಕರ ನ್ಯಾಯ ಬದ್ಧ ಹೋರಾಟಗಳಿಗೆ ಹಾಗೂ ವೇತನ ಮಾತುಕತೆಗಳಿಗೆ ಯಶಸ್ವೀ ನೇತೃತ್ವ ನೀಡಿದ ಸಾರ್ವಜನಿಕ ವಲಯ ಕಾರ್ಮಿಕ ಸಂಘಗಳ ಸಮಿತಿ (ಸಿ.ಪಿ.ಎಸ್.ಟಿ.ಯು)ಯನ್ನು ನಿರ್ಣಯ ಅಭಿನಂದಿಸಿತು.

ಬೆಲೆಯೇರಿಕೆಗೆ ಪೂರ್ಣ ಪರಿಹಾರ ನೀಡುವ ತುಟ್ಟಿಭತ್ಯೆಯ ಬಗ್ಗೆ ಪರಿಶೀಲಿಸಲು ಕೇಂದ್ರ ಸರ್ಕಾರ ಒಂದು ತ್ರಿಪಕ್ಷೀಯ ಸಮಿತಿ ನೇಮಿಸಿ 15 ತಿಂಗಳಾದರೂ ಏನೂ ಆಗಿಲ್ಲ. ರಾಜೀವ ಗಾಂಧಿ ಸರ್ಕಾರದ ನಿರ್ಲಕ್ಷ್ಯ ಮನೋಭಾವದಿಂದ ಆಗಿರುವ ಈ ವಿಳಂಬ ಇನ್ನೂ ಮುಂದುವರಿಯದಂತೆ ರಾಷ್ಟ್ರೀಯರಂಗ ಸರ್ಕಾರ ಮಾಚ್ 7 ರಂದು ನಡೆಯುವ ಈ ಸಮಿತಿಯ ಸಭೆಯಲ್ಲಾದರೂ ಸಕಾರಾತ್ಮಕ ಪ್ರಸ್ತಾಪಗಳನ್ನೂ ಮಂಡಿಸುತ್ತದೆ ಎಂದು ಸಮಾವೇಶ ನಿರೀಕ್ಷಿಸಿದೆ.

ಅನ್ಯಾಯದ ಬೋನಸ್ ಮಿತಿಯಿಂದಾಗಿ ಬಹುಪಾಲು ಕಾರ್ಮಿಕರಿಗೆ ಇತ್ತೀಚಿನ ವೇತನ ಇತ್ಯರ್ಥದಿಂದ ಪ್ರಯೋಜನ ದೊರೆಯದಿರುವುದು, ಅಸಹನೀಯ ಆದಾಯ ತೆರಿಗೆ ಭಾರ ಈ ಎರಡು ಕಾರ್ಮಿಕರ ಪ್ರಮುಖ ಸಮಸ್ಯೆಗಳನ್ನು ಪರಿಹರಿಸಬೇಕೆಂದು ಸರ್ಕಾರವನ್ನು ಸಮಾವೇಶದ ನಿರ್ಣಯ ಒತ್ತಾಯಿಸಿದೆ. ದೊಡ್ಡ ಉದ್ಯಮಗಳಿಂದ, ಭೂಮಾಲಿಕರಿಂದ ಸರಿಯಾಗಿ ತೆರಿಗೆ ವಸೂಲಿ ಮಾಡಿದರೆ ದೇಶ ಸಾಕಷ್ಟು ಸಂಪನ್ಮೂಲ ಶೇಖರಿಸಬಲ್ಲದು ಎಂದು ನಿರ್ಣಯ ಅಭಿಪ್ರಾಯ ಪಟ್ಟಿದೆ.

ಬಿ.ಹೆಚ್.ಇ.ಎಲ್. ನೊಂದಿಗೆ ವೇತನ ಸಮಾನತೆ ಒತ್ತಾಯಿಸಿ ಬೆಂಗಳೂರಿನ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಮುಷ್ಕರ ವತ್ತು ಮ್ಯಾನೇಜ್‌ಮೆಂಟ್‌ಗಳು ಹೇರಿದ ಲಾಕೌಟ್ ಅವಧಿಯ ಸಂಬಳ ಕೊಡಬೇಕೆಂಬ ರಾಷ್ಟ್ರೀಯ ಟ್ರಿಬ್ಯೂನಲ್‌ನ ತೀರ್ಪನ್ನು ಇನ್ನೂ ಆಡಳಿತ ಮಂಡಳಿಗಳು ಪಾಲಿಸದಿರುವುದನ್ನು ಖಂಡಿಸಿದ ಸಮಾವೇಶ ಇದನ್ನು ತಕ್ಷಣ ಜ್ಯಾರಿಗೊಳಿಸದಿದ್ದರೆ ಐಕ್ಯ ಹೋರಾಟಕ್ಕೆ ಸಿದ್ಧವಾಗಬೇಕೆಂದು ಕಾರ್ಮಿಕರಿಗೆ ಕರೆ ನೀಡಿದೆ. ಅದೇ ರೀತಿ ಕಲ್ಲಿದ್ದಲು, ಉಕ್ಕು ಉದ್ದಿಮೆಗಳಲ್ಲಿ ಈಗಾಗಲೇ ನಿವೃತ್ತಿ ವೇತನ ಯೋಜನೆ ಆರಂಭವಾಗಿದ್ದರೂ ಬೆಂಗಳೂರಿನಲ್ಲಿ ಅದನ್ನು ಇನ್ನೂ ಇತ್ಯರ್ಥಗೊಳಿಸದ ಆಡಳಿತ ವರ್ಗಗಳ ಮೇಲೆ ಒತ್ತಾಯ ತರಲು ಕೂಡಾ ಐಕ್ಯ ಹೋರಾಟ, ಅಗತ್ಯ ಎಂದು ಸಮಾವೇಶ ಅಭಿಪ್ರಾಯಪಟ್ಟಿದೆ.

ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ, ಸಬ್-ಕಾಂಟ್ರ್ಯಾಕ್ಟಿಂಗ್, ಸಾರ್ವಜನಿಕ ಉದ್ದಿಮೆಗಳು ಉತ್ಪಾದಿಸಬಹುದಾದ ಸಾಮಗ್ರಿಗಳನ್ನು ಆಮದು ಮಾಡಲು ಬಹುರಾಷ್ಟ್ರೀಯ ಕಂಪೆನಿಗಳಿಗೆ ಅನುಮತಿ - ಇವೆಲ್ಲಾ ಧೋರಣೆಗಳ ಮುಂದುವರಿಕೆ ರಾಷ್ಟ್ರೀಯ ರಂಗ ಸರಕಾರ ಕೆಲಸದ ಹಕ್ಕು ಮೂಲಭೂತ ಹಕ್ಕೆಂದು ಒಪ್ಪಿಕೊಂಡಿರು ವಾಗ ಅತ್ಯಂತ ಹಾಸ್ಯಾಸ್ಪದ.

ಬಿ.ಇ.ಎಲ್. ನಲ್ಲಿ ಮೂರು ಬಿಸಿನೆಸ್ ಗುಂಪುಗಳಾಗಿ ಮಾಡಿ ಖಾಸಗೀಕರಣದತ್ತ ಇಟ್ಟಿರುವ ಹೆಜ್ಜೆ ಯನ್ನು ಪ್ರತಿಭಟಿಸಿದ ಸಿ.ಐ.ಟಿ.ಯು. ವಿನ ಪ್ರಮುಖ ಕಾರ್ಯಕರ್ತರನ್ನು ಬಿ.ಇ.ಎಲ್. ಆಡಳಿತ ವರ್ಗ ಸಸ್ಪೆಂಡ್ ಮಾಡಿದೆ. ಇದನ್ನೂ ಖಂಡಿಸಿದ ಸಮಾವೇಶ ಈ ಕ್ರಮವನ್ನು ತಕ್ಷಣ ವಾಪಾಸ್ಸು ಪಡೆಯಬೇಕೆಂದು ಒತ್ತಾಯಿಸಿದೆ.

ಸಮಾವೇಶವನ್ನುದ್ದೇಶಿಸಿ ಕಾಂ. ಅರ್ಜುನನ್ (ಬಿ.ಇ.ಎಂ.ಎಲ್., ಕೆ.ಜಿ.ಎಫ್.) ಕೂಡಾ ಮಾತನಾಡಿದರು. ಕಾಂ. ಶಾಮಣ್ಣ ರೆಡ್ಡಿ ವಂದನಾರ್ಪಣೆ ಮಾಡಿದರು.

ಕಿರುಕುಳಗಳ ವಿರುದ್ಧ ಮಹಿಳಾ ಸಂಘಟನೆಯಿಂದ ಧರಣಿ ಸತ್ಯಾಗ್ರಹ

ಕೋಲಾರ

ನಗರದ ಎ.ಡಿ. ಡಬ್ಲ್ಯು.ಎ ಘಟಕದ ನೇತೃತ್ವದಲ್ಲಿ, ಸ್ಥಳೀಯ ಪಲ್ಲವಿ ಚಿತ್ರ ಮಂದಿರದಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಸ್ಥಳಾವಕಾಶವನ್ನು ಮಾಡಿಕೊಡಬೇಕೆಂದು ಜಿಲ್ಲಾಧಿಕಾರಿಯವರ ಕಛೇರಿಯ ಮುಂಭಾಗದಲ್ಲಿ ಧರಣಿ ಸತ್ಯಾಗ್ರಹವನ್ನು ನಡೆಸಲಾಯಿತು.

ಕೋಲಾರ ನಗರದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದಬ್ಬಾಳಿಕೆಗಳು ಒಂದರ ನಂತರ ಒಂದರಂತೆ ವರದಿಯಾಗುತ್ತಿವೆ. ನಗರದಲ್ಲಿ ಮಹಿಳೆಯರು ನಿರ್ಭೀತಿಯಿಂದ ಓಡಾಡಲೂ ಹಿಂಜರಿಯುವಂತಹ ಘಟನೆಗಳು. ಸ್ಥಳೀಯ ಚಿತ್ರಮಂದಿರಗಳಲ್ಲಿ ಮಹಿಳೆಯರಿಗೆ ಪ್ರತ್ಯೇಕ ಸ್ಥಳಾವಕಾಶವಿಲ್ಲದಿರುವುದರಿಂದ ಹಲವಾರು ಬಾರಿ ಕಿಡಿಗೇಡಿಗಳ ಕಿರುಕುಳಕ್ಕೆ ಮಹಿಳೆಯರು ಒಳಗಾಗಿದ್ದಾರೆ. ಈ ಬಗ್ಗೆ ಕಳೆದ ಒಂದು ವರ್ಷದಿಂದ ಜಿಲ್ಲಾಧಿಕಾರಿಗಳಿಗೆ ದೂರು, ಮನವಿಗಳನ್ನು ಕೊಟ್ಟರೂ ನಿಷ್ಪ್ರಯೋಜನವಾಗಿದೆ. ಪೋಲೀಸು ಇಲಾಖೆಯಂತೂ ಪುಂಡು ಪೋಕರಿಗಳಿಗೆ ಕೊಲೆಪಾತಕರಿಗೆ ಶಾಮೀಲಾಗಿರುವ ಉದಾಹರಣೆಗಳು ಸಾಕಷ್ಟಿವೆ. ಹಲವಾರು ಬಾರಿ ಜಿಲ್ಲಾಧಿಕಾರಿಗಳಿಗೆ ಈ ಸಮಸ್ಯೆಯನ್ನು ಪ್ರತಿನಿಧಿಸಿದ್ದರೂ ಪ್ರತಿಫಲವಿಲ್ಲದುದನ್ನು ಮನಗಂಡು ದಿನಾಂಕ 7-2-90ರಂದು ಜಿಲ್ಲಾಧಿಕಾರಿಯ ಕಛೇರಿಯ ಎದುರು ಸ್ಥಳೀಯ ಎ.ಐ.ಡಿ. ಡಬ್ಲ್ಯು. ಎ.ಘಟಕವು ಘಟಕದ ಸಂಚಾಲಕಿ ರತ್ನಮ್ಮ ಮತ್ತು ಜಿಲ್ಲಾ ಸಂಚಾಲಕಿ ಫ್ಲೋರರವರ ನೇತೃತ್ವದಲ್ಲಿ ಧರಣಿ ಸತ್ಯಾಗ್ರಹವನ್ನು ನಡೆಸಿತು.

ಜಿಲ್ಲಾಧಿಕಾರಿಯವರ ಪರವಾಗಿ ಬೈಲ್ ಅಂಜನಪ್ಪ ಎಂಬ ಅಧಿಕಾರಿ ಮನವಿ ಪತ್ರವನ್ನು ಸ್ವೀಕರಿಸಿ ಪಲ್ಲವಿ ಚಿತ್ರಮಂದಿರದಲ್ಲಿ ಮಹಿಳೆಯರಿಗೆ ಪ್ರತ್ಯೇಕವಾದ ಟಿಕೆಟ್ ಕೌಂಟರ್, ಹಾಗೂ ಆಸನಗಳ ವ್ಯವಸ್ಥೆಯನ್ನು ಒಂದು ವಾರದೊಳಗೆ ಮಾಡಿಸುವುದಾಗಿ ಆಶ್ವಾಸನೆಯಿತ್ತರು. ಚಿತ್ರ ಮಂದಿರದ ಮಾಲಕರು ಇದನ್ನು ನಿರಾಕರಿಸಿದರೆ ಪರವಾನಿಗೆಯನ್ನು ರದ್ದು ಮಾಡುವುದಾಗಿಯೂ ಆಶ್ವಾಸನೆಯಿತ್ತರು. ಎ.ಐ.ಡಿ. ಡಬ್ಲ್ಯು.ಎ ಮುಳಬಾಗಿಲು ಘಟಕ

ಮುಳಬಾಗಿಲು ತಾಲೂಕು ಸುನುಪಕಂಟ ಗ್ರಾಮದಲ್ಲಿ ದಿನಾಂಕ 10-1-90 ರಂದು ಬುಧವಾರ ರಾತ್ರಿ 12 ಗಂಟೆಗೆ ತಮಿಳುನಾಡಿನ ಪೋಲೀಸರು ಮತ್ತು ಕೆಲವು ಗೂಂಡಾಗಳು ಊರೊಳಗೆ ನುಗ್ಗಿ ಜಯಪ್ಪ ಎಂಬವರನ್ನು ಥಳಿಸುತ್ತಿದ್ದಾಗ ಊರಿನ ಜನರೆಲ್ಲ ಪ್ರತಿಭಟಿಸಿದರು. ಆಗ ನಂಗಲಿ ಪೋಲೀಸ್ ಠಾಣೆಯ ಪೋಲೀಸರು ಬಂದು ಹೆಂಗಸರು ಮಕ್ಕಳೆನ್ನದೆ ಎಲ್ಲರ ಮೇಲೂ ಭೀಕರ ಲಾಠಿ ಪ್ರಹಾರ ಮಾಡಿದರಲ್ಲದೆ ಅಮಾಯಕ ಜನರ ಮೇಲೆ ಕೇಸು ದಾಖಲು ಮಾಡಿಕೊಂಡರು. ಇದನ್ನು ಪ್ರತಿಭಟಿಸಿ ಮುಳಬಾಗಿಲು ಎ.ಐ.ಡಿ. ಡಬ್ಲ್ಯು.ಎ ಘಟಕ, ಕರ್ನಾಟಕ ಪ್ರಾಂತ ರೈತ ಸಂಘದೊಡಗೂಡಿ ಪ್ರತಿಭಟನಾ ಹೋರಾಟವನ್ನು ಮಾಡಿತು. ಇದರಿಂದಾಗಿ ಕೋಲಾರ ಜಿಲ್ಲಾ ಎಸ್.ಪಿ.ಯವರು ಮಧ್ಯಪ್ರವೇಶಿಸಿ ಈ ಘಟನೆಗೆ ಕಾರಣನಾದ ಹೆಡ್ ಕಾನ್‌ಸ್ಟೇಬಲ್ ಶಾಂತಪ್ಪನವರನ್ನು ಸಸ್ಪೆಂಡ್ ಮಾಡಲಾಗಿದೆ. ಇದು ಜನತೆಯ ಹೋರಾಟಕ್ಕೆ ದೊರೆತ ಜಯವಾಗಿದೆ.

ಕಾಮ್ರೇಡ್ ಸರೋಜ್ ಮುಖರ್ಜಿ ಮಂಗಳೂರಿನಲ್ಲಿ ಶ್ರದ್ಧಾಂಜಲಿ

ಸಿ.ಪಿ.ಐ.(ಎಂ) ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರೂ ಪಶ್ಚಿಮ ಬಂಗಾಳದ ರಾಜ್ಯ ಸಮಿತಿ ಕಾರ್ಯದರ್ಶಿಗಳೂ, ಎಡರಂಗದ ಅಧ್ಯಕ್ಷರೂ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ ಆದ ಕಾಂ. ಸರೋಜ್ ಮುಖರ್ಜಿಯವರು ಕಳೆದ ತಾ: 19 ರಂದು ನಿಧನರಾಗಿದ್ದು ಅವರ ನಿಧನದ ಬಗ್ಗೆ ಸಂತಾಪ ಸೂಚಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು.

ತಾ: 13-2-1990 ರಂದು ಮಂಗಳೂರಿನಲ್ಲಿ ಜರುಗಿದ, ಸಿ.ಪಿ.ಐ. (ಎಂ) ಪಕ್ಷದ ಸಂತಾಪ ಸೂಚಕ ಸಭೆಯ ಅಧ್ಯಕ್ಷತೆಯನ್ನು ಕಾ: ಕೆ.ಆರ್ ಶ್ರೀಯಾನರು ವಹಿಸಿದ್ದರು. ಕಾಂ: ಸರೋಜ್ ಮುಖರ್ಜಿಯವರ ನಿಧನದಿಂದಾಗಿ ದೇಶದ ಕಮ್ಯುನಿಸ್ಟ್ ಚಳವಳಿಗೆ, ಎಡ ಪ್ರಜಾಪ್ರಭುತ್ವ ಚಳವಳಿಗೆ ದೊಡ್ಡ ನಷ್ಟವಾಗಿದೆಯೆಂದು ಹೇಳಿ ಕಾಂ:ಮುಖರ್ಜಿಯವರ ಕ್ರಾಂತಿಕಾರಿ ಜೀವನದ ಬಗ್ಗೆ ವಿವರಿಸಿದರು. ಬಳಿಕ ಶ್ರೀ ಬಿ. ಮಾಧವನವರು ಮಾತನಾಡಿ ಕಾಂ: ಸರೋಜ್ ಮುಖರ್ಜಿಯವರ ಗುರಿ ಸಾಧಿಸಲು ಕಮ್ಯುನಿಸ್ಟರಾದ ನಾವು ಪಣ ತೊಡಬೇಕೆಂದೂ ಹೇಳಿದರು. ಆರಂಭದಲ್ಲಿ ಶ್ರೀ.ಕೆ. ಮೂಸಬ್ಬನವರು ಸಭೆಯನ್ನು ಆರಂಭಿಸಿದರು.

ಸೋವಿಯೆತ್ ಒಕ್ಕೂಟದಲ್ಲೀಗ ಜನಾಂಗೀಯ ಘರ್ಷಣೆಗಳೇಕೆ?

ವಾಸ್ತವಿಕ ಜನಾಂಗೀಯ ಸಮಸ್ಯೆಗಳೊಂದಿಗೆ ಪೆರೆಸ್ಟ್ರೋಯಿಕಾ ವಿರೋಧಿಗಳು, ಪ್ರಜಾಪ್ರಭುತ್ವೀಕರಣ, ಮತ್ತು ತೆರೆದ ನೀತಿಯಿಂದ ಭಯಗೊಂಡವರು, ಭ್ರಷ್ಟ ಆರ್ಥಿಕ ಮಾಫಿಯಾ ಗುಂಪುಗಳು ಪ್ರಯತ್ನಿಸಿದ ಪಿತೂರಿ ಕಾರಣ ಎಂದಿದ್ದಾರೆ ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಮಿಖೈಲ್ ಗೋರ್ಬಚೆವ್. ಫೆಬ್ರವರಿ 5ರಂದು ಪಕ್ಷದ ಕೇಂದ್ರ ಸಮಿತಿಯ ಪ್ಲೀನಂನಲ್ಲಿ ಅವರು ಮಂಡಿಸಿದ ವರದಿಯ ಕೆಲವು ಅಂಶಗಳನ್ನು ಇಲ್ಲಿ ಕೊಡುತ್ತಿದ್ದೇವೆ.


ಪ್ರತ್ಯೇಕವಾದಿ ರಾಷ್ಟ್ರವಾದೀ, ವಿಶೇಷತಃ ಉಗ್ರವಾದಿ ಘೋಷಣೆಗಳು ಎಲ್ಲಿಗೆ ಕೊಂಡೊಯ್ಯುತ್ತವೆ. ಅವುಗಳಿಂದ ಜನಗಳಿಗೆ, ರಾಷ್ಟ್ರೀಯ ಗುಂಪುಗಳಿಗೆ, ಸಮಸ್ತ ದೇಶಕ್ಕೆ ಏನಾಗಬಹುದು ಎಂಬುದರ ಬಗ್ಗೆ ಜನಗಳಿಗೆ ಹೆಚ್ಚೆಚ್ಚು ಅರಿವಾಗುತ್ತಿದೆ.

ಸಂಕುಚಿತ ರಾಷ್ಟ್ರೀಯವಾದ, ಪ್ರತ್ಯೇಕತಾವಾದಗಳನ್ನು ವಿರೋಧಿಸುವಾಗ ನಾವು ನೀತಿಬದ್ಧ ನಿಲುವು ಅನುಸರಿಸಬೇಕು. ಅದೇ ವೇಳೆಗೆ ಜನಾಂಗೀಯ ಸಮಸ್ಯೆಗಳು ಕಪೋಲ ಕಲ್ಪನೆಯಲ್ಲ, ವಾಸ್ತವ ಸಂಗತಿಗಳು, ಪೆರೆಸ್ಟ್ರೋಯಿಕಾದಿಂದ ಪರಿಹಾರ ಕಾಣಲು ಕಾಯುತ್ತಿರುವ ಸಮಸ್ಯೆಗಳು ಎಂಬುದನ್ನು ಅರಿಯಬೇಕು.

ಒಕ್ಕೂಟದ ಹಾಗೂ ಗಣತಂತ್ರಗಳ ವ್ಯಾಪ್ತಿಗಳನ್ನು ಸ್ಪಷ್ಟವಾಗಿ ಗುರುತಿಸಿ, ಗಣತಂತ್ರಗಳ ರಾಜಕೀಯ ಆರ್ಥಿಕ ಸ್ವಾತಂತ್ರ್ಯವನ್ನು ಬಲಗೊಳಿಸಿ, ಜನಾಂಗೀಯ ಸ್ವಾಯತ್ತ ಘಟಕಗಳ ಹಕ್ಕುಗಳನ್ನು ವಿಸ್ತರಿಸಿ! ಎಲ್ಲಾ ಭಾಷೆಗಳ ಸಂಸ್ಕೃತಿಗಳ ಸಮರಸಪೂರ್ಣ ಅಭಿವೃದ್ಧಿಯಿಂದ ಜನಗಳು ಹೊಸ ಸೋವಿಯತ್ ಒಕ್ಕೂಟದ ಅಪಾರ ಪ್ರಯೋಜನಗಳನ್ನು ಕಾಣುತ್ತಾರೆ ಎಂದು ತಿಳಿದಿರುವ ಪ್ರತ್ಯೇಕತಾವಾದಿ, ಸಂಕುಚಿತವಾದಿ ಮತ್ತಿತರ ಎಲ್ಲ ತರಹದ ರಾಷ್ಟ್ರವಾದಿಗಳು ಜನಗಳಲ್ಲಿ ಬೆಳೆಯುತ್ತಿರುವ ರಾಷ್ಟ್ರೀಯ ಸ್ವಪ್ರಜ್ಞೆಯನ್ನು ತಮ್ಮ ಸ್ವಾರ್ಥಸಾಧನೆಗೆ ಬಳಸಲು ಪ್ರಯತ್ನಿಸುತ್ತಿದ್ದಾರೆ. ತಮ್ಮ ಈ ವ್ಯಾಪಕ ಯೋಜನೆಗಳನ್ನು ವಿಫಲಗೊಳಿಸಲಿರುವ ಪೆರೆಸ್ಟ್ರೋಯಿಕಾದ ವಿರುದ್ಧ ಮೊದಲೇ ಹಲ್ಲೆ ನಡೆಸಬೇಕೆಂದಿದ್ದಾರೆ ಅವರು. ಅಝುರ್‌ಬೈಝಾನ್ ಮತ್ತು ಅರ್ಮೇನಿಯಾದ ಇತ್ತೀಚಿನ ಬೆಳವಣಿಗೆಗಳಲ್ಲಿ ಇದು ಸ್ಪಷ್ಟವಾಗಿ ಕಾಣಬಂದಿದೆ.

ಕೇಂದ್ರ ಸಮಿತಿ ಹಾಗೂ ಸರ್ಕಾರದ ಪ್ರಮುಖ ಕ್ರಮಗಳಿಂದ ನಗೊರ್ನೊ ಕಾರಾಬಾಖ್‌ನ ಕಗ್ಗಂಟು ಬಿಡಿಸಿಕೊಳ್ಳುವ ನಿರೀಕ್ಷೆ ಮೂಡಿತ್ತು. ಆದರೆ ಈ ಎರಡು ಗಣತಂತ್ರಗಳು ಮತ್ತು ಈ ಪ್ರದೇಶದ ಕೆಲವು ಶಕ್ತಿಗಳ ಸ್ವಾರ್ಥಕ್ಕೆ ಇದು ಪೂರಕವಾಗಿರಲಿಲ್ಲ.

ಪೆರೆಸ್ಟ್ರೋಯಿಕಾ ಬಗಲಿನ ಮುಳ್ಳಾಗಿರುವ, ಪ್ರಜಾಪ್ರಭುತ್ವೀಕರಣ ಹಾಗೂ ತೆರೆದ ನೀತಿಗೆ ಭಯಪಡುವವರು ಕಾನೂನುಗಳನ್ನು ನಿರ್ಲಕ್ಷಿಸುತ್ತಾರೆ. ನಾನಿಲ್ಲಿ ಹೇಳುತ್ತಿರುವುದು ಛಾಯಾ ಆರ್ಥಿಕತೆ (ಸಮಾನಾಂತರ ಆರ್ಥಿಕತೆ)ಯ ಪ್ರತಿನಿಧಿಗಳ ಬಗ್ಗೆ, ವಾಸ್ತವವಾಗಿ ಮಾಫಿಯಾಗಳೇ ಆಗಿರುವ ಈ ವ್ಯಕ್ತಿಗಳ ಬಗ್ಗೆ. ಇವರು ಜನಾಂಗೀಯ ವೈಷಮ್ಯದ ಬೆಂಕಿಗೆ ತಿದಿಯೂದುತ್ತಿದ್ದಾರೆ. ರಾಷ್ಟ್ರೀಯ ಪುನರುಜ್ಜೀವನದ ಹೆಸರಿನಲ್ಲಿ ಸರಕಾರೀ ಸಂಸ್ಥೆಗಳ ಮೇಲೆ ಒತ್ತಡ ಹೇರುತ್ತಿದ್ದಾರೆ.



ಹೆಜ್ಜೆ-ಹೆಜ್ಜೆಗೂ ಹಿಂದೆ ಸರಿದು ಈ ಎರಡು ಗಣತಂತ್ರಗಳ ಸರಕಾರಗಳು, ಪಕ್ಷ ಗೌರವಾರ್ಹ ರೀತಿಯಲ್ಲಿ ನಡೆದುಕೊಳ್ಳಲಿಲ್ಲ. ದುರದೃಷ್ಟವಶಾತ್ ಅಲ್ಲಿನ ಬುದ್ಧಿಜೀವಿಗಳು ಪರಿಸ್ಥಿತಿಯನ್ನು ಸರಿಯಾಗಿ ವಿಶ್ಲೇಷಿಸಲಿಲ್ಲ. ಈ ನಡುವೆ ಭ್ರಷ್ಟ, ಪೆರೆಸ್ಟ್ರೋಯಿಕಾ - ವಿರೋಧಿ ಶಕ್ತಿಗಳು ಜನಗಳ ಕಾರ್ಯಾಚರಣೆಯನ್ನು ವಿನಾಶಕಾರಿ ಮಾರ್ಗದತ್ತ ಸೆಳೆಯಲು ಶಕ್ತರಾದರು.

ಬಾಕು ನಗರ ಅಮಾನುಷ ಹತ್ಯೆಗಳ ದೃಶ್ಯಗಳನ್ನು ಕಾಣಬೇಕಾಯಿತು. ತುರ್ತು ಪರಿಸ್ಥಿತಿ ತರದೆ ಇದ್ದಿದ್ದರೆ ಹತ್ತಾರು ಜನಗಳದ್ದಲ್ಲ, ಸಾವಿರ-ಸಾವಿರ ಜನಗಳ ರಕ್ತದ ಹೊಳೆ ಹರಿಯುತ್ತಿತ್ತು..

ಮುಖ್ಯ ಸಂಗತಿಯೆಂದರೆ ರಾಷ್ಟ್ರವಾದಿ, ಸೋವಿಯೆತ್ ವಿರೋಧಿ ಗುಂಪುಗಳು ಬಹಿರಂಗವಾಗಿಯೇ ಸಂವಿಧಾನ ವ್ಯವಸ್ಥೆಯನ್ನು ಅತಿಕ್ರಮಿಸಿದರು. ಅಧಿಕಾರ ಕಸಿಯಲು ಪ್ರಯತ್ನಿಸಿದರು. ಸರ್ವಾಧಿಕಾರ ಸ್ಥಾಪಿಸಲು ಯತ್ನಿಸಿದರು. ಪ್ರಜಾಪ್ರಭುತ್ವವನ್ನಲ್ಲ. -ನಗ್ನ ಬಲಪ್ರಯೋಗದ ಮೂಲಕ.

ಇದೊಂದು ಪಿತೂರಿಯ ಪ್ರಯತ್ನವಲ್ಲದೆ ಮತ್ತೇನೂ ಅಲ್ಲ. ಎಲ್ಲಾ ಸಿದ್ಧತೆಗಳನ್ನು, ಮುಖ್ಯವಾಗಿ ಮಿಲಿಟರಿ ಸಿದ್ಧತೆ ನಡೆಸಲಾಗಿತ್ತು. ಅಝುರ್‌ಬೈಝಾನಿ 'ಪಾಪ್ಯುಲರ್ ಫ್ರಂಟ್'ನ ಈ ವಿಭಾಗದೊಡನೆ ಕೆಲವು ರಾಜಕೀಯ ಶಕ್ತಿಗಳ ಸರಸ ಅವರ ನಿಜಉದ್ದೇಶಗಳನ್ನು ಬಯಲಿಗೆಳೆದಿದೆಯಷ್ಟೆ.

ಸೋವಿಯೆತ್ ಸೇನೆಯ, ಆಂತರಿಕ ಮಂತ್ರಾಲಯದ ಪಡೆಗಳ ಸೈನಿಕರು, ಅಧಿಕಾರಿಗಳು ಜನತೆಯ ಬಗ್ಗೆ ತೋರ್ಪಡಿಸಿದ ಜವಾಬ್ದಾರಿಯ ಉನ್ನತ ಪ್ರಜ್ಞೆ, ಧೈರ್ಯ, ಸ್ಥಿಮಿತತೆ ರಕ್ತಪಾತ ಹೆಚ್ಚುವುದನ್ನು ತಪ್ಪಿಸಿತು. ಸಾವಿರಾರು ಜೀವಗಳು ಉಳಿದವು. ಪರಿಸ್ಥಿತಿ ತಿಳಿಗೊಳ್ಳಲು ನೆರವಾಯಿತು.

ಅಫಘಾನಿಸ್ತಾನ ಪಾಶ್ಚಿಮಾತ್ಯರ ಲೆಕ್ಕಾಚಾರ ಹುಸಿಯಾಗಿದೆ.

ಸೋವಿಯತ್ ಸೇನೆ ಅಫಘಾನಿಸ್ತಾನದಿಂದ ನಿರ್ಗಮಿಸಿ ಫೆಬ್ರವರಿ 15ಕ್ಕೆ ಒಂದು ವರ್ಷವಾಯಿತು. ಸವುರ್ ಕ್ರಾಂತಿ ನಡೆಸಿದ ಪಿ.ಡಿ.ಪಿ.ಎ.ಗೆ ಅಫಘಾನಿಸ್ತಾನದಲ್ಲಿ ಏನೂ ಜನ ಬೆಂಬಲವಿಲ್ಲ. ಕೇವಲ ಸೋವಿಯತ್ ಸೇನೆಗಳ ಬಲದಿಂದ ಅದು ನಿಂತಿದೆ, ಸೋವಿಯೆತ್ ಸೇನೆ ಹೋಯಿತೆಂದರೆ ಒಂದು ವಾರದಲ್ಲಿ ನಜೀಬ್ ಸರ್ಕಾರ ಪತನಗೊಳ್ಳುತ್ತದೆ ಎಂದು ಪಾಶ್ಚಿಮಾತ್ಯ ರಾಜಕೀಯ ಪಂಡಿತರು ಪುಯಿಲೆಬ್ಬಿಸಿದ್ದರು. ಒಂದು ವಾರದೊಳಗೆ ನಜೀಬ್ ಸರಕಾರ ಬೀಳದಿದ್ದಾಗ ಒಂದು ತಿಂಗಳೊಳಗೆ ಬೀಳುತ್ತದೆಂದು ಮುಖ ಕಿವಿಚಿಕೊಂಡಾದರೂ ಆತ್ಮವಿಶ್ವಾಸದಿಂದ ಹೇಳಲಾರಂಭಿಸಿದರು. ಈಗ ಒಂದು ವರ್ಷ ಕಳೆದುಹೋಗಿದೆ. ಅವರಲ್ಲಿದ್ದ ವಿವರಣೆಗಳೆಲ್ಲಾ ಖಾಲಿಯಾಗಿವೆ. ಈ ನಡುವೆ ನಜೀಬ್ ಸರಕಾರ ಏಕಪಕ್ಷೀಯವಾಗಿ ಯುದ್ಧವಿರಾಮ ಕೂಡಾ ಘೋಷಿಸಿತು. ಇಪ್ಪತ್ತಕ್ಕೂ ಹೆಚ್ಚು ಶಾಂತಿ ಪ್ರಸ್ತಾವಗಳನ್ನು ಮಂಡಿಸಿದ್ದಾರೆ. ಪಾಕಿಸ್ತಾನದ ನೆಲದಿಂದ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಶಸ್ತ್ರಾಸ್ತ್ರಗಳಿಂದ ಧಾಳಿಮಾಡುತ್ತಿರುವ ಅಫಘಾನ್ ಬಂಡುಕೋರರು ಈಗ ನಜೀಬ್ ಸರ್ಕಾರದ ವಿರುದ್ಧ ಸ್ಲೋಗನ್‌ಗಳ ಅಭಾವದಿಂದಾಗಿ ಚೆಲ್ಲಾಪಿಲ್ಲಿಯಾಗುತ್ತಿದ್ದಾರೆಂದು ಬೂರ್ಜ್ವಾ ಪತ್ರಕರ್ತರೂ ಗಮನಿಸಿದ್ದಾರೆ.

ಈ 'ಪವಾಡ' ಹೇಗೆ ಸಾಧ್ಯ? ಉತ್ತರ ಸುಲಭ. ಸವುರ್ ಕ್ರಾಂತಿಯ ನಂತರದ ಒಂದು ದಶಕದಲ್ಲಿ ಅಫಘಾನ್ ಸಮಾಜದಲ್ಲಿ ತಂದ ಮೂಲಭೂತ ಬದಲಾವಣೆಗಳಿಂದಾಗಿ ಎನ್ನುತಾರೆ ನಜೀಬ್.

ತ್ರಿಪುರಾ ವಿಧಾನ ಸಭೆಗೆ ಅಭೂತ ಪೂರ್ವ ಲಗ್ಗೆ

ಜನವರಿ 22. ಅಗರ್ತಲಾದ ಉಜ್ಜಯಂತ ಅರಮನೆ. ತ್ರಿಪುರಾ ವಿಧಾನ ಸಭೆಯ ಕಲಾಪ ನಡೆಯುವ ಸ್ಥಳ. ಜನತೆಯ ಮುಖಂಡರನ್ನು ಹಲವು ಬಾರಿ ಅಪಮಾನಿಸಿದ್ದನ್ನು ಮೂಕವಾಗಿ, ಭಯವಿಹ್ವಲವಾಗಿ ನೋಡಿದ ಜಾಗ. ಕಳೆದ ಹದಿನೈದು ವರ್ಷಗಳಲ್ಲಿ ಎಂದೂ ಕಾಣದ ಬೃಹತ್ ಜನಸ್ತೋಮವನ್ನೂ ಮೂಕವಾಗಿ ನೋಡಿತು. ಮಧ್ಯಾಹ್ನ ಕಳೆದು 3 ಗಂಟೆಯ ಹೊತ್ತಿಗೆ ವಿಧಾನ ಸಭೆಯತ್ತ ಸಾಗುವ ಎಲ್ಲಾ ಹಾದಿ ಬೀದಿಗಳಲ್ಲೂ ಜನರು. ಸಾವಿರ-ಸಾವಿರ ಕಾರ್ಮಿಕರು, ರೈತರು, ಸಣ್ಣ ವ್ಯಾಪಾರಿಗಳು, ಕುಶಲಕರ್ಮಿಗಳು, ಕಲಾಕಾರರು, ಬುಡಕಟ್ಟು ಜನಗಳು, ಇತರರು ಮುಸ್ಲಿಮರು, ಮಣಿ ಪುರಿಗಳು. ಕಳ್ಳತನದಿಂದ ಅಧಿಕಾರಕ್ಕೆ ಬಂದ ಕಾಂಗ್ರೆ ಟಿ.ಯು.ಜೆ.ಎಸ್. ಸಮ್ಮಿಶ್ರ ಸರಕಾರದ ಅಮಾನುಷ ಆಳ್ವಿಕೆಯ ವಿರುದ್ಧ ತಮ್ಮ ಬೃಹತ್ ಪ್ರತಿಭಟನೆ ವ್ಯಕ್ತಪಡಿಸಿದರು.

ವಿಧಾನಸಭೆಗೆ ಜನತೆಯ ಲಗ್ಗೆ ಎಷ್ಟೊಂದು ಯಶಸ್ವಿಯಾಗಿತ್ತೆಂದರೆ ಸಮ್ಮಿಶ್ರ ಸರಕಾರದ ಮಂತ್ರಿಗಳಿಗೆ ದಾರಿ ಮಾಡಿಕೊಡಲು ಎಡರಂಗದ ಮುಂದಾಳುಗಳ ನೆರವು ಬೇಕಾಯಿತು.

ವಿಧಾನ ಸಭೆಯೆದುರು ನಡೆದ ಬೃಹತ್ ಸಭೆಯ ಅಧ್ಯಕ್ಷತೆಯನ್ನು ಸಿ.ಪಿ.ಐ(ಎಂ) ಕೇಂದ್ರ ಸಮಿತಿ ಸದಸ್ಯ ಹಾಗೂ ರಾಜ್ಯ ಸಮಿತಿ ಕಾರ್ಯದರ್ಶಿ ದಶರಥ ದೇಬ್ ವಹಿಸಿದ್ದರು. ಸಿ.ಪಿ.ಐ. ರಾಜ್ಯ ಕಾರ್ಯದರ್ಶಿ ಜಿತೇಂದ್ರ ದಾಸ್, ಆರ್.ಎಸ್.ಪಿ.ಯ ಪನ್ನಾಲಾಲ್ ಘೋಷ್ ಮತ್ತು ಫಾರ್ವಡ್ ಬ್ಲಾಕ್ ರಾಜ್ಯ ಕಾರ್ಯದರ್ಶಿ ಬ್ರಜಗೋಪಾಲರಾಯ್ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಮಂತ್ರಿಗಳೇ ಮಾಫಿಯಾ ಮುಖಂಡರಂತೆ ವರ್ತಿಸುವ, ಕೊಲೆಗಡುಕರ ಗ್ಯಾಂಗ್‌ಗಳಿಗೆ ನೇರ ಶಸ್ತ್ರಾಸ್ತ್ರ ನೀಡುತ್ತಿರುವ ಒಂದು ಸರಕಾರವನ್ನು ಜನ ಹೇಗೆ ಸಹಿಸಲು ಸಾಧ್ಯ ಎಂದ ಕಾಂ. ದೇಬ್ ಅಗರ್ತಲಾದಲ್ಲೆಲ್ಲಾ ಮೊಳಗಿದ ಘೋಷಣೆಗಳ ನಡುವೆ ಜನ ವಿರೋಧಿ ಈ ಸಮ್ಮಿಶ್ರ ಸರಕಾರ ರಾಜೀನಾಮೆ ನೀಡುವವರೆಗೆ ಹೋರಾಟ ಮುಂದುವರಿಸುವ ಎಡರಂಗದ ದೃಢ ನಿರ್ಧಾರವನ್ನು ತಿಳಿಯ ಪಡಿಸಿದರು.

ಈ ಕಾರ್ಯಕ್ರಮಕ್ಕೆ ಪೂರ್ವಭಾವಿಯಾಗಿ ಎಡರಂಗದ ಹನ್ನೆರಡಂಶಗಳ ಬೇಡಿಕೆಯ ಮೇಲೆ ನೂರಾರು ಸಭೆಗಳು, ಸಮಾವೇಶಗಳು ನಡೆದಿದ್ದವು. ಜನವರಿ 10 ರಂದು ರಾಜ್ಯಾದ್ಯಂತ 'ಸ್ವಾಯತ್ತ ಜಿಲ್ಲಾ ಮಂಡಳಿ ರಕ್ಷಿಸಿ' ದಿನವನ್ನು ಯಶಸ್ವಿಯಾಗಿ ಆಚರಿಸಲಾಯಿತು. ಜನವರಿ 12 ರಂದು ತ್ರಿಪುರಾ ನೌಕರರ ಸಂಯೋಜಕ ಸಮಿತಿಯ ಬಾವುಟದಡಿ ಸಾವಿರಾರು, ನೂರಾರು, ಅಧ್ಯಾಪಕರು, ಕಾರ್ಮಿಕರು ಸಿವಿಲ್ ಸೆಕ್ರೆಟಾರಿಯೆಟ್‌ನತ್ತ ಸಾಗಿ ಮತಪ್ರದರ್ಶನ ನಡೆಸಿದರು. ಭಯಭೀತಗೊಂಡ ಕಾಂಗ್ರೆ ಮುಖ್ಯಮಂತ್ರಿಯ ಬದಲು ಮಾಜಿ ಗೃಹ ಮಂತ್ರಿ ಸಮೀರ್ ರಂಜನ್ ಬರ್ಮನ್ ನೌಕರರ ಮನವಿ ಪತ್ರ ಸ್ವೀಕರಿಸಿದ.

ಸಾವಿನ ಬಲೆಯತ್ತ ತಳ್ಳಲ್ಪಟ್ಟ ತ್ರಿಪುರಾ ಜನತೆ ತಮ್ಮ ಹಕ್ಕುಗಳ ಮರುಸ್ಥಾಪನೆಗಾಗಿ ಪ್ರತಿರೋಧ ಆರಂಭಿಸಿದ್ದಾರೆ. ರಾಜ್ಯದಲ್ಲಿ ಅವರು ಮತ್ತೆ ಪ್ರಜಾಪ್ರಭುತ್ವ ನೆಲೆಗೊಳಿಸಲು ಕಟಿಬದ್ಧರಾಗಿದ್ದಾರೆ ಎಂಬುದು ಈಗ ಹೆಚ್ಚೆಚ್ಚು ಸ್ಪಷ್ಟ.

ಮಹಾರಾಷ್ಟ್ರ ವಿಧಾನ ಸಭಾ ಚುನಾವಣೆ

ಸಿ.ಪಿ.ಐ.(ಎಂ) ಅಭ್ಯರ್ಥಿಗಳು

1.	ಪ್ರಭಾಕರ ಸಾಂಝುಗಿರಿ	ಭಾಂಡುಪ್ (ಮುಂಬೈ)
2.	ಸತ್ಯೇಂದ್ರ ಮೋರೆ	ಧಾರಾವಿ (ಮುಂಬೈ)
3.	ಶಂಕರ ಚವ್ಹಾಣ	ಡಹಾಣು (ಠಾಣೆ)
4.	ಲಹಾನು ಕೋಮ್	ಜವ್ಹಾರ (ಠಾಣೆ)
5.	ಜೀವಾ ಪಾಂಡು ಗಾವಿತ್	ಸುರಗಣಾ (ನಾಶಿಕ್)
6.	ಜಯಸಿಂಗ ಮಾಳೀ	ತಳೋದೆ (ಧುಳೆ)
7.	ನರೇಂದ್ರ ಕವೀಶ್ವರ	ಖಾಮಗಾವ್ (ಬುಲ್‌ಢಾಣಾ).
8.	ಯಶವಂತ್ ಝೂಡೆ	ವರ್ಧಾ (ವರ್ಧಾ)
9.	ಗಂಗಾಧರಅಪ್ಪಾ ಬುರಾಂಡೆ	ಮಾಜಲಗಾವ್ (ಬೀಡ್)
10.	ವಿಠ್ಠಲರಾವ್ ನಾಯಕ್ ಮ್ಹಸ್ಕೆ	ಕಳಮ್‌ನುರಿ (ಪರ್ಭಣಿ)
11.	ಪ್ರಭಾಕರ್ ಮಹಾಬಳೇಶ್ವರ್‌ಕರ್	ಸಾತಾರಾ ನಗರ (ಸಾತಾರಾ)
12.	ಕೆ.ಎಲ್.ಮಲಾಬಾದೆ	ಇಚಲಕರಂಜಿ (ಕೊಲ್ಹಾಪುರ)

ಕೇರಳ ಎಲ್.ಡಿ.ಎಫ್ ಸರಕಾರ ಮೂರನೇ ವರ್ಷದಲ್ಲಿ

ಇಡೀ ದೇಶವನ್ನು ತಟ್ಟುತ್ತಿರುವ ಆರ್ಥಿಕ ಮುಗ್ಗಟ್ಟು, ಕೇರಳದ ಸ್ವಂತ ಸಮಸ್ಯೆಗಳಿಂದಾಗಿ ಇನ್ನಷ್ಟು ತೀವ್ರಗೊಂಡಿದ್ದರೂ ಅಲ್ಲಿನ ಎಲ್.ಡಿ.ಎಫ್. ಸರಕಾರ ತನ್ನ ಮಿತಿಯೊಳಗೆ ವಿವಿಧ ಜನವಿಭಾಗಗಳಿಗೆ, ವಿಶೇಷವಾಗಿ ದುಡಿಯುವ ಜನರಿಗೆ ಸಾಕಷ್ಟು ಪ್ರಯೋಜನ ತಂದಿರುವ ಹಲವು ಕ್ರಮಗಳನ್ನು ತನ್ನ ಎರಡು ವರ್ಷಗಳ ಅಧಿಕಾರಾವಧಿಯಲ್ಲಿ ಸಾಧ್ಯವಾಗಿದೆ.

ಕೃಷಿ ಕಾರ್ಮಿಕರ ಆದಾಯ ಅವಕಾಶವನ್ನು ಹೆಚ್ಚಿಸಲು ಕೈಗೊಂಡ ಭತ್ತದ ಸಮೂಹ ಕೃಷಿಯಲ್ಲಿ 1.63 ಲಕ್ಷ ರೈತರು 61224 ಹೆಕ್ಟೇರ್ ಜಮೀನಿನಲ್ಲಿ ಭಾಗವಹಿಸಿದ್ದಾರೆ. ಇದರ ಭಾರೀ ಯಶಸ್ಸು ತೆಂಗಿನಬೆಳೆಯಲ್ಲೂ ಈ ಸಮೂಹ ಕೃಷಿಯನ್ನು ರಾಜ್ಯಾದ್ಯಂತ ಪ್ರಯತ್ನಿಸಲು ಪ್ರೇರಣೆ ನೀಡಿದೆ. ಎಲ್ಲಾ ಪಂಚಾಯತುಗಳಲ್ಲಿ ಕೃಷಿ ಭವನಗಳು ಕಾರ್ಯನಿರ್ವಹಿಸುತ್ತಿದ್ದು ಕೃಷಿ ಜನಸಮೂಹಗಳಲ್ಲಿ ಹೊಸ ವಿಶ್ವಾಸ ಮೂಡಿಸಿದೆ. ಇದೇ ರೀತಿ ಅಗ್ರೊ ಕ್ಲಿನಿಕ್‌ಗಳು ಎಲ್ಲಾ ಜನವಿಭಾಗಗಳ ಮೆಚ್ಚುಗೆ ಗಳಿಸಿವೆ.

93 ಕೋಟಿ ರೂ. ಗಳ ಸಮಗ್ರ ತೆಂಗು ಅಭಿವೃದ್ಧಿ ಯೋಜನೆ ಆರಂಭಿಸಲಾಗುತ್ತಿದೆ. ತೆಂಗಿನ ಉತ್ಪಾದನೆ ಹೆಚ್ಚಿಸುವ, ಇಡೀ ಉತ್ಪಾದನೆಯನ್ನೂ ರಾಜ್ಯದಲ್ಲೇ ಸಂಸ್ಕರಿಸುವ ಯೋಜನೆಯಿದು. ಇದಕ್ಕಾಗಿ ಒಂದು ಬೃಹತ್ ತೆಂಗು ಸಂಸ್ಕರಣಾ ಸಂಕೀರ್ಣ ರಚಿಸಲಾಗುತ್ತಿದೆ.

ಇನ್ನೊಂದು ಗಮನಾರ್ಹ ಸಾಧನೆಯ ಕ್ಷೇತ್ರವೆಂದರೆ ಬಡವರಿಗೆ ವಸತಿ ಸೌಲಭ್ಯ. ಪುನರ್ವಸತಿ ಯೋಜನೆಯ ಮೊದಲ ಘಟ್ಟದಲ್ಲಿ 40 ಸಾವಿರ ಮನೆಗಳನ್ನು ಕಟ್ಟಲಾಗಿದೆ. ಮೂರನೇ ಘಟ್ಟದ 55 ಸಾವಿರದಲ್ಲಿ 35 ಸಾವಿರ ಮನೆಗಳನ್ನು ಕಟ್ಟುವ ಕೆಲಸ ಆಗಲೇ ಆರಂಭವಾಗಿದೆ. ಕಡಿಮೆ ಆದಾಯದ ಜನರಿಗೆ ನೆರವು ಧನವನ್ನು 9000 ರೂ. ಗೆ ಏರಿಸಲಾಗಿದೆ. ಎಲ್ಲಾ ಜಿಲ್ಲಾ, ತಾಲೂಕು ಕೇಂದ್ರಗಳಲ್ಲಿ ಬೃಹತ್ ಸಾರ್ವಜನಿಕ ವಸತಿ ಯೋಜನೆ ಜ್ಯಾರಿಗೊಳ್ಳುತ್ತಿದೆ. ಪರಂಪರಾಗತ ಉದ್ದಿಮೆಗಳ ಕಾರ್ಮಿಕರಿಗೆ ವಸತಿ ಯೋಜನೆಗಳನ್ನು ರೂಪಿಸಲಾಗುತ್ತಿದೆ.

ಇನ್ನೂ ಕೆಲವು ಜನ-ಪರ ಸಾಧನೆಗಳೆಂದರೆ 1987 ರ ಮೊದಲು ಅರಣ್ಯ ಭೂಮಿಯಲ್ಲಿದ್ದವರಿಗೆ ಪಟ್ಟಾ ಕೊಡುವಂತೆ ಕೇಂದ್ರದ ನೆರವಿಗೆ ಪ್ರಯತ್ನ. ಕೆರೆಗೆ ವ್ಯವಸ್ಥೆಯ ಬಗ್ಗೆ ವಿಮರ್ಶೆ ನಡೆಸಿ ಸ್ಥಳೀಯ ಉತ್ಪಾದನೆಗೆ ಅಡ್ಡಿಯುಂಟು ಮಾಡುವ ಯಾವುದಾದರೂ ತೊಂದರೆಗಳಿದ್ದರೆ ಅವಕ್ಕೆ ಪರಿಹಾರ ಕಂಡು ಹಿಡಿಯಲು ಪ್ರಯತ್ನಿಸಲಾಗುತ್ತಿದೆ.

ಕೇರಳ ರಾಜ್ಯ ನಾಗರಿಕ ಪೂರೈಕೆ ನಿಗಮ ಸಾರ್ವಜನಿಕ ವಿತರಣೆಯ ರಂಗದಲ್ಲಿ ಹಲವು [illegible] ಕೆಲಸಗಳನ್ನೂ ಮುಂದುವರೆಸುತ್ತಿದೆ. ಪ್ರತಿಯೊಂದು ಬ್ಲಾಕಿನಲ್ಲಿ ಮಾವೆಲಿ ಸ್ಟೋರ್‌ಗಳು, ಸಂಚಾರಿ ಮಾವೆಲಿ ಸ್ಟೋರ್‌ಗಳು, ಹಬ್ಬದ ವಿಶೇಷ ಮಾರ್ಕೆಟ್‌ಗಳಿಂದಾಗಿ ಅಗತ್ಯ ಸಾಮಗ್ರಿಗಳ ಬೆಲೆಗಳ ಮೇಲೆ ಹತೋಟಿಯಿಡಲು ಸಾಧ್ಯವಾಗಿದೆ.

ಕಟ್ಟಡ ಕೆಲಸಗಾರರು, ಸಾರಾಯಿ, ವಿದೇಶಿ ಮದ್ಯ ಉದ್ದಿಮೆಗಳ ಕಾರ್ಮಿಕರು, ಕೈ ಮಗ್ಗ ಕಾರ್ಮಿಕರು, ಕೃಷಿ ಕಾರ್ಮಿಕರು, ಬೊಂಬು ಕಾರ್ಮಿಕರು, ಬೀಡಿ ಸಿಗಾರ್ ಕಾರ್ಮಿಕರಿಗೆ ಕಾನೂನಿನ ಮೂಲಕ ಕಲ್ಯಾಣ ನಿಧಿ ರಚಿಸಲಾಗಿದೆ. ತೋಟ ಕಾರ್ಮಿಕರು, ಮಡಿವಾಳರು, ಕ್ಷೌರಿಕರು, ಸಿಂಪಿಗರು, ಟಾಡಿ [illegible] ಕಾರ್ಮಿಕರೂ ಇಂತಹುದೇ ಕಲ್ಯಾಣ ನಿಧಿ ಏರ್ಪಡಿಸಲು ಶಾಸನ ತಯಾರಿಸಲಾಗುತ್ತಿದೆ. ನಿವೃತ್ತಿ ವೇತನವನ್ನು ಕೃಷಿ ಕಾರ್ಮಿಕರಿಂದ ಕೈಮಗ್ಗ, ಗೇರು ಬೀಜ, ತೆಂಗಿನ ನಾರು ಕಾರ್ಮಿಕರಿಗೂ ವಿಸ್ತರಿಸಲಾಗಿದೆ. ಹಲವಾರು ಕೈಗಾರಿಕೆಗಳಲ್ಲಿ ಕನಿಷ್ಠ ಕೂಲಿಯನ್ನು ಪರಿಷ್ಕರಿಸಲಾಗಿದೆ.

1991 ರೊಳಗೆ 15-35 ವಯೋಗುಂಪಿನಲ್ಲಿ ಕೇರಳಾ ಸಾಕ್ಷರತೆಯ ಯೋಜನೆ ಹಾಕಲಾಗಿದೆ. ಶಿಕ್ಷಣ ರಂಗ ಸುಧಾರಣೆಗೆ ವ್ಯಾಪಕ ಯೋಜನೆಗಳನ್ನು ಈಗಾಗಲೇ ಜ್ಯಾರಿಗೊಳಿಸಲಾಗುತ್ತಿದೆ.

KRNW/BGS-312 MAG(2) PRB DECR 319-78/79



ಸರೋಜ್ ದಾ...

ಈ ಹಾರ

ಜನವರಿ 15, 1911 ರಲ್ಲಿ ಜನಿಸಿದ ಕಾಮ್ರೇಡ್ ಸರೋಜ್ ಮುಖರ್ಜಿ 1924 ರಲ್ಲೇ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸೇರಿದರು. ನಂತರ ಜುಗಾಂತರ್ ಕ್ರಾಂತಿಕಾರಿ ಗುಂಪಿನ ಸಂಪರ್ಕಕ್ಕೆ ಬಂದರು. 1930 ರ ನಾಗರೀಕ ಅಸಹಕಾರ ಆಂದೋಲನದಲ್ಲಿ ಬಂಧಿತರಾದರು. 1931 ರ ಕಾಂಗ್ರೆಸ್ ನ ಕರಾಚಿ ಅಧಿವೇಶನಕ್ಕೆ ಪ್ರತಿನಿಧಿಯಾದರು. ಹಿಂದಿರುಗಿ ಬಂದು ಪೂರ್ವ ಬಂಗಾಲ ಕಾರ್ಮಿಕರ ಸಂಘ ಸೇರಿದರು. 1931 ರಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಿದರು. ಜೈಲಿನಿಂದ ಹೊರಬಂದಾಗ 1938 ರಲ್ಲಿ ಪೂರ್ಣಾವಧಿ ಕಾರ್ಯಕರ್ತರಾದರು. 1940 ರಲ್ಲಿ ಕನಕ ಮುಖರ್ಜಿಯವರೊಂದಿಗೆ ವಿವಾಹವಾಯಿತು. ಅಂದಿನಿಂದ ಅವರ ಸಂಪೂರ್ಣ ಜೀವನ ಕಮ್ಯುನಿಸ್ಟ್ ಆಂದೋಲನಕ್ಕೆ ಮುಡಿಪು.

ಅವಿಭಜಿತ ಪಕ್ಷದಲ್ಲಿ ಅವರು 1939 ರಿಂದ ರವರೆಗೆ ಕಲ್ಕತ್ತಾ ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿದ್ದರು. 1943 ರಿಂದ . 1948 ನಂತರ 1951 ರಿಂದ 1964 ರವರೆಗೆ ಪಶ್ಚಿಮ ಬಂಗಾಲ ಪ್ರಾಂತೀಯ ಸಮಿತಿಯ ಸೆಕ್ರೆಟಾರಿಯಟ್ ಸದಸ್ಯರಾಗಿದ್ದರು.

1971 ರಿಂದ 1977 ರವರೆಗೆ ಲೋಕಸಭಾ ಸದಸ್ಯರಾಗಿದ್ದರು.

ಸಿ.ಪಿ.ಐ. (ಎಂ) ಆರಂಭವಾದಂದಿನಿಂದ ಅವರು ಪಶ್ಚಿಮ ಬಂಗಾಲ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರಾಗಿದ್ದರು.

1982 ರಲ್ಲಿ ಕಾಮ್ರೇಡ್ ಪ್ರಮೋದ್ ದಾಸ್‌ಗುಪ್ತರ ನಿಧನದ ನಂತರ ಪಶ್ಚಿಮ ಬಂಗಾಳ ರಾಜ್ಯ ಸಮಿತಿಯ ಕಾರ್ಯದರ್ಶಿಯಾದರು. ಪಕ್ಷದ 10 ನೇ ಮಹಾಧಿವೇಶನದಲ್ಲಿ (1978) ಕೇಂದ್ರ ಸಮಿತಿಯ ಸದಸ್ಯರಾಗಿ 12 ನೇ ಮಹಾಧಿವೇಶನ (1985) ದಲ್ಲಿ ಪಾಲಿಟ್‌ಬ್ಯೂರೋ ಸದಸ್ಯರಾಗಿ ಆಯ್ಕೆಗೊಂಡರು.

ಪುಟ 1 ರಿಂದ

ಕಮ್ಯುನಿಸ್ಟ್ ನಾಯಕ ಬಿನೋಯ್ ಚೌಧುರಿ ಅವರ ಬಾಲ್ಯ ಸ್ನೇಹಿತ ಸಹಪಾಠಿ ಅಲ್ಲದೆ ಜೀವನಾದ್ಯಂತ ರಾಜಕೀಯ ಜೀವನದಲ್ಲಿ ಒಡನಾಡಿ.

ಸರೋಜ್ ಮುಖರ್ಜಿ ಕಾಂಗ್ರೆಸ್ ನಾಯಕತ್ವದ ಒಡಂಬಡಿಕೆಯ ನೀತಿಯಿಂದ ಬಹಳ ಬೇಗನೆ ಬೇಸತ್ತರು. ಉಪ್ಪು ಸತ್ಯಾಗ್ರಹದ ಸಮಯದಲ್ಲಿ ಬರ್ದ್ವಾನ್‌ದಲ್ಲಿ ಬಹಿರಂಗವಾಗಿ ಅವರು ಉಪ್ಪು ಮಾರಾಟ ಮಾಡಿದರು. ಉಪ್ಪು ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಆ ಮೇಲೆ ಪೋಲೀಸರಿಗೆ ಶರಣಾಗಾತರಾಗಬೇಕೆಂದು ಜಿಲ್ಲಾ ಕಾಂಗ್ರೆಸ್ ಸಮಿತಿ ನಿರ್ಧರಿಸಿತು. ಸರೋಜರಿಗೆ ಈ ನಿರ್ಧಾರದಲ್ಲಿ ಏನೂ ಹುರುಳು ಕಾಣಲಿಲ್ಲ. ಆದ್ದರಿಂದ ಅವರು ಭೂಗತರಾದರು. ಈ ನಿರ್ಧಾರದಿಂದ ಜಿಲ್ಲಾ ಕಾಂಗ್ರೆಸ್ ನಾಯಕತ್ವಕ್ಕೆ ಕೋಪ ಬಂದರೆ, ಅವರಿಗೆ ಕಾಂಗ್ರೆಸ್ ನಾಯಕತ್ವದ ಬಗ್ಗೆ ಭ್ರಮನಿರಸನವಾಯಿತು. ಈ ಅವಧಿಯಲ್ಲಿ ಸ್ವಾಮಿ ವಿವೇಕಾನಂದರ ಸಹೋದರ ಡಾ|| ಭೂಪೇಂದ್ರನಾಥದತ್ತ ಅವರ ಪರಿಚಯವಾಯಿತು. ಡಾ|| ದತ್ತ ಜರ್ಮನಿಯಲ್ಲಿ ಕ್ರಾಂತಿಕಾರಿ ಚಟುವಟಿಕೆಯಲ್ಲಿ ತೊಡಗಿದ್ದರು. ಡಾ||ದತ್ತ ಅವರು ಸರೋಜರನ್ನು ಮಾರ್ಕ್ಸ್‌ವಾದಿ-ಲೆನಿನ್‌ವಾದ ಸಿದ್ಧಾಂತ ಪರಿಚಯ ಮಾಡಿಕೊಟ್ಟರು. ಅವರ ಜತೆ ಬಂಗಾಳದ ಮೂಲೆಮೂಲೆಗೂ ರಾಜಕೀಯ ಪ್ರಚಾರಕ್ಕೆ ಪ್ರವಾಸ ಮಾಡಿದರು. ಇಂತಹ ಭೇಟಿಯೊಂದರಲ್ಲಿ ದತ್ತ ಹೇಳಿದರು "ನೀವು ಮಾರ್ಕ್ಸ್‌ವಾದಿ ಲೆನಿನ್‌ವಾದಿ 'ಕ್ರಾಂತಿಕಾರಿಯಾಗಬೇಕೆಂದಿದ್ದರೆ, ಮುಜಫರ್ ಅಹಮೆದ್‌ರನ್ನು ಭೇಟಿಯಾಗಬೇಕು". ಆ ದಿನದಿಂದ ಮುಜಫರ್‌ರನ್ನು ಭೇಟಿಯಾಗಲು ಪ್ರಯತ್ನಿಸಿದರು. 'ಮೀರತ್ ಪಿತೂರಿ ಮೊಕದ್ದಮೆ'ಯಲ್ಲಿ ಆಪಾದಿತರಾಗಿ ಕಾ|| ಮುಜಫರ್‌ರ ಒಡನಾಡಿ ಕಾ||ಅಬ್ದುಲ್ ಹಲೀಂರಿಂದ ರಾಜಕೀಯ ನಿರ್ದೇಶನ ಪಡೆದರು. ಹಲೀಂ, ಸೋಮನಾಥ ಲಾಹಿರಿ, ಮತ್ತು ಡಾ|| ರಾಮೇನ್ ಸೇನ್‌ರ ಜತೆ ಸೇರಿ ಬಂಗಾಳದ ಆಗ ತಾನೆ ಬೆಳೆಯುತ್ತಿದ್ದ ಕಮ್ಯುನಿಸ್ಟ್ ಚಳುವಳಿಯ ಬೆಳವಣಿಗೆಗಾಗಿ ದುಡಿದರು. ಕಾರ್ಯಕರ್ತರ ಅಭಾವಮತ್ತು ಪಕ್ಷದ ಮೇಲಿನ ನಿಷೇಧದಿಂದಾಗಿ ಆಗ ಕಾಂಗ್ರೆಸ್ ಪಕ್ಷದ ಆಶ್ರಯದಲ್ಲಿ ಕೆಲಸಮಾಡಬೇಕಾಗಿತ್ತು. ಕಾರ್ಯಕರ್ತರ ಅಭಾವದಿಂದಾಗಿ ಆಗ ಅವರು ಎಲ್ಲಾ ಕ್ಷೇತ್ರಗಳಲ್ಲೂ ಕೆಲಸ ಮಾಡಬೇಕಾಗಿತ್ತು-ಟ್ರೇಡ್ ಯೂನಿಯನ್, ಕಿಸಾನ್, ವಿದ್ಯಾರ್ಥಿ ಮತ್ತಿತರ ರಂಗಗಳಲ್ಲಿ. ವಿವಿಧ ಕ್ಷೇತ್ರಗಳಲ್ಲಿ ಅವರ ದುಡಿದ ಅನುಭವವೇ ಆಮೇಲೆ ಪಕ್ಷದ ಕಾರ್ಯವಿಧಾನರೂಪಿಸುವಲ್ಲ, ಅವರಿಗೆ ತರಬೇತಿ ನೀಡಿದಂತಾಯಿತು. ಕಾ|| ಸರೋಜ್‌ರಿಗೆ ಕವಿ ಟಾಗೋರರ ನಿಕಟ ಸಂಪರ್ಕವಿತ್ತು. 1930ರಲ್ಲಿ ಆಗ ತಾನೇ ಸೋವಿಯತ್ ಒಕ್ಕೂಟದ ಭೇಟನಂತರ ಹಿಂದಿರುಗಿದ್ದ ಟಾಗೋರರರಿಗೆ ಯುವ ಕಮ್ಯುನಿಸ್ಟರ ಬಗ್ಗೆ ಆದರ, ಅಭಿಮಾನ ವಿತ್ತು. ಇಂತಹ ನಿಕಟಸಂಪರ್ಕದಿಂದಾಗಿಯೇ ಟಾಗೋರರು 30ರ ದಶಕದ ಕೊನೆಯಲ್ಲಿ ಸೋವಿ ಯತ್ ಮಿತ್ರರ ಸೊಸೈಟಿಯ ಅಧ್ಯಕ್ಷತೆಯನ್ನು ವಹಿಸುವಂತಾಯಿತು.

ಸರೋಜಮುಖರ್ಜಿಯವರಿಗೆ ರಾಜಕೀಯ ಜೀವನದ ಆರಂಭದಲ್ಲಿಯೇ, ಸಶಸ್ತ್ರ ಹೋರಾಟದಲ್ಲಿ ನಂಬಿಕೆಯಿದ್ದ ಉಗ್ರಗಾಮಿ ಸ್ವಾತಂತ್ರ ಹೋರಾಟಗಾರರೊಂದಿಗೆ ಸಂಪರ್ಕವಿತ್ತು. ಆದರೆ 'ವೈಯಕ್ತಿಕಭಯೋತ್ಪಾದನೆ' ಸ್ವಾತಂತ್ರ್ಯದ ಗುರಿ ಮುಟ್ಟಸದು ಎಂದು ಅವರಿಗೆ ಬೇಗ ಮನವರಿಕೆಯಾಯಿತು. ಆದರೆ ಅವರನಿಕಟವರ್ತಿಗಳಾಗಿದ್ದ ಬಿನೋಯ್ ಚೌಧುರಿ ಮತ್ತು ಅವರ ನಿಕಟವರ್ತಿಗಳಾಗಿದ್ದ ಬಿನೋಯ್ ಚೌಧುರಿ ಮತ್ತು ಹರೇಕೃಷ್ಣ ಕೋನಾರ್‌ರಂತಹವರು ಉಗ್ರಗಾಮಿಗಳೊಂದಿಗೆ ಇನ್ನು ಇದ್ದರು. ಅವರನ್ನು ಬಂಧಿಸಿ ಜೈಲಿನಲ್ಲಿಡಲಾಯಿತು ಅಥವಾ ಗಡಿಪಾರು ಮಾಡಲಾಯಿತು. ಸರೋಜ್ ಮುಝಫರ್‌ರನ್ನು ಭೇಟಿಯಾದಾಗ ಮುಝಫರ್ ಕೇಳಿದ ಮೊದಲ ಪ್ರಶ್ನೆ "ಭಯೋತ್ಪಾದನೆ ಸಿದ್ಧಾಂತವನ್ನು ಪೂರ್ತಿ ತ್ಯಜಿಸಿದ್ದೀಯೆಂದು ಆಶಿಸುತ್ತೇನೆ. ಅಂತಿಮವಾಗಿ ಹೆಚ್ಚಿನ ಈ 'ಭಯೋತ್ಪಾದಕರು' ಮಾರ್ಕ್ಸ್‌ವಾದ - ಲೆನಿನ್‌ವಾದ ಅಂಗೀಕರಿಸಿದರು. ಬಿಡುಗಡೆಯಾದಾಗ ಪಕ್ಷ ಸೇರಿದರು. ಪ್ರಮೋದ್ ದಾಸ್‌ಗುಪ್ತಾ., ಬಿನೋಯ್ ಚೌಧುರಿ, ಹರೇಕೃಷ್ಣ ಕೋನಾ[r] ಇವರಲ್ಲಿ ಪ್ರಮುಖರು.

ಶಾಲಾದಿನಗಳಲ್ಲಿ ಸರೋ[ಜ್] ಮುಖರ್ಜಿ ಅತ್ಯಂತ ಪ್ರತಿಭಾವ[ಂತ] ವಿದ್ಯಾರ್ಥಿ. ಆದರೆ ಜೈಲುವಾಸ ಅ[ವರ] ಶಿಕ್ಷಣಕ್ಕೆ ತಡೆಯುಂಟುಮಾಡಿ[ತು]. ಬಿ.ಎ., ಎಂ.ಎ. ಹಾಗೂ ಕಾನೂ[ನು] ಪರೀಕ್ಷೆಗಳನ್ನು ಅವರು ಜೈಲಿನಿಂದ[ಲೇ] ಪಾಸು ಮಾಡಿದರು. ಆತ ಪ್ರತಿಭಾವ[ಂತ] ಪತ್ರಕರ್ತರೆನ್ನುವುದು ಅವರ ವ್ಯಕ್ತಿತ್ವ[ದ] ಇನ್ನೊಂದು ಗಮನಾರ್ಹ ಅಂಶ. ಈ[...] ಪಶ್ಚಿಮ ಬಂಗಾಳ ರಾಜ್ಯ ಸಮಿತಿ[ಯ] ವಾರಪತ್ರಿಕೆ "ಸ್ವಾಧೀನತಾ"ದ ಉ[...] ಸಂಪಾದಕರಾಗಿದ್ದರು. ಪಕ್ಷದ ಬಂಗಾ[ಳಿ] ದೈನಿಕ 'ಗಣಶಕ್ತಿ'ಯ ಸಂಪಾದಕರ[ಾಗಿ] ನಂತರ ಮುಖ್ಯಸಂಪಾದಕರಾದರು.

ಪಕ್ಷ ಕಟ್ಟುವ ಕೆಲಸ ನಿರ್ವಹಿ[ಸುವ]ವಲ್ಲಿ ಅವರು ಲೇಖನಿಯನ[್ನು] ಹಿಡಿದವರು. ಇತ್ತೀಚೆಗೆ ನೆನಪುಗಳನ[್ನು] ಹೊಸ ಪೀಳಿಗೆಗೆ ತಿಳಿಸುವ ಎರಡು ಕೃ[ತಿ]ಗಳನ್ನು ರಚಿಸಿದರು. ಅವರ ಲೇಖ[ನ] ಶೈಲಿ ಸರಳ ಮತ್ತು ಸುಲಲಿತವಾಗಿತ್ತು.

ಅವರ ಜ್ಞಾಪಕಶಕ್ತಿ ಬಹು ವಿಖ್ಯಾ[ತ]. 1960 ರ ದಶಕದವರೆಗೆ ಪಕ್ಷದ ಸದ[ಸ್ಯ] ಸಂಖ್ಯೆ ಸಾವಿರಗಳಲ್ಲಿದ್ದಾಗ ಮುರು[...]ಫರ್, ಪ್ರಮೋದ್ ದಾಸ್‌ಗುಪ್ತರಂ[ತೆ] ಸರೋಜ್‌ಗೂ ಪ್ರತಿಯೊಬ್ಬ ಸಂಗಾತಿಯ[] ಹೆಸರು ನೆನಪಿರುತ್ತಿತ್ತು.

ಅವರು ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟದಲ್ಲಿ ಆರು ವರ್ಷ[...] ಸ್ವಾತಂತ್ರನಂತರವೂ ಜನರ ಹೋರಾ[ಟ]ಗಳಲ್ಲಿ ಐದು ವರ್ಷ ಜೈಲಿನಲ್ಲಿ ಕ[ಳೆ]ದರು. ಐದುವರ್ಷಭೂಗತರಾಗಿದ್ದರು.

1939 ರಿಂದ 1943 ರ ವರೆ[ಗೆ] ಅವಿಭಜಿತ ಪಕ್ಷದ ಕಲ್ಕತ್ತಾ ಜಿಲ್ಲಾ[] ಕಾರ್ಯದರ್ಶಿಯಾಗಿದ್ದರು.

1964 ರಲ್ಲಿ ಪರಿಷ್ಕರಣವಾದ[ದ] ವಿರುದ್ಧ ಹೋರಾಟದ ಅಂಗವಾ[ಗಿ] ಅವಿಭಜಿತ ಪಕ್ಷದ ರಾಷ್ಟ್ರೀಯ ಮಂಡಳಿಯ ಸಭಾ ತ್ಯಾಗ ಮಾಡಿ[ದ] 32 ಸದಸ್ಯರಲ್ಲಿ ಇವರೂ ಒಬ್ಬರು.



ದಣಿವರಿಯದ ಹೋರಾಟಗಾರ

ರಾಷ್ಟ್ರದ ರಾಜಕೀಯ ರಂಗದಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವ ಪಶ್ಚಿಮ ಬಂಗಾಳದ ಎಡರಂಗಕ್ಕೆ ಸರೋಜ್ ಮುಖರ್ಜಿ ಮತ್ತು ಜ್ಯೋತಿಬಸು ಎರಡು ಕಣ್ಣುಗಳಿದ್ದಂತೆ ಎಂದು ವರ್ಣಿಸಲಾಗುತ್ತಿತ್ತು. ಭಾರತ ಕಮ್ಯುನಿಸ್ಟ್ ಚಳವಳಿಯ ದಣಿವರಿಯದ ಹೋರಾಟಗಾರರನ್ನು ದಿಟ್ಟ ಮುಂದಾಳುವನ್ನು ಕಳೆದುಕೊಂಡಂತಾಗಿದೆ. ಸರೋಜ್ ಅಗಲಿಕೆ ಭರಿಸಲಾರದ ನಷ್ಟ.

— ಸಂಯುಕ್ತ ಕರ್ನಾಟಕ ಸಂಪಾದಕೀಯ

ಮಾಹಿತಿ ತಿಳಿಯುವ ಹಕ್ಕು

ಕಳೆದ ನಾಲ್ಕು ದಶಕಗಳಲ್ಲಿ ನಾಗರಿಕನ ತಿಳಿಯುವ ಹಕ್ಕನ್ನು ನಾಶಗೊಳಿಸಲಾಗಿದೆ. ಕೇಂದ್ರ ಹಾಗೂ ರಾಜ್ಯಸರ್ಕಾರಗಳು ಮಾಹಿತಿ ತಿಳಿಯುವ ಹಕ್ಕನ್ನು ಗೌರವಿಸಬೇಕು. ಈ ಮೂಲಭೂತ ಹಕ್ಕನ್ನು ಜಾರಿ ಮಾಡುವುದರ ಮೂಲಕ ನಾಗರಿಕನ ಹಕ್ಕನ್ನು ರಕ್ಷಿಸಬೇಕು.

— ಟೈಂಸ್ ಆಫ್ ಇಂಡಿಯಾ

ಸಾಹಿತ್ಯ ಸಾಧನ

ಮಾನವರ ನಡುವೆ ಉತ್ತಮ ಬಾಂಧವ್ಯವನ್ನು ಉಂಟು ಮಾಡುವುದಕ್ಕಾಗಿ ಉಪಯೋಗವಾಗಬೇಕಾಗಿದ್ದ ಸಾಹಿತ್ಯ ಮಾನವನನ್ನು ಬೇರ್ಪಡಿಸುವ ಸಾಧನವಾಗಬಾರದು.

— ಉದಯವಾಣಿಯಲ್ಲಿ ಓದುಗರ ಪತ್ರ

ತಾರತಮ್ಯ

ಹೆಣ್ಣು ಮಕ್ಕಳು ಹಲವು ರೀತಿಯಲ್ಲಿ ತಾರತಮ್ಯಕ್ಕೆ ಒಳಗಾಗಿದ್ದಾರೆ. ಒಂದು ಅಧ್ಯಯನದ ಪ್ರಕಾರ ಹೆಣ್ಣು ಮಕ್ಕಳಿಗೆ ಅಗತ್ಯವಾದ ಒಟ್ಟು ಪೌಷ್ಟಿಕಾಂಶದಲ್ಲಿ ಶೇ. 28 ರಷ್ಟು ಮಾತ್ರ ದೊರೆಯುತ್ತದೆ. ಗಂಡು ಮಕ್ಕಳಿಗೆ ಶೇ 72 ರಷ್ಟು ದೊರೆಯುತ್ತಿದೆ. ಬಾಲ ಕಾರ್ಮಿಕರಲ್ಲೂ ಹೆಣ್ಣು ಮಕ್ಕಳೇ ಹೆಚ್ಚು.

— 'ಸಂಕೇತ' ಲೇಖನದಿಂದ

ಮಂಡೇಲ ಕರೆ

ಆಫ್ರಿಕದ ಕರಿಯರು ಶಸ್ತ್ರಾಸ್ತ್ರಗಳನ್ನು ತ್ಯಜಿಸಬೇಕು ಎಂದು ಕರೆ ನೀಡಲು ಕರಿಯರ ಮೇಲೆ ಬಲಪ್ರಯೋಗಿಸಿದ ಸರ್ಕಾರಕ್ಕೆ ಹಕ್ಕಿಲ್ಲ. ಬಂದೀಖಾನೆಯಲ್ಲಿರುವವರು ಸಂಧಾನದ ಮಾತಾಡಲು ಸಾಧ್ಯವಿಲ್ಲ. ಸ್ವತಂತ್ರರು ಮಾತ್ರ ಮಾತಾಡಬಲ್ಲರು.

— ನೆಲ್ಸನ್ ಮಂಡೇಲ

ಗಮನ ಸೆಳೆದ ಗ್ರಾಮ ಯೋಜನೆ

ಕೇರಳದಲ್ಲಿ ಯುವಜನರ ಕಾರ್ಯಕ್ರಮವೊಂದು ಈಗ ಎಲ್ಲರ ಗಮನ ಸೆಳೆದಿದೆ. ಡಿ.ವೈ.ಎಫ್.ಐ. ಕಾರ್ಯಕರ್ತರು ವಿನೂತನ ಕಾರ್ಯಕ್ರಮ ಆರಂಭಿಸಿದ್ದಾರೆ. ಸಾಯವಾಗಿ ಜಾರಿಯಾದಲ್ಲಿ ಈ ಕಾರ್ಯಕ್ರಮ ಒಳ್ಳೆ ಪ್ರತಿಫಲ ನೀಡುತ್ತದೆ. ಜನರ ಮೆಚ್ಚುಗೆ ಗಳಿಸುತ್ತಾರೆ.

— 'ಪ್ರಜಾವಾಣಿ' ವಿಶೇಷ ಲೇಖನದಲ್ಲಿ

Printed and published by P.Ramachandra Rao on behalf of Communist party of India (Marxist), Karnataka State Committee L-56, K.V.Temple Street, Sultanpet, Bangalore - 560 053, Phone No. 75331. Editor: P.RAMACHANDRA RAO Managerial Office: C/o Kriya Prakashana, Shobha Lodge Complex, 5th main Road, Gandhinagar, Bangalore - 560 009